Sri S. SIVAPPA.—He has raised a very important issue in the sense that the Chief Minister made a policy statement yesterdy at the officers' meeting.

Sri S. NIJALINGAPPA.--Such objections are coming up in the House very often. Immediately I came from Delhi I gave information to the Press which had already appeared. There is nothing new. The information given was that so much quantity would be given to Mysore and that so much quantity would be required, and all that, as a result of the decision taken at the Chief Ministers' Conference. There is nothing new. I did not reveal any question of policy. Regarding yesterday's Conference of the Deputy Commissioners, I told them what decision we had taken at Delhi and what the position was.

ಗ್ರಾಮಾಂತರ ಪ್ರದೇಶದಲ್ಲಿರುವ ಹಳ್ಳಿಗಾಡಿನ ಜನಗಳು ಸರಕಾರ ಈಗಿನ ಅಭಾವ ಪರಿಸ್ಥಿತಿಯ ಬಗ್ಗೆ ಏನು ಮಾಡುತ್ತಿದೆಯೆನ್ನುವುದನ್ನು ವರ್ತಮಾನ ಪತ್ರಿಕೆಗಳಿಂದ ತಿಳಿಯಲು ಅತುರರಾಗಿರುತ್ತಾರೆ.

The people had to know what they have got to know. It is to allay the fears in the mind of the public. The decision was already there and the people throughout the country must know how much food comes from America, how levy and procurement policy have been lifted. I have not laid out policy for the Mysore State as such. I did not do any disrespect to this House; I have the greatest respect. I know what is agitating the minds of the public and they must know what is decided. Therefore, I do not think these objections could be raised often.

Sri S. SIVAPPA.—The Chief Minister stated that maximum prices of food would be fixed and also decisions taken. When we demanded from the Chief Minister......

Mr. SPEAKER.—I will give a ruling later.

MOTION ON THE SCARCITY CONDITIONS PREVAILING IN THE STATE AND RELIEF MEASURES ADOPTED AND TO BE ADOPTED.

Motion to consider

(Debate continued)

ಶ್ರೀ ಹೆಚ್. ಆರ್. ಕೇಶವ ಮೂರ್ತಿ (ಗುಂಡಸಿ).—ಅಧ್ಯಕ್ಷರೇ, ಆಹಾರ ಧಾನ್ಯಗಳ ಹಂಚುವಿಕೆಯಲ್ಲಿ ನಮ್ಮ ಹಿಂದಿನ ಅನುಭವಗಳನ್ನು ನೋಡಿದರೆ ಬಹಳ ಅವ್ಯವಸ್ಥೆಗಳಿದ್ದುವು ಎನ್ನುವುದು ಗೊತ್ತಾಗುತ್ತದೆ. ಆಹಾರ ಧಾನ್ಯಗಳನ್ನು ಎಲ್ಲೆಲ್ಲಿ ಶೇಖರಣೆ ಮಾಡಿದ್ದರೋ ಅಲ್ಲೆಲ್ಲಾ ಒಂದು ತರದ ಕುಟ್ಟೆ ಹುಳಗಳು ಬಂದು ಧಾನ್ಯಗಳೆಲ್ಲಾ ಹಾಳಾಗಿ ಹೋದವು. ಅಂತಹ ಹುಳು ತಿಂದ ದವಸಗಳನ್ನೇ ಗ್ರಾಮಾಂತರ ಪ್ರದೇಶಗಳಲ್ಲಿನ ಜನರಿಗೆ ಆಗ ಹಂಚಿದರು. ಆಗ ಅವರು ಹೊಟ್ಟೆಗಿಲ್ಲದುದರಿಂದ ಅಂತಹ ಹುಳಿತ ದವಸಗಳನ್ನೇ ತಿನ್ನಬೇಕಾಗಿ ಬಂತು. ಆದರೆ ಪಟ್ಟಣಗಳಲ್ಲಿದ್ದವರು ಅದನ್ನು ಸರಿಮಾಡಿಸಿಕೊಂಡು ಉಪಯೋಗಮಾಡಿಕೊಂಡರು. ಹಳ್ಳಿಗಳಲ್ಲಿದ್ದ ಜನರಿಗಾಗಲಿಲ್ಲ. ಆದುದರಿಂದ ಸರಕಾರದವರು ಈಗ ಆಹಾರ ಧಾನ್ಯಗಳನ್ನು ಶೇಖರಣೆ ಮಾಡುತ್ತಿರುವುದರಿಂದ ಇಂತಹ ಸನ್ನಿವೇಶಗಳು ಈಗ ಉದ್ಭವಿಸ ಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಆಹಾರ ಧಾನ್ಯಗಳನ್ನು ಶೇಖರಣೆ ಮಾಡುವಂತಹ ಮಧ್ಯಮವರ್ಗದ ರೈತರಿಗೆ ಫ್ಯಾಮಿನ್ ರಿಲೀಫ್ ಲೋನು ಎನ್ನುವ ಹೊಸ ರೀತಿಯಾದ ಸಾಲಗಳನ್ನು ಕೊಟ್ಟು ಸಹಾಯ ಮಾಡಬೇಕು. ಇದರಿಂದ ಆ ರೈತರು ನೂರಾರು ರೂಪಾಯಿಗಳ ದವಸವನ್ನು ಕೊಳ್ಳಲು, ದನಕರುಗಳಿಗೆ ಹುಲ್ಲನ್ನು ಕೊಂಡುಕೊಳ್ಳಲು ಸಹಾಯವಾಗುತ್ತದೆ.

ಇನ್ನು ಆಹಾರದ ದವಸಗಳ ವಿತರಣೆಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಹಿಂದೆ ಗ್ರಾಮಾಂತರ ಪ್ರದೇಶಗಳಿಗೆ ಆಹಾರದವಸಗಳನ್ನು ಸರಕಾರದವರು ಕೊಟ್ಟಾಗ, ಅದು ದಾರಿಯ ಮಧ್ಯದಲ್ಲೇ ಮಾಯವಾಗಿ ಕಾಳಸಂತೆಗೆ ಹೋಗುತ್ತಿದ್ದುದನ್ನು ನಾವೆಲ್ಲಾ ನೋಡಿದ್ದೇವೆ. ಈಗ ಅದಕ್ಕೆ ಅವಕಾಶವಿಲ್ಲದಂತೆ ಸರಕಾರ ತಕ್ಕ ಪ್ರಯತ್ನಗಳನ್ನು ನಡೆಸಬೇಕು, ಮತ್ತು ಕಟುತರವಾದ ಉಗ್ರ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಜನರಿಗೆ ಸರಿಯಾಗಿ ಆಹಾರ ದವಸಗಳು ವಿತರಣೆಯಿಂದ ಹಂಚುವ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಸರಕಾರದವರು ಒಂದು ವಿಜಿಲೆನ್ಸ್ ಕಮಿಷನ್ನು ಎನ್ನುವುದನ್ನು ನೇಮಕ ಮಾಡಿಕೊಳ್ಳಬೇಕು ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ಕಂಟ್ರೋಲು ಕಾಲದಲ್ಲಿ ಏನೇನು ನಡೆಯಿತು ಎನ್ನುವ ನಿದರ್ಶನಗಳು ನಮ್ಮ ಮುಂದೆ ಈಗಾಗಲೇ ಇವೆ. ಆಗ ಕಂಟ್ರೋಲು ಇದ್ದಾಗ ಕೆಲವು ಕಡೆಗಳಲ್ಲಿ ನೂರಾರು ಜನ ತಮ್ಮ ಮನೆಯಲ್ಲಿ ಇದ್ದಾರೆಂದು ಹೇಳಿ ದವಸಗಳನ್ನು ಹೆಚ್ಚಿಗೆ ಪಡೆದುಕೊಂಡು ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದ ನಿದರ್ಶನಗಳೂ ನಮ್ಮ ಮುಂದೆ ಇವೆ. ಆದ್ದರಿಂದ ದೊಡ್ಡ ಕಂಟ್ರಾಕ್ಟರುಗಳಿಗೆ ಆಗ ಹೆಚ್ಚಿನ ದವಸಗಳು ಹೋಗುತ್ತಿದ್ದವು. ಅಂತಹುದಕ್ಕೆ ಈಗ ಅವಕಾಶವಿಲ್ಲದಂತೆ ಏರ್ಪಾಡು ಮಾಡಬೇಕು. ಇದರಲ್ಲಿ ಯಾವುದೇ ಪಾರ್ಟಿಯವರು ತಪ್ಪು ಮಾಡಿರಲಿ ಅಥವಾ ಯಾವ ಅಧಿಕಾರಿಗಳೇ ತಪ್ಪು ಮಾಡಿದ್ದರೂ ಅಂತಹವರಿಗೆ ಸರಿಯಾದ ಶಿಕ್ಷೆ ವಿಧಿಸುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಹಾಸನ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. ಹಾಸನ ಜಿಲ್ಲೆಯಲ್ಲಿ ಘೋರವಾದ ಸ್ಕೇರ್ಸಿಟಿ ಕಂಡಿಷನ್ನುಗಳು ಇವೆ. ಆದುದರಿಂದ ಇದನ್ನು ಮೈದಾನದ ಜಿಲ್ಲೆ ಎಂದು ಮಾಡಿ ಅದೇ ರೀತಿ ಎಲ್ಲ ಲೆಕ್ಕ ಪತ್ರಗಳಲ್ಲೂ ಬದಲಾವಣೆ ಮಾಡಬೇಕೆಂದು ಕೇಳುತ್ತೇನೆ. ನಮ್ಮ ಹಾಸನ ಜಿಲ್ಲೆಯ ಪೂರ್ವ ಭಾಗದಲ್ಲಿ ಬಹಳ ಘೋರವಾದ ಕ್ಷಾಮ ಇದೆ. ತುಮಕೂರು ಜಿಲ್ಲೆಯ ಕೆಲವು ಕಡೆಗಳಲ್ಲಿ ಅಲ್ಪ ಸ್ವಲ್ಪ ಕ್ಷಾಮ ಇರಬಹುದು. ಆದರೆ ನಮ್ಮ ಜಿಲ್ಲೆಯಲ್ಲಿರುವ ಆಲೂರು ಮತ್ತು ಬೇಲೂರುಗಳಲ್ಲಿ ಈಮಧ್ಯೆ ಮಳೆ ಇಲ್ಲದೆ ಅಲ್ಲಿ ಬೆಳೆಯಾಗಲಿಲ್ಲ. ಆ ಕಡೆಗೆ ಸರಕಾರ ಸಾಕಷ್ಟು ಸಹಾಯಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿ ಕೆಲವು ತಾಲ್ಲೂಕುಗಳಿಗೆ ಲ್ಯಾಂಡು ಇಂಪ್ರೂವ್‌ಮೆಂಟು ಲೋನಿಗಾಗಿ ಒಂದೊಂದು ಲಕ್ಷದಷ್ಟು ಸಹಾಯ ಮಾಡಬೇಕು ಮತ್ತು ಪಿ. ಡಬ್ಲ್ಯು. ಡಿ. ಇಲಾಖೆಯವರು ರೂರಲ್ ಕಮ್ಯೂನಿಕೇಷನ್ನುಗಳಿಗಾಗಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಇದರಿಂದ ಕೆಲವು ಜನಕ್ಕೆ ಕೂಲಿಯಾದರೂ ಸಿಕ್ಕುತ್ತದೆ. ಅಂತೂ ಒಟ್ಟಿನಲ್ಲಿ ಆಹಾರ ಧಾನ್ಯಗಳ ವಿತರಣೆ ಸರಿಯಾಗಿ ನಡೆಯಬೇಕು ಮತ್ತು ದನಕರುಗಳಿಗೆ ಹುಲ್ಲನ್ನು ಸರಕಾರದವರು ಬೇಗನೆ ಸರಬರಾಜು ಮಾಡಬೇಕೆಂದು ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ಸಿದ್ದವ್ವ ಮೈಲಾರ್ (ಬ್ಯಾಡಗಿ).—ಅಧ್ಯಕ್ಷರೇ, ನಾನು ಬರಗಾಲದ ವಿಚಾರವಾಗಿ ಮಾತನಾಡುತ್ತಾ ಸರ್ಕಾರಕ್ಕೆ ನನ್ನ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಈಗೆಷ್ಟೋ ಕಾಲದಿಂದ ನಮ್ಮಲ್ಲಿ ಬರಗಾಲ ಬಂದು ಜನರಿಗೆ ತುಂಬಾ ಕಷ್ಟನಷ್ಟಗಳುಂಟಾಗಿವೆ. ಕಳೆದೆರಡು ವರ್ಷಗಳಿಂದ ಧಾರವಾಡ ಜಿಲ್ಲೆಯಲ್ಲಿ ಬರಗಾಲ ಬಂದು ಹಾವೇರಿ, ರಾಣಿಬೆನ್ನೂರು ಮತ್ತು ಹಿರೇಕೆರೂರು ತಾಲ್ಲೂಕುಗಳಲ್ಲಿ ಒಂದು ಕಡೆ ಅರ್ಧ ಬೆಳೆಯಾದರೆ ಇನ್ನೊಂದು ಕಡೆ ಸುತರಾಂ ಬೆಳೆಯೇ ಆಗಿರುವುದಿಲ್ಲ. ಹೋದ ವರ್ಷ ರಾಣಿಬೆನ್ನೂರು, ಹಿರೆಕೆರೂರು ಮತ್ತು ಹಾವೇರಿ ಹಾಗೂ ಬ್ಯಾಡಗೀ ತಾಲ್ಲೂಕುಗಳಲ್ಲಿ ಸುತರಾಂ ಬೆಳೆಯಾಗದೆ ಜನ ಕಂಗೆಟ್ಟು ಹೋದರು. ಮಲೆನಾಡು ಪ್ರದೇಶದಲ್ಲಿ ಮಾತ್ರ ಅಲ್ಪಸ್ವಲ್ಪ ಬೆಳೆಯಾಗಿದೆ. ಹೀಗೆ ಪೀಕು ಬಾರದೆ ಹೋದ್ದರಿಂದ ಜನರು ತಮ್ಮ ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ನೀರಾವರಿಯ ಅನುಕೂಲವಿದ್ದ ಕಡೆಗೆ ಹೊರಟು ಹೋಗಿದ್ದಾರೆ. ಈ ವಿಚಾರ ನಮ್ಮ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಹೋದ ವರ್ಷ ಜನರಿಗೆ ಆ ತಕಾವಿ ಸಾಲ ಸರಿಯಾಗಿ ಸಿಕ್ಕದೆ ಜನರು ಜಾತ್ರೆಗೆ ಹೋಗುವಂತೆ ಊರನ್ನು ಬಿಟ್ಟು ಹೋದರು. ಈ ವಿಚಾರ ಎಲ್ಲರಿಗೂ ಗೊತ್ತಿದೆ. ನಮ್ಮ ತಾಲ್ಲೂಕಿಗೆಷ್ಟು ತಕಾವಿ ಹಣ ಸಿಗಬೇಕಾಗಿತ್ತೋ ಅಷ್ಟು ಹೋದ ವರ್ಷವೂ ಸಿಗಲಿಲ್ಲ. ಸಿಕ್ಕಿದ ಹಣವನ್ನಾದರೂ ಒಂದು ವಿತರಣೆಯಿಂದ ಹಂಚಿಕೆ ಮಾಡಲಿಲ್ಲ. ಹಿಂದೆ ಬಿಜಾಪುರದಿಂದ ನಮ್ಮಲ್ಲಿಗೆ ವರ್ಗವಾಗಿ ಬಂದ ತಹಶೀಲ್ದಾರರು—ಈಗಿನವರೇನೋ ಸರಿಯಾಗಿ ಕೆಲಸಮಾಡುತ್ತಿದ್ದಾರೆ, ಅವರು ಮಾತ್ರ ತಮ್ಮ ಕೈವಾಡಮಾಡಿಕೊಂಡೇ ಹೋದರು. ಆದರೆ ನಾನೀಗ ಆ ವಿಚಾರದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಇನ್ನಾದರೂ ಹಾಗಾಗದಂತೆ ರೈತರಿಗೆ ಎಲ್ಲ ಸೌಲತ್ತುಗಳೂ ಸರಿಯಾಗಿ ವಿಲೇವಾರಿಯಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ದಿವಸ ನಮ್ಮಲ್ಲಿ ಜನರು ಅಡವಿಯಲ್ಲಿ ಸಿಗತಕ್ಕ ಗೆಡ್ಡೆ ಗೆಣಸುಗಳನ್ನು ಋಷಿಗಳಂತೆ ಹೆಚ್ಚಿ ತಿಂದು ಜೀವನ ಮಾಡುತ್ತಿದ್ದಾರೆ. ಇದನ್ನು ನಮ್ಮ ಸರ್ಕಾರಹೇಗಾದರೂಮಾಡಿ

(ಶ್ರೀಮತಿ ಸಿದ್ದವ್ವ ಮೈಲಾರ್)

ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಈ ಕೂಡಲೇ ನಮ್ಮಲ್ಲಿಯ ಬಡಜನರ ಸಲುವಾಗಿ ಅವರಿಗೆ ನೀರಾವರಿ ಸೌಲಭ್ಯಗಳನ್ನೂ, ತಕಾವಿ ಸಾಲಗಳನ್ನೂ ಮತ್ತು ರಸ್ತೆ ಕಾಂಗಾರಿ ಇತ್ಯಾದಿ ಗಳನ್ನು ಕೈಗೊಂಡು ಅವರಿಗೆ ಕೂಲಿ ಕೆಲಸ ಸಿಗುವಂತೆ ಪ್ರಯತ್ನ ಮಾಡಬೇಕು. ಹೀಗಾದರೆ ಅವರಿಗೆ ಒಂದಾರುತಿಂಗಳ ಅನ್ನವಾದರೂ ಸಿಕ್ಕೀತು. ಮುಂದೆ ಮಳೆ ಬಿದ್ದರೆ ಅವರು ಹೇಗೋ ಜೀವನ ಮಾಡಿಕೊಳ್ಳುತ್ತಾರೆ. ಅಲ್ಲಿಯವರೆಗಾದರೂ ಸರ್ಕಾರದವರು ಅವರಿಗೆ ಸಾಕಷ್ಟು ಕೂಲಿಯ ಕೆಲಸಗಳನ್ನು ಒದಗಿಸಲೇ ಬೇಕು. ಇನ್ನು ರಾಣಿಬೆನ್ನೂರು, ಹಾವೇರಿ, ಬ್ಯಾಡಗೀ ಮತ್ತು ಹಿರೇಕೆರೂರು ತಾಲ್ಲೂಕುಗಳ ಕೆಲವು ಭಾಗದಲ್ಲಿ ಮಳೆಯಾಗದೆ ಅಲ್ಲಿ ಯಾವ ಬೆಳೆಯೂ ಆಗಿಲ್ಲ. ಹಾಗಿದ್ದರೂ ಕೆಲವು ತಕರಾರುಗಳನ್ನು ಅಲ್ಲಿಯ ಅಧಿಕಾರಿಗಳು ಹಾಕಿಕೊಂಡು ಅಲ್ಲಿ ಬೆಳೆಯಾಗಿದೆ ಯೆಂದು ಹೇಳುತ್ತಿರುವುದು ಸರಿಯಲ್ಲ. ನಮ್ಮ ಧಾರವಾಡ ಜಿಲ್ಲೆಯಲ್ಲಿ, ಈಗ ಬಹಳ ಕಡೆ ಬರ ಬಂದಿದೆ. ಇವರಿಗೆ ಸರ್ಕಾರದವರು ಎಲ್ಲಾ ಸೌಲತ್ತುಗಳನ್ನೂ ಒದಗಿಸಿಕೊಟ್ಟು ಅವರಿಗೆ ಅನ್ನಕ್ಕೆ ಮಾರ್ಗಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಾನು ಬರಗಾಲದ ವಿಚಾರದಲ್ಲಿ ಸಾಧಾರಣವಾಗಿ ಹೋದ ವರ್ಷ ಕೂಡ ಮಾತನಾಡಿದ್ದೇನೆ, ಅಷ್ಟೇ ಏಕೆ ಪ್ರತಿ ವರ್ಷವೂ ಮಾತನಾಡುತ್ತಲೇ ಇರುವುದರಿಂದ ನಾನೀಗ ಇದರ ವಿಚಾರದಲ್ಲಿ ಅಷ್ಟು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹಿಂದಿನ ವರ್ಷ ಮಂತ್ರಿಗಳು ಸ್ಥಳಕ್ಕೆ ಬಂದು ನೋಡುವು ದಿಲ್ಲವೆಂಬ ಒಂದು ಆಕ್ಷೇಪಣೆಯನ್ನೆತ್ತಿದ್ದೆ. ಆದರೆ ಈ ವರ್ಷ ಅದಕ್ಕೆ ಅವಕಾಶವಿಲ್ಲ. ಆ ಒಂದು ಕೊರತೆ ತಪ್ಪಿದೆ. ನಾನು ಹೇಳಿದ್ದಕ್ಕೆ ಮಾನ್ಯ ಸಚಿವರು ದೊಡ್ಡ ಮನಸ್ಸುಮಾಡಿ ಅಲ್ಲಿಗೆ ಬಂದು ಪರಿಸ್ಥಿತಿಯೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿಕೊಂಡು ಬಂದಿದ್ದಾರೆ. ಆದುದರಿಂದ ನಾನೀಗ ಅವರಿಗೆ ನನ್ನ ತಾಲ್ಲೂಕಿನ ಬಗ್ಗೆ ಅಷ್ಟೇನೂ ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಆದಾಗ್ಯೂ ಹೇಳಲೇಬೇಕು. ಇಲ್ಲ ವಾದರೆ ಅಲ್ಲಿ ಇತ್ತೀಚೆಗೇನಾದರೂ ಮಳೆ ಬಿದ್ದಿದೆಯೋ ಏನೋ ಎಂಬ ಒಂದು ಭಾವನೆ ಬರಬಹುದು. ಅದಕ್ಕೆ ಅವಕಾಶವಿರಬಾರದೆಂದು. ನಾನು ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಗಳು ಮಾತನಾಡುವಾಗ ಗುಡ್ ಇಯರ್, ಬ್ಯಾಡ್ ಇಯರ್ ಇಂಡಿಫರೆಂಟ್ ಇಯರ್ ಎಂಬುದಾಗಿ ಕೆಲವು ಅಂಶಗಳನ್ನು ಒತ್ತಿ ಹೇಳಿದರು. ಆದರೆ ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅವರು ಹೇಳಿದ ಯಾವುದೊಂದು ಮಾತೂ ಅಲ್ಲಿಗೆ ಅನ್ವಯಿಸುವುದಿಲ್ಲ. ನಾವು ಅಲ್ಲಿ ಕಳೆದ 13 ವರ್ಷಗಳಿಂದ ಒಂದೇ ಸಮನಾಗಿ ಕಷ್ಟಪಡುತ್ತಿದ್ದೇವೆ. ಅವರು ಹೇಳತಕ್ಕ ಟೇಬಲ್ ನಮ್ಮ ತಾಲ್ಲೂಕಿಗೆ ಅನ್ವಯವಾಗುತ್ತೆಂಬುದು ಸುಳ್ಳು ಮಾತು.

ಅಧ್ಯಕ್ಷರು.—'ಸುಳ್ಳು' ಎಂಬ ಶಬ್ದವನ್ನು ತಾವು ಉಪಯೋಗ ಮಾಡಬಾರದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಹಾಗಾದರೆ ಅವರು ಹೇಳತಕದ್ದು ಸತ್ಯಕ್ಕೆ ದೂರವಾದ್ದು ಎಂದು ಅಷ್ಟು ಮಾತ್ರ ಹೇಳುತ್ತೇನೆ. ಅವರು ಹೇಳಿದಂಥ ಟೇಬಲ್ ಅಲ್ಲಿಗೆ ಅನ್ವಯಿಸುವುದಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಕಾನ್ಸ್ಟಿಟ್ಯುಯೆನ್ಸಿಗೆ ಬಂದಿದ್ದಾಗ್ಗೆ ಅಲ್ಲಿಯ ಅಧಿಕಾರಿಗಳಿಗೆ ಅನೇಕ ಸಜೆಷನ್‌ಗಳನ್ನು ಕೊಟ್ಟು ಬಂದರು. ನಮ್ಮಲ್ಲಿಗೆ ತಕಾವಿಗಾಗಿಯೂ ಮತ್ತು ಲ್ಯಾಂಡ್ ಇಂಪ್ರೂವ್ ಮೆಂಟ್ ಸಾಲಕ್ಕಾಗಿಯೂ ಈಗೇನು ಹಣವನ್ನೊದಗಿಸಿದ್ದಾರೆ ಅದು ಅಲ್ಲಿಗೆ ಖಂಡಿತ ಸಾಲದು. ಆ ದಿವಸ ಮಂತ್ರಿಗಳು ನನುಗೆ ರಿಲೀಫ್ ಕಾಂಗಾರಿಗಳಿಗೆ ಹಣ ಸಾಲದೆ ಬಂದರೆ, ಸಾಲದ ರೂಪದಲ್ಲಿ ಹಣವನ್ನು ಜನಗಳಿಗೆ ಕೊಡಿ ಎಂದು ಹೇಳಿದರು ಅಷ್ಟೆ, ಅಲ್ಲದೆ ಅಲ್ಲಿಯ ರೈತರಿಂದ ಕಂದಾಯವನ್ನು ವಸೂಲ್ಮಾಡುವುದು ಬೇಡ ಎಂದು ಅಲ್ಲಿರತಕ್ಕ ಅಧಿಕಾರಿಗಳಿಗೆ ತಿಳಿಸಿದ್ದರೂ, ಅಲ್ಲಿ ಕಂದಾಯವನ್ನು ಜನರಿಂದ ವಸೂಲ್ಮಾಡುವುದಿನ್ನೂ ತಪ್ಪಿಲ್ಲ. ನಾನು ಮಂತ್ರಿಗಳಿಗೆ ಈ ವಿಚಾರದಲ್ಲಿ ಪತ್ರ ಬರೆದಿದ್ದೆನು. ಅದಕ್ಕವರು ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಿನ್ಯೂಟನ್ನು ಕಳುಹಿಸಿದ್ದೇನೆಂದು ನನಗೆ ಪತ್ರ ಬರೆದಿದ್ದಾರೆ. ನಾನು ಈ ಹಿಂದೆ ಪ್ರಶ್ನೋತ್ತರದ ಕಾಲದಲ್ಲಿ ಈ ವಿಚಾರವನ್ನು ಕೇಳಿದಾಗ ಉತ್ತರಕೊಡುತ್ತಿದ್ದ ಮಂತ್ರಿಗಳು ಅವರು ಹಾಗೆ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟಿರ ಬಹುದೆಂದು ಹೇಳಿದರು. ನನಗೆ ಅವರಿಂದ ಒಂದು ಕಾಗದ ಬಂದಿದೆ ಎಂದು ಹೇಳಿದರೂ ಕೇಳಲಿಲ್ಲ. ಅದರಲ್ಲಿ ಮಂತ್ರಿಗಳು ಅಲ್ಲಿರತಕ್ಕ ಡೆಪ್ಯುಟಿ ಕಮೀಷನರಿಗೆ ಈ ವಿಚಾರವನ್ನು ತಿಳಿಸಿರುವುದಾಗಿ ಕಾಗದದಲ್ಲಿ ತಿಳಿಸಿದ್ದಾರೆ. ಅಲ್ಲಿರತಕ್ಕ ಅಧಿಕಾರಿಗಳನ್ನು ಕೇಳಿದರೆ ಅವರಿಗೆ ರಿಟನ್ ಆರ್ಡರು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಹಾಗೆ ಇಲ್ಲಿಂದ ಬಿಡತಕ್ಕ ರಾಜಹಂಸ ಅಲ್ಲಿಗೆ ಹೋಗುವುದ ರೊಳಗೇ ಏಕೆ ಕಾಗೆಯಾಗುತ್ತದೆತ? ಈ ವಿಚಾರದಲ್ಲಿ ತಕ್ಕ ಸಮಜಾಯಿಷಿಯನ್ನು ಮಂತ್ರಿಗಳು

ಉತ್ತರಕೊಡತಕ್ಕ ಕಾಲದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಂತ್ರಿಗಳು ಹಾಗೆ ಆಜ್ಞೆಯನ್ನು ಕೊಟ್ಟಿರಬಹುದು. ಅವರು ದಯಾಹೀನರೆಂದು ನಾನು ಹೇಳುವುದಿಲ್ಲ. ಆದರೆ ಸ್ಥಳದಲ್ಲಿರತಕ್ಕ ಅಧಿಕಾರಿಗಳು ತಮ್ಮ ಜಬರ್‌ದಸ್ತನ್ನು ಅವರ ಕಂಟ್ರೋಲನ್ನು ಮತ್ತು ಅವರ ಅಂತಸ್ತನ್ನು ನಡೆಸಿಯೇ ತೀರುತ್ತಾರೆ. ಆ ವಿಚಾರವನ್ನು ಇಲ್ಲಿ ಹೇಳದೆ ಇರೋಣವೆಂದರೆ ಅದೇಕೋ ನನ್ನ ಮನಸ್ಸೇ ಒಪ್ಪುವುದಿಲ್ಲ. ಅಲ್ಲಿರತಕ್ಕ ಅಧಿಕಾರಿಗಳು ಈಗ ಮಳೆಬಂದರೂ ಅಲ್ಲಿ ಆರಾಣಿ ಬೆಳೆಯಾಗುತ್ತದೆಂದು ಹೇಳುತ್ತಿದ್ದಾರೆ. ಅಲ್ಲೀಗ ಒಂದು ಅಡಿ ನೀರನ್ನು ಕಟ್ಟಿದರೂ ಒಂದು ಜೋಳದ ಪೈರು ಒಡೆ ಕಟ್ಟುವುದಿಲ್ಲ. ಹೀಗಿದ್ದಾಗ್ಯೂ ಅವರು ಏಕೆ ಇಂಥ ನಿಜವಲ್ಲದ ಸ್ಟೇಟ್‌ಮೆಂಟುಗಳನ್ನು ಮಾಡುತ್ತಿದ್ದಾರೋ ಗೊತ್ತಾಗುವುದಿಲ್ಲ. ಇಂಥ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಟ್ಟರೆ ಅಲ್ಲಿರತಕ್ಕ ಜನರ ಗತಿಯೇನಾಗಬೇಕು ? ಇದು ಜನರನ್ನು ಘಾಬರಿಮಾಡತಕ್ಕ ವಿಚಾರ. ಇನ್ನು ಮಂತ್ರಿಗಳು ಜನರು ಬೆಳೆ ತೆಗೆಯಲು ಬಾವಿಗಳನ್ನು ತೆಗೆಯಬೇಕೆಂದು ಹೇಳಿದರು. ಸರ್ಕಾರದವರು ಕೊಡತಕ್ಕ ಹಣವನ್ನು ಜನರು ಇನ್‌ಸ್ಟಾಲ್‌ಮೆಂಟಿನ ಮೇಲೆ ತೀರಿಸುತ್ತಾರೆ. ಆದರೆ ಸರ್ಕಾರದವರು ಈಗ ಕೊಡುತ್ತಿರುವ ಹಣ ಏತಕ್ಕೂ ಸಾಲದು. ಏಕೆಂದರೆ ಅಲ್ಲಿ ಬಾವಿಗಳನ್ನು ತೆಗೆಯುವಾಗ ಮಧ್ಯೆ ಬಂಡೆಗಳು ಬೀಳುತ್ತವೆ. ಈ ವಿಚಾರವನ್ನು ನಾನು ಮಂತ್ರಿಗಳಿಗೆ ತಿಳಿಸಿದ್ದೇನೆ. ಆ ಬಂಡೆಗಳನ್ನು ಒಡೆದು ತೆಗೆಯುವುದಕ್ಕೆ ಡೈನಮೈಟುಗಳು ಸಿಕ್ಕುವುದಿಲ್ಲ. ಕಲ್ಲು ಕಟ್ಟಲು ಅವರಿಗೆ ಸಿಮೆಂಟೂ ಕೂಡ ಸಿಕ್ಕುತ್ತಿಲ್ಲ. ಹೀಗಾಗಿ ಆ ಬಡರೈತನಿಗೆ ಈ ದಿವಸ ಯಾವ ಸೌಲಭ್ಯಗಳೂ ಸರಿಯಾಗಿ ಸಿಗುತ್ತಿಲ್ಲ. ಇನ್ನು ಕೆಲವು ಕಡೆ ಜನರಿಗೆ ಪಂಪ್ ಸೆಟ್ಟನ್ನು ಒಡಗಿಸಿದ್ದರೆ ಅವರಿಗೆ ಕರೆಂಟನ್ನು ಸಪ್ಲೈ ಮಾಡಿರುವುದಿಲ್ಲ. ಹೀಗಾದರೆ ರೈತ ಏನು ಬೆಳೆದಾನು ? ಬಡ ರೈತ ಬದುಕುವುದು ಹೇಗೆ ? ಈ ಪಂಪ್ ಸೆಟ್‌ಗಳ ವಿಚಾರದಲ್ಲಿ ಒಂದು ಉದಾಹರಣೆಗಾಗಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಕೋಲಾರ ಜಿಲ್ಲೆಗೆ 6,750 ಪಂಪ್ ಸೆಟ್ಟುಗಳು ಸ್ಯಾಂಕ್ಷನ್ ಆಗಿವೆ. ಹೀಗೆಂದು ಹೇಳಿದರೆ ಮಾನ್ಯ ಮಂತ್ರಿಗಳು ಅವು ಈಗ ಸಪ್ಲೈ ಯಾದವುಗಳಲ್ಲ, ನಿಮ್ಮ ತಂದೆಯವರ ಕಾಲದಿಂದಲೂ ಅಷ್ಟು ಸಪ್ಲೈ ಆಗಿವೆಯೆಂದು ಅವರು ಹೇಳಬಹುದು.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಶ್ರೀ ಸಿ. ಆರ್. ಗೌಡರ ಕಾಲದಲ್ಲೇ ನಮ್ಮ ಗ್ರಾಮಕ್ಕೆ ಮೊದಲು ಪಂಪ್‌ಸೆಟ್ ಸರಬರಾಯಿ ಆದುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗೆ ಸ್ಯಾಂಕ್ಷನ್ ಆದ ಪಂಪ್‌ಸೆಟ್‌ಗಳಲ್ಲಿ ಕಳೆದ ಫೆಬ್ರವರಿಯಲ್ಲಿ 136 ಸೆಟ್ಟುಗಳನ್ನು ಸಪ್ಲೈಮಾಡಲಾಗಿದೆ. ಅವುಗಳ ಪೈಕಿ 86ಕ್ಕೆ ಸರ್ವೀಸನ್ನು ಕೊಡಲಾಗಿದೆ. ಅಲ್ಲಿಗೆ ಒಟ್ಟು ಸರಬರಾಯಿಯಾಗಿರತಕ್ಕ 1,300 ಸೆಟ್ಟುಗಳಲ್ಲಿ 891ಕ್ಕೆ ಸರ್ವೀಸನ್ನು ಕೊಡಲಾಗಿದೆ. ಇನ್ನು ಬೆಂಗಳೂರು ಜಿಲ್ಲೆಗೆ ಬಂದರೆ ಅಲ್ಲಿಗೆ ಇರತಕ್ಕದ್ದು 4,639, ಅಲ್ಲಿಗೆ ಸ್ಯಾಂಕ್ಷನ್ನಾದ್ದು 1,258. ಅಲ್ಲಿಗೆ ಫೆಬ್ರವರಿಯಲ್ಲಿ ಮಂಜೂರಾದ್ದು 87 ಸರ್ವೀಸ್ ಕೊಟ್ಟಿರುವುದು—47ಕ್ಕೆ. ಇನ್ನು ತುಮಕೂರಿನ ವಿಚಾರ ತೆಗೆದುಕೊಂಡರೆ ಅಲ್ಲಿಗೆ ಸ್ಯಾಂಕ್ಷನ್ನಾಗಿರುವುದು 1,074 ; ಫೆಬ್ರವರಿಯಲ್ಲಿ ಸಪ್ಲೈ ಮಾಡಿದ್ದು 98 ; ಅಲ್ಲಿಗೆ ಸರ್ವೀಸ್ ಕೊಟ್ಟಿರುವುದು 58ಕ್ಕೆ. ಚಿತ್ರದುರ್ಗ ಜಿಲ್ಲೆಗೆ ಸ್ಯಾಂಕ್ಷನ್ನಾಗಿರುವುದು 3,556. ಫೆಬ್ರವರಿಯಲ್ಲಿ ಕೊಟ್ಟದ್ದು 42, ಸರ್ವೀಸಿನಲ್ಲಿರತಕ್ಕವು 47 ಸೌತ್ ಕ್ಯಾನರಾ ಜಿಲ್ಲೆಯಲ್ಲಿ 2,049. ಫೆಬ್ರವರಿಯಲ್ಲಿ ಸ್ಯಾಂಕ್ಷನ್ನಾದ್ದು 54, ಸರ್ವೀಸ್ ಕೊಟ್ಟಿರುವುದು 49. ಇಷ್ಟೆಲ್ಲಾ ಆದಮೇಲೆ ನಮ್ಮ ಮೈಸೂರು ಜಿಲ್ಲೆಯ ವಿಚಾರ ಕೇಳಿ ; ನಮ್ಮ ಜಿಲ್ಲೆಯಲ್ಲಿ ಕೊಳ್ಳೇಗಾಲ, ಗುಂಡ್ಲುಪೇಟೆ, ಮತ್ತು ನಂಜನಗೂಡು ಇವೆಲ್ಲಾ ಬಹಳ ಸಂಮೃದ್ಧಿಯಾದ ಸ್ಥಳಗಳೇನು ? ಇಲ್ಲಿಗೆ ಕೊಟ್ಟಿರತಕ್ಕದ್ದು 1,462 ಸೆಟ್ಟುಗಳು ಫೆಬ್ರವರಿಯಲ್ಲಿ ಮಂಜೂರಾದ್ದು 58 ಸೆಟ್ಟುಗಳು. ಅಲ್ಲೀಗ ಸರ್ವಿಸಿನಲ್ಲಿರುವುದು 26 ಸೆಟ್ಟುಗಳು, ಇನ್ನುಳಿದವುಗಳೆಲ್ಲಾ ಹಾಗೇ ಬಿದ್ದಿವೆ. ಇದು ಬೆಂಗಳೂರು ಮತ್ತು ಕೋಲಾರದಲ್ಲಿ ಮಾತ್ರ ಆಗಬಾರದು. ಎಲ್ಲಿ ಹೋಗಿ ಕೇಳಿದರೂ ತಂತಿ, ಟ್ರಾನ್ಸ್‌ಫಾರ್ಮರ್ಸ್‌ಗಳು ಎಲ್ಲವೆಂದು ಹೇಳುತ್ತಾರೆ. ಕೋಲಾರದಲ್ಲಿ ಮಾತ್ರ ಅವು ಬರುತ್ತವೆ. ಏಕೆ ಮೈಸೂರಿಗೆ ಬರುವುದಿಲ್ಲವೋ ಗೊತ್ತಾಗುವುದಿಲ್ಲ. ತಂತಿ ಮತ್ತು ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಬರೀ ಕೋಲಾರ ಜಿಲ್ಲೆಗೆ ಮಾತ್ರ ಒದಗಿಸಿದರೆ ಬಾಕಿ ಜಿಲ್ಲೆಗಳಲ್ಲಿರತಕ್ಕ ಜನಗಳಿಗೆ ಅವುಗಳ ಸೌಕರ್ಯ ಬೇಡವೇ ? ಏಕೆ ಇವರು ಈ ರೀತಿ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಮಾಡಿದರೆ ಯಾವ ರೀತಿ ಈ ಅಭಾವ ಪರಿಸ್ಥಿತಿ ಹೋಗುತ್ತದೋ ಗೊತ್ತಿಲ್ಲ. ಎಂದೋ ಯಾವಾಗಲಾದರೂ ನಮಗೆ ಟ್ರಾನ್ಸ್‌ಫಾರ್ಮರ್ಸ್ ಕೊಟ್ಟರೆ, ಅವು ಕೆಲವೇ ದಿನಗಳಲ್ಲಿ ಸುಟ್ಟು ಹೋಗುತ್ತವೆ. ಅಂತವುಗಳನ್ನು ನಮ್ಮ ಕಡೆಗಳಿಗೆ ಕೊಡುತ್ತಾರೆ. ಹೆಚ್ಚು ಕಡಿಮೆ ಎಲ್ಲಾ rewind ಆದ Transformer ಗಳು. ನಮ್ಮ ಗತಿಯನ್ನು ದೇವರೇ ಕಾಪಾಡಬೇಕು. ಇಷ್ಟು ಅನ್ಯಾಯಗಳಾಗುತ್ತಿದ್ದರೂ ನಮ್ಮ ಪ್ರದೇಶದ ಜನಗಳ ಕಷ್ಟನಷ್ಟಗಳನ್ನು ಹೇಳುವವರಿಲ್ಲ, ಮತ್ತು ಕೇಳುವವರೂ ಇಲ್ಲದಂತಾಗಿದೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ರಿಲೀಫ್ ವರ್ಕ್ಸ್ ಬಗ್ಗೆ ಹೇಳುವುದಾದರೆ ಯಾವುದಾದರೂ ಒಂದು ರೀತಿಯಲ್ಲಿ ಅಡ್ಮಿನಿಸ್ಟ್ರೇಟಿವ್ ಡಿಫಿಕಲ್ಟೀಸ್ ಇದೆಯೆಂದು ಹೇಳುತ್ತಾರೆ. ಬಿ ಡಿ.ಓ. ಮಾಡಲಿ ಎಂದು ಅವರು ತಹಶೀಲ್ದಾರ್ ಮಾಡಲಿ ಎಂದು ಇವರು. ಒಬ್ಬರಿಗೊಬ್ಬರನ್ನು ತೋರಿಸಿಬಿಡುತ್ತಾರೆ. ಆದಕಾರಣ ನಮ್ಮ ಪ್ರದೇಶದಲ್ಲಿ ರಿಲೀಫ್ ವರ್ಕ್ಸ್ ಅರ್ಥ ಕೂಡಾ ಆಗುವುದಿಲ್ಲ. ಇದರಿಂದ ಜನಗಳಿಗೆ ರಿಲೀಫ್ ಹೇಗೆ ಸಿಗುತ್ತದೆ? ಸಾಧಾರಣವಾಗಿ ಹೆಣ್ಣುಮಕ್ಕಳು ನೂತುಕೊಂಡಾದರೂ ತಮ್ಮ ಗಂಡಂದಿರಿಗೆ ಅನ್ನ ಕಾಣಿಸುತ್ತಾರೆ. ಅದಕ್ಕೂ ಸಾಕಷ್ಟು ಹತ್ತಿಯೇ ಇಲ್ಲವೆಂದು ಹೇಳುತ್ತಾರೆ. ಖಾದಿ ಬೋರ್ಡಿನವರು ನಾಯಿ ತೆಗೆದುಕೊಳ್ಳುವುದಕ್ಕೆ ದುಡ್ಡು ಇದೆ ಮತ್ತು ಮಜಾ ಮಾಡುವುದಕ್ಕೆ ದುಡ್ಡು ಇದೆ. ಆದರೆ ಬಡವರು ಕೂಲಿ ಮಾಡಿ ಜೀವನ ಮಾಡೋಣವೆಂದರೆ ಅದಕ್ಕೆ ಸಾಕಷ್ಟು ಪ್ರೋತ್ಸಾಹವಿಲ್ಲ. ಮಂತ್ರಿಗಳು ನಮ್ಮ ಭಾಗಕ್ಕೆ ಭೇಟಿಕೊಟ್ಟಾಗ pierced ಕಕೂನ್ಸ್ ಬಗ್ಗೆ ಆಗುತ್ತಿದ್ದಂಥ ಅನ್ಯಾಯಗಳ ಬಗ್ಗೆ ಕಾಗದ ಬರೆದಿದ್ದರೂ ಅದರಿಂದ ಏನೂ ಪ್ರಯೋಜನವಾಗಿಲ್ಲ. ಇದುವರೆಗೂ ಖಾದಿ ಬೋರ್ಡಿನಿಂದ ಯಾವ ದಾಖಲೆಯೂ ಇಲ್ಲ, ಲೆಖ್ಖ ಜಮಾ ಒಂದು ಇಲ್ಲ, ಈ ಬಗ್ಗೆ ಒಂದೆರಡು ಕಾಗದಗಳನ್ನು ಸಹ ಬರೆದಿದ್ದಾಯಿತು. ಮಂತ್ರಿಗಳನ್ನು ಎರಡು-ಮೂರು ಬಾರಿ ಈ ವಿಚಾರವಾಗಿ ಕೇಳಿದ್ದಕ್ಕೆ ಅವರೇ ಬೇಜಾರಾಗಿ ಅವರಿಗೆ ಕೇವಲ ಎರಡು ಕಾಗದಗಳು ಸಾಕೇ ಎಂಬುದಾಗಿ ಕೇಳಿದರು. ಅಂದಮೇಲೆ ಅವರು ಎಷ್ಟು ಬೇಜಾರಾಗಿ ಆ ರೀತಿ ಮಾತನಾಡಿದ್ದಾರೆಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ನನ್ನ ಕ್ಷೇತ್ರದಲ್ಲಿ ದನಗಳಿಗೆ ಹುಲ್ಲು ಇಲ್ಲವೆಂದು ಕೇಳಿದ್ದಕ್ಕಾಗಿ ಮಂತ್ರಿಗಳು ಬಹಳ ದೊಡ್ಡ ಮನಸ್ಸು ಮಾಡಿ 10 ಸಾವಿರ ರೂಪಾಯಿಗಳಷ್ಟು ಹುಲ್ಲನ್ನು ನಮ್ಮ ಭಾಗಕ್ಕೆ ಕೊಡಿಸಿದ್ದಾರೆ. ಹುಲ್ಲು ಬೇಕಾದಷ್ಟು ಬಂದಿದೆ. ಅದರೆ ಜನಗಳ ಗತಿ ಹೇಳುವುದಕ್ಕಾಗುವುದಿಲ್ಲ. ಲಾರಿಗಳಿಂದ ಬಂದಂಥ ಹುಲ್ಲನ್ನು ತೆಗೆದುಕೊಳ್ಳುವುದಕ್ಕೆ ಒಂದು ಕಾಸೂ ಇಲ್ಲ. ದಿವಸಗಳಗಟ್ಟಲೆ ಲಾರಿ ನಿಂತುಕೊಂಡರೂ ನಾಲ್ಕಾಣೆ ಕೊಟ್ಟು ಒಂದು ಹೊರೆ ಹುಲ್ಲು ತೆಗೆದುಕೊಳ್ಳುವುದಕ್ಕೆ ಅಲ್ಲಿನ ಬಡ ರೈತರಿಗೆ ಕಷ್ಟವಾಗಿದೆ. ಇದರಿಂದ ಎಷ್ಟೋ ದನಗಳು ಸತ್ತುಹೋಗಿವೆ. ಅಲ್ಲಿನ ಕಂಡೀಷನ್ಸ್ ನೋಡಲಿಕ್ಕೆ ಬಹಳ ಕಷ್ಟವಾಗುತ್ತದೆ. ರೈತರಿಗೆ ಅಲ್ಲಿ ಉಳುವುದಕ್ಕೆ ಸಾಕಷ್ಟು ದನಗಳಿಲ್ಲ. ವ್ಯವಸಾಯಕ್ಕೆ ಬೇಕಾದ ಉಪಕರಗಳು ಸಾಕಷ್ಟು ಸರಬರಾಜು ಆಗುತ್ತಿಲ್ಲ. ನಾನು ಇದನ್ನು ಹಾಸ್ಯಾಸ್ಪದಕರವಾಗಿ ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದೇನೆಂದಲ್ಲ. ಸರ್ಕಾರದವರು ಯಾರನ್ನಾದರೂ ಅಲ್ಲಿಗೆ ಕಳುಹಿಸಿ ನೋಡಲಿ. ಅಲ್ಲಿನ ಪರಿಸ್ಥಿತಿ ದೇವರೇ ಬಲ್ಲ. ಅಷ್ಟು ಕಷ್ಟದಿಂದ ಜನರು ಜೀವನ ಮಾಡುತ್ತಿದ್ದಾರೆ. ಆದ್ದರಿಂದ ಈಗಲಾದರೂ ಸರ್ಕಾರದವರು ಯೋಚನೆ ಮಾಡಿ ವ್ಯವಸಾಯಕ್ಕೆ ಯೋಗ್ಯವಾದ ದನಗಳನ್ನು ಬಡರೈತರಿಗೆ ಕೊಂಡುಕೊಳ್ಳಲು ಹಣ ಸಹಾಯ ಮಾಡಬೇಕು. ಅನೇಕ ಮೆಷನರಿಗಳನ್ನೂ ಸಹ ಒದಗಿಸಬೇಕು. ಏಕೆಂದರೆ ಆನೇಕರು ಅಲ್ಲಿ ಸಾಕಷ್ಟು ಆಹಾರ ಹೊಟ್ಟೆಗಿಲ್ಲದೆ ಬೆಲ್ಲದ ನೀರು, ಕಡಲೆಪುರಿ ತಿಂದು ಜೀವನ ಮಾಡುತ್ತಿದ್ದಾರೆ. ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ಕಳವಳ ಪರಿಸ್ಥಿತಿ ಉಂಟಾಗಿದೆ. ಇತ್ತೀಚೆಗೆ ಮಳೆಯ ಅಭಾವದಿಂದ ಸಾಕಷ್ಟು ಬೆಳೆಯಾಗಿಲ್ಲ, ಒಂದು ಕಾಳೂ ಇಲ್ಲ, ಒಂದಿಷ್ಟು ಹುಲ್ಲು ಇಲ್ಲ, ರಾಗಿ ಇಲ್ಲ ಹೀಗಿರುವಾಗ ಜನಗಳಿಗೆ ಅನ್ಯಥಾ ಕಂದಾಯ, ಸಾಲಕ್ಕಾಗಿ ತೊಂದರೆಗಳನ್ನು ಕೊಡಕೂಡದು ಎಂಬುದಾಗಿ ಕಟ್ಟುನಿಟ್ಟಾಗಿ ನಿಮ್ಮ ಅಧಿಕಾರಿಗಳಿಗೆ ತಿಳಿಸಬೇಕು. ಏಕೆಂದರೆ ರೈತರು ಈಗಿನ ಸ್ಥಿತಿಯಲ್ಲಿ ಸರ್‌ಚಾರ್ಜು, ಕಂದಾಯ, ಸಾಲ, ಕೊಡುವುದಕ್ಕಾಗುವುದಿಲ್ಲ. ಜನಗಳಿಗೆ ಸರ್ಕಾರದವರೂ ಏನಾದರೂ ರಿಲೀಫ್ ಕೊಡುವುದಾದರೆ ಈಗಲೇ ಕೊಡಬೇಕು. ಅವರಿಗೆ ಗಂಜಿ, ಅಂಬಲಿಯಾದರೂ ಮಾಡಿಕೊಂಡು ಜೀವನ ಮಾಡುವುದಕ್ಕಾದರೂ ತಕ್ಕ ಸಹಾಯವನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri KADIDAL MANJAPPA (Sringeri).—Mr. Speaker, Sir, I am grateful to you for giving me an opportunity to express my views on this all important problem concerning food and famine. After the country achieved independence, all our efforts are being made to make the country self-sufficient in regard to food and to meet scarcity conditions that occur in some parts of the country almost every year. They have been constructing new reservoirs and tanks with a view to provide irrigation facilities to the ryots, they have been sinking irrigation wells, they have been providing cheap credit to the agriculturists, and they are trying to introduce modern methods of agriculture. But, in spite of all these

efforts, the goal of self-sufficiency appears to be far far away. What is the reason? As a peasant's son and as one with some experience in administration, I have tried to analyse the reasons for our—I do not mean to say a failure—not reaching the goal within the expected time. The reasons are many. Firstly, the agriculturist is even now a creature who is subjected to exploitation at the hands of very many forces, even in spite of the little awakening he is having now. They are being exploited by the money-lenders, by the traders, by the land-lords, in some places by petty officials and by local touts. These forces are taking advantage of their illiteracy and helplessness to thrive at their cost. Secondly, agriculture, even to-day with the high prices, is not at all a profitable or comfortable avocation when compared to other avocations. In agriculture, food production is not profitable as much as it is profitable in the case of commercial crops. Sir, if I can give a few illustrations, I will be able to convince the House that the small cultivators and the tenants are worse than the coolies to-day. In this State, 50 per cent of the holdings consist of only five acres and below and about 20 per cent of the holdings are less than ten acres. If we choose a peasant family consisting of five souls, a family owning 5 acres of dry land either in Kolar District or Bangalore District, if normal conditions obtain and if the rainfall is good, they will be able to grow 15 pallas in an extent of five acres at the rate of three pallas per acre.

That is the average yield in the case of dry land in these areas. For 15 pallas, even without deducting the cost of cultivation, the price normally the agriculturist gets at the rate of Rs. 25 per palla will amount to Rs. 375. For 5 people the gross income is Rs. 375 and per head it is Rs. 75; and per day it is about 22 paise per head. Let us next take the case of rainfed wet lands in malnad. The average yield per acre in malnad is about 7 pallas of paddy. In an extent of 5 acres a family can grow about 35 pallas The total gross income at the rate of Rs. 25 per palla will be about Rs. 875; per head it is Rs. 175. If you take the cost of cultivation, it will be half of Rs. 175. In the case of tenants for whom we have a lot of sympathy the income is half of it. That means the tenant is living on 2 annas or 3 or 4 annas. Even in the case of wet lands fed by the river channels, the average income per head per day cannot be more than 8 annas. These are the conditions obtaining in the agricultural sector. We must understand the difficulties of the peasants, and try to give them all help. Unfortunately, there is an impression in the mind of some people, particularly some people living in the urban areas that the agriculturist is making a lot of profit on account of the high prices obtaining to-day. It is thoroughly wrong. A time will come perhaps within a decade when we will be compelled to give subsidies to the agriculturists. To-day an artisan like a mason or bricklayer and his family are able to earn Rs. 5 to 10 per day. But I will be very happy if an agriculturist is given Re. one per head. They are the people who work throughout the day. In the case of factory labourer there are at least restrictions with regard to the time. He is given other benefits; but the peasant works from dawn to dusk and

(SRI KADIDAL MANJAPPA)

gets 4 or 8 annas. This is the situation. Unfortunately, the public life of the country is dominated by business people and naturlly, business people cannot appreciate the difficulties of the peasants who are illiterate, who are ignorant, who are not organised and who on account of their helplessness are not in a position to take what is legitimately due to them. The third reason is, at the lower rungs the administration is not as much sympathetic towards the peasants as it ought to be. I do not mean to say that all officials are hostile to the peasants, but my experience has convinced me that at certain levels some officials at least are not sympathetic towards the peasents. They have to go from post to pillar, and loiter from office to office; that is their plight. And some of our officers behave as though they are doling out from their pockets when the peasants approach them for legitimate reliefs. The fourth reason is, the burden of indirect taxation is heavy on the agriculturist. The town dwellers, some of them who ought to pay the tax and who are bound to pay the tax can easily evade the tax, but it cannot happen in the case of rural folk. The fifth reason is, there is a certain amount of uncertainty in the field of agriculture due to the delay in the land reform policy. The tenant does not know what he is going to get. The land-lord does not know that he is going to lose. Therefore, there is no sufficient incentive to the tenants to grow more food, taking risks. For all these reasons we have not been able to achieve the goal which we were very eager to reach.

Now with regard to scarcity relief, several Honourable Members who have participated in the debate have thrown out valuable suggestions. Some of them have found fault with the Government for doing this or that. I was in charge of famine relief for 9 years. I can claim to have some experience. Even the mightiest Government in the world cannot give adequate relief to the persons who are injured on account of the fury of nature. Government can give some relief. They can start gruel centres if there is acute shortage. They can start road works or irrigation works. After all those works cannot solve the problems of the people who are affected by scarcity conditions. Government are doing their best. After 1947 when the country attained independence several measures have been adopted by Government to meet the scarcity conditions which are a normal feature in this State, at least in about one-third of the State.

Government have sanctioned irrigation wells and tank works and is also giving other kinds of relief. But people must be made to fall back upon their own resources. I was suggesting to some people living in the scarcity areas that they should think of migrating to areas where there is plenty of rainfall and land. I feel that Government has taken adequate steps to meet the conditions prevailing in some parts of the State. Some Hon. Members suggested that rationing should be introduced and State Trading in foodgraing should be resorted to. I am a Socialist. I would welcome the idea of State trading in foodgrains but we must be very

cautious. Unless the administrative machinery is clean and efficient, State trading in foodgrains would land us in further troubles. The same applies to rationing also. Controls are necessary when there is dire need. If people have to be benefitted by controls, the administrative machinery must be very efficient and clean. For the present I am not in favour of introducing rationing in the State nor am I in favour of State trading. If it becomes inevitable. Government can take over wholesale trade in foodgrains. The other step that could be taken by Government is to prevent hoarding. They should take drastic steps to put an end to hoarding by vested interests. I would also suggest that the Government of India may make up their minds to dissuade the banks from advancing loans on the security of foodgrains. With these few observations, I conclude.

† ಶ್ರೀ ಕಾಂತರಾವ್ ದೇಸಾಯಿ (ಕುಷ್ಟಗಿ).—ಸಭಾಪತಿಗಳೇ, ಈಗ ನಮ್ಮ ಮೈಸೂರು ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಹು ಭಾಗದಲ್ಲಿದೆ. ಅದರ ಬಗ್ಗೆ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ಯೋಗ್ಯ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಇವತ್ತಿನ ದಿವಸ ಈ ಸಭೆಯಲ್ಲಿ ವಿಚಾರ ಮಾಡಬೇಕೆಂದಿದೆ. ಆ ವಿಷಯದಲ್ಲಿ ನಾನು ನಮ್ಮ ಕ್ಷೇತ್ರದ ಮತ್ತು ತಾಲ್ಲೂಕಿನ ವಿಷಯಗಳನ್ನು ಸಭೆಯ ಎದುರಿಗೆ ತರಬೇಕೆಂದು ಇದ್ದೇನೆ. ಈಗ ನಮ್ಮ ಕುಷ್ಟಗಿ ತಾಲ್ಲೂಕಿನಲ್ಲಿ ನಾಲ್ಕೈದು ವರ್ಷದಿಂದ ಬರಗಾಲ ಪ್ರಾರಂಭವಾಗಿದೆ. 1959ರಿಂದ ಇಲ್ಲಿಯ ವರೆಗೆ ಒಂದೇ ವರ್ಷ ಸಾಮಾನ್ಯ ಬೆಳೆ ಬಂದದ್ದು ನಮಗೆ ಕಂಡು ಬಂದಿದೆ. ಅಲ್ಲ ಈಗ 5 ವರ್ಷದಿಂದ ಮಳೆ ಆಗಲೊಲ್ಲದು. ಈಗ ಮೂರು ವರ್ಷದಿಂದ ಅಲ್ಲಿ ಮಿಡತೆಗಳ ಹಾವಳಿ ಜಾಸ್ತಿಯಾಗುತ್ತಲಿದೆ. ಇದರ ನಿವಾರಣೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡೆವು. ಸರ್ಕಾರದವರು ಕೊಟ್ಟ ಪುಡಿ ಹಳೆಯದಾಗಿದ್ದ ಕಾರಣ ಅದು ನಿರುಪಯೋಗವಾಗಿ ಕೆಲಸಕ್ಕೆ ಬರಲಿಲ್ಲ ಮತ್ತು ಹಣ ಕೂಡ ವ್ಯರ್ಥನಾಯಿತು. ಹೀಗಾಗಿ ರೈತರಿಗೆ ಲುಕ್ಸಾನಾಯಿತು. ಮೂರು ವರ್ಷದಿಂದ ಯಾವ ನಿವಾರಣಾ ಕಾರ್ಯವೂ ಪರಿಣಾಮಕಾರಿಯಾಗಿ ನಡೆಯಲಿಲ್ಲ. ಇದರಿಂದಾಗಿ ಮಿಡತೆಗಳ ಹಾವಳಿಯಿಂದ ಬಹಳ ಲುಕ್ಸಾನಾಯಿತು. ಈ ವರ್ಷ ಬಹಳ ಅಭಾವ ಪರಿಸ್ಥಿತಿ ಉಂಟಾಗಿದೆ ಮತ್ತು ನಿನ್ನೆ ನಮ್ಮ ಮಾನ್ಯ ಮಂತ್ರಿಗಳು ಹೇಳಿದರು, 15 ದಿವಸ ಮಳೆ ಮುಂದೆ ಹೋಗಿದೆ ಎಂದು. ನಮ್ಮ ಭಾಗದಲ್ಲಿ ಏಪ್ರಿಲ್ ಕಡೆಯ ವಾರ ಅಥವಾ ಮೇ ಮೊದಲನೆಯ ವಾರದಲ್ಲಿ ಬಿತ್ತನೆಮಾಡುತ್ತಾರೆ. ಮೇ ಮೊದಲನೆಯ ವಾರದೊಳಗಾಗಿ ಬಿತ್ತನೆ ಮಾಡದೆ ಇದ್ದರೆ ಮುಂಗಾರು ಬೆಳೆ ಬರುವುದಿಲ್ಲ. ಈಗ ಒಂದು ತಿಂಗಳು ತಡವಾಯಿತು. ಒಂದು ತಿಂಗಳು ತಡವಾದುದಕ್ಕೆ ಅಲ್ಲಿ ಭೀಕರ ಪರಿಸ್ಥಿತಿ ಉಂಟಾಗಿದೆ. ಅದನ್ನು ನಿವಾರಣೆ ಮಾಡಿಲ್ಲ ಮತ್ತು ಗ್ರಾಸ್ ಹಾಪರ್ಸ್ ನಮ್ಮ ತಲೆ ಮೇಲೆ 'ಹ್ಯಾಂಗಿಂಗ್ ಸ್ವೋರ್ಡ್' ಇದ್ದ ಹಾಗೆ ಇದೆ, ಮೊದಲು ನಾವು ಬಿತ್ತನೆಯನ್ನು ಮಾಡಿಲ್ಲ, ಮಿಡತೆಗಳು ನಮ್ಮ ಬೆಳೆಯನ್ನು ಹಾಳು ಮಾಡುತ್ತವೆ. ಈ ಪರಿಸ್ಥಿತಿ ಬರೇ ನಮ್ಮ ಕುಷ್ಟಗಿ ತಾಲ್ಲೂಕಿಗೆ ಸೀಮಿತವಾಗಿಲ್ಲ. ಕುಷ್ಟಗಿ, ಲಿಂಗಸೂಗೂರ್ ಮತ್ತು ಹುನಗುಂದ ಈ ಮೂರು ಕ್ಷೇತ್ರಗಳಲ್ಲಿಯೂ ಆಕ್ರಮಣ ಮಾಡಿದೆ. ಇವತ್ತು ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೂ ಒಂದು ಕೇಂದ್ರೀಕೃತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಸುಮಾರು 30 ಸಾವಿರ ಎಕರೆ ಜಮೀನಿಗೆ ಮಿಡತೆಗಳ ಹಾವಳಿ ಇದೆ. ಇದರ ನಿವಾರಣೆಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇದ್ದರೆ ಮಿಡತೆಗಳ ಹಾವಳಿಯನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಹೋದ ವರ್ಷ ನಮ್ಮ ಭಾಗದಲ್ಲಿ ಸ್ವಲ್ಪ ಕ್ರಮ ತೆಗೆದುಕೊಂಡಿದ್ದೆವು. ಆದರೆ ದುರ್ದೈವದಿಂದ ಈ ಕ್ರಮ ನಿರುಪಯೋಗವಾಗಿ ನಮ್ಮ ನೆರೆ ತಾಲ್ಲೂಕುಗಳಿಂದ ಅಂದರೆ ಲಿಂಗಸೂಗೂರು ಮತ್ತು ಹುನಗುಂದ ತಾಲ್ಲೂಕುಗಳಿಂದ ಮಿಡತೆಗಳು ಮತ್ತೂ ನಮ್ಮ ಭಾಗಕ್ಕೆ ಬಂದು ಬೆಳೆಗಳನ್ನು ನಷ್ಟ ಮಾಡಿದುವು. ಇಂಥ ಪರಿಸ್ಥಿತಿ ಅಲ್ಲದೆ. ಮೂರು ನಾಲ್ಕು ವರ್ಷಗಳಿಂದ ಬೆಳೆಗಳು ನಷ್ಟವಾಗುತ್ತಿರುವುದರಿಂದ ನಮ್ಮ ಭಾಗದಲ್ಲಿ ಅಭಾವ ಬಹಳವಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಹೆಚ್ಚು ಹಚ್ಚು ಕಾಳನ್ನು ಒದಗಿಸಬೇಕು ಮತ್ತು ಅಗ್ಗದ ದರದಲ್ಲಿ ಮಾರುವ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಕುಷ್ಟಗಿ ತಾಲ್ಲೂಕು ಪರಿಸ್ಥಿತಿ ಹೇಗಿದೆ ಎಂದರೆ ಇಡೀ ರಾಯಚೂರು ಜಿಲ್ಲೆಯಲ್ಲಿ ಯಾವ ನೀರಾವರಿಯಿಂದಲೂ ನಮಗೆ ಸಹಾಯವಾಗಿಲ್ಲ. ಯಾವುದೇ ದೊಡ್ಡ ದೊಡ್ಡ ಪ್ರಾಜೆಕ್ಟಿನಿಂದಲೂ ನಮಗೆ ಏನೂ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ನಮ್ಮ ತಾಲ್ಲೂಕಿನಿಂದ ಬೇರೆ ಕಡೆಗೆ ನೀರು

(ಶ್ರೀ ಕಾಂತರಾವ್ ದೇಸಾಯಿ)

ಹರಿದು ಹೋಗುತ್ತದೆ. ನಾವು ಮಾತ್ರ ತಣ್ಣಗಿನ ಗಾಳಿ ಕುಡಿದುಕೊಂಡಿರುವ ಪರಿಸ್ಥಿತಿ ಉಂಟಾಗಿದೆ. ಮೀಡಿಯಂ ಸ್ಕೈಜ್ ಪ್ರಾಜೆಕ್ಟ್‌ಗಳನ್ನು ಎಂದರೆ ಕೆರೆಗಳನ್ನು ಮತ್ತು ಕುಂಟೆಗಳನ್ನು ಕಟ್ಟುವುದರ ಬಗ್ಗೆ ಆದಷ್ಟು ಹೆಚ್ಚು ವ್ಯವಸ್ಥೆಯನ್ನು ನಮ್ಮ ಕಡೆ ಮಾಡಲೇಬೇಕು. ಈ ದೃಷ್ಟಿಯಿಂದ ನೋಡಿದರೆ ಒಂದು ಕೆರೆಯನ್ನು ಕಟ್ಟಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಹೊಸಹಳ್ಳಿ ಮತ್ತು ಮಿಯಾನ್ ಎರಡು ಹೊಸಕೆರೆಗಳು ಮಂಜೂರಾಗಿದ್ದು ಅದನ್ನು ಸ್ಥಗಿತ ಮಾಡಿದ್ದಾರೆ, ಕಾರಣ ತಿಳಿಯಲಿಲ್ಲ. ಈಗ ಇರುವ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಎರಡು ಕೆರೆಗಳ ಕಾರ್ಯವನ್ನೂ ತೀವ್ರ ಷುರು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ನಮ್ಮ ಭಾಗದೊಳಗೆ ಮೈನರ್ ಇರಿಗೇಷನ್, ನೀರಾವರಿ ಭಾವಿ ಮತ್ತು ಪಂಪ್ ಸೆಟ್‌ಗಳು ಇವುಗಳಿಂದ ಬರಗಾಲ ಪರಿಸ್ಥಿತಿಯನ್ನು ಖಾಯಂ ಆಗಿ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ. ಇದಾಗಬೇಕಾದರೆ ಕುಷ್ಟಗಿ ತಾಲ್ಲೂಕಿಗೆ ಒಂದು ಮೀಡಿಯಂ ಪ್ರಾಜೆಕ್ಟ್ ಮೈನರ್ ಇರಿಗೇಷನ್ ಕೆರೆಗಳು ಮತ್ತು ನೀರಾವರಿ ಬಾವಿಗಳು ಮತ್ತು ಪಂಪ್ ಸೆಟ್ಟುಗಳು ಬೇಕು. ಹೋದ ಸಾರಿ ರಾಯಚೂರು ಜಿಲ್ಲೆಗೆ ಬಾವಿಗಳು ಮತ್ತು ಪಂಪ್‌ಸೆಟ್ಟುಗಳನ್ನು ಕೊಟ್ಟಾಗ ನಮ್ಮ ಭಾಗಕ್ಕೆ ಕಡಿಮೆ ಪ್ರಮಾಣದಲ್ಲಿ ಸಿಕ್ಕಿದುವು. ಆದ್ದರಿಂದ ಕುಷ್ಟಗಿ ತಾಲ್ಲೂಕಿಗೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಪಂಪ್ ಸೆಟ್ಟುಗಳನ್ನು ಮತ್ತು ನೀರಾವರಿ ಬಾವಿಗಳ ಸಲುವಾಗಿ ಹೆಚ್ಚು ಹಣವನ್ನು ಕೊಡಲೇ ಬೇಕು. ಈಗ ನಮ್ಮ ತಾಲ್ಲೂಕು ಬೋರ್ಡಿನಲ್ಲಿ 600 ವರೆಗೂ ಬಾವಿಗಳ ಸಲುವಾಗಿ ಅರ್ಜಿಗಳು ಪೆಂಡಿಗ್ ಇವೆ. ಆಹಾರಾಭಾವವನ್ನು ನೀಗಿಸಲು ಅವುಗಳಿಗೆಲ್ಲ ಹಣವನ್ನು ಕೊಡುವುದಕ್ಕೇ ಆಗಿಲ್ಲ. 600 ಅರ್ಜಿಗಳಿಗೂ ಸಾಕಾಗುವ ಹಣವನ್ನು ಕೊಡುವ ವ್ಯವಸ್ಥೆ ಆದರೆ ಎಷ್ಟೋ ಕಲ್ಯಾಣವಾಗುತ್ತದೆ.

ನಮ್ಮ ತಾಲ್ಲೂಕಿನಿಂದ 170 ಅರ್ಜಿಗಳು ಪಂಪ್ ಸೆಟ್ ಸಲುವಾಗಿ ಪೆಂಡಿಂಗ್ ಇವೆ. ಆದಷ್ಟು ತೀವ್ರಗತಿಯಿಂದ ಆ ಪಂಪ್ ಸೆಟ್‌ಗಳು ಮಂಜೂರಾಗುವ ವ್ಯವಸ್ಥೆ ಆಗಬೇಕೆಂದು ವಿನಂತಿ.

ಕುಷ್ಟಗಿಗೆ ವಿದ್ಯುಚ್ಛಕ್ತಿ ಬರಲು ಪ್ರಾರಂಭವಾಗಿದೆ. ಆದರೆ ಕುಷ್ಟಗಿಯಿಂದ ಒಕ್ಕಲುತನದ ಅಭಿವೃದ್ಧಿಯ ಸಲುವಾಗಿ ಹಳ್ಳಿಗಳಿಗೆ ವಿದ್ಯುತ್ ಇಲ್ಲ. ಆದಷ್ಟು ತೀವ್ರ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಯನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಸಣ್ಣ ಪ್ರಮಾಣದ ನೀರಾ ವರಿ ಸೌಕರ್ಯಗಳನ್ನು ನಮ್ಮ ಕುಷ್ಟಗಿ ತಾಲ್ಲೂಕಿಗೆ ಒದಗಿಸಿ ಕೊಟ್ಟರೆ ಅಲ್ಲಿಯ ಜಮೀನಿನಲ್ಲಿ ಹೆಚ್ಚು ಬೆಳೆಯಲು ಸಹಾಯವಾಗಿ ಈಗ ಅನುಭವಿಸುತ್ತಿರುವ ಕಷ್ಟ ನಷ್ಟಗಳನ್ನು ಅನುಭವಿಸುವುದಿಲ್ಲ ಎಂದು ಹೇಳುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ಈಗ ಮುಖ್ಯವಾಗಿ ನೀರಾವರಿ ಬಾವಿಗಳು ಮತ್ತು ಪಂಪ್‌ಸೆಟ್ ಗಳಿಂದ ನಮ್ಮ ತಾಲ್ಲೂಕಿಗೆ ಹೆಚ್ಚಿನ ಉಪಯೋಗವಿಲ್ಲವೆಂಬುದನ್ನು ವಿಚಾರಮಾಡಿ ಅಲ್ಲಿ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡಿ ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು ವಿನಂತಿ.

ನಮ್ಮಲ್ಲಿ ಈಗ ಮೂರು ನಾಲ್ಕು ವರ್ಷಗಳಿಂದ ಅಭಾವ ಹಾಗೂ ಬರಗಾಲ ಪರಿಸ್ಥಿತಿ ಇತ್ತು. ನಮ್ಮ ಪ್ರದೇಶದಲ್ಲಿ ರೈತರಿಂದ ನಾನಾ ಬಾಬುಗಳಲ್ಲಿ ಸರಕಾರಕ್ಕೆ ಬರಬೇಕಾದ ಹಣ ಬಾಕಿ ಉಳಿ ದಿದೆ. ಸಹಕಾರಸಂಘಗಳ ಸಾಲ, ತಕಾವಿ ಸಾಲಗಳ ಬಾಕಿ ಉಳಿದಿದೆ. ಯಾರಿಂದ ಸಾಧ್ಯವೋ ಅವರಿಂದ ವಸೂಲು ಮಾಡಬೇಕೆಂದು ಸರ್ಕ್ಯುಲರ್ ಬಂದಿದೆ. ಇದರಿಂದ ಜನರ ಮೇಲೆ ಕೆಟ್ಟ ಪರಿಣಾಮವಾಗುತ್ತಿದೆ. ಅಲ್ಲಿ ಅಭಾವ ಪರಿಸ್ಥಿತಿ ಇದ್ದು, ಇದ್ದವರು ಯಾರು ಇಲ್ಲದಿರುವವರು ಯಾರು ಎಂದು ತಿಳಿಯುವುದು ಕಷ್ಟವಾಗಿದೆ. ಆದಷ್ಟು ವಸೂಲಿ ಕ್ರಮವನ್ನು ತಡೆಹಿಡಿಯಬೇಕೆಂದು ವಿನಂತಿ ಮಾಡುತ್ತೇನೆ. ಕೋ-ಆಪರೇಟಿವ್ ಲೋನ್ ನಮ್ಮ ತಾಲ್ಲೂಕಿನಲ್ಲಿ ಬಹು ಭಾಗ ಬಾಕಿ ನಿಂತಿದೆ. ಇದರ ಬಗ್ಗೆ ಅವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು ಷಾರ್ಟ್ ಲೋನನ್ನು ಮೀಡಿಯಂ ಟರ್ಮ್ ಲೋನಾಗಿ ಪರಿವರ್ತನೆ ಮಾಡಿ ಇನ್ನೂ ಕೆಲವು ಕೋ-ಆಪರೇಟಿವ್ ಲೋನ್ ಕೊಡುವುದಕ್ಕೆ ವ್ಯವಸ್ಥೆ ಮಾಡ ಬೇಕೆಂದು ವಿನಂತಿ.

2–00 P.M.

ಈಗಿನ ಮಟ್ಟಿಗೆ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭ ಮಾಡುವುದು ಒಳ್ಳೆಯದು. ಸಾಮಾನ್ಯವಾಗಿ ರಸ್ತೆ ಕೆಲಸ ತೆಗೆದುಕೊಳ್ಳುತ್ತಾರೆ. ಇದರ ಜೊತೆಗೆ ಬೇರೆ ಕೆಲಸಗಳನ್ನು ಕೂಡ ಹೆಚ್ಚು ಹೆಚ್ಚಾಗಿ ತೆಗೆದುಕೊಂಡರೆ ಸಾಕಷ್ಟು ಸಂಖ್ಯೆ ಜನರು ಕೂಲಿಗಾಗಿ ಬರುವುದಕ್ಕೆ ಸಾಧ್ಯವಿದೆ. ರಸ್ತೆ ಕೆಲಸಗಳನ್ನು ಸುಮಾರು ಹತ್ತು ವರ್ಷ ಕಾಲ ನಡೆಸಬಹುದು. ಆದರೆ ದುರ್ದೈವದಿಂದ ರಸ್ತೆ ಕೆಲಸದಲ್ಲಿ ಜಮೀನಿನ ಕಷ್ಟ ಬರುತ್ತದೆ. ಒಕ್ಕಲಿಗರು ತಮ್ಮ ಜಮೀನಿನಲ್ಲಿ ರಸ್ತೆ ಹಾದು ಹೋಗು

ವುದಕ್ಕೆ ತಮ್ಮ ಜಮೀನನ್ನು ಬಿಟ್ಟುಕೊಡುವುದಿಲ್ಲವೆಂದು ತಕರಾರು ಮಾಡುತ್ತಾರೆ. ಈ ತುರ್ತು ಪರಿಸ್ಥಿತಿಯಲ್ಲಿ ಜನರಿಗೆ ಸಹಾಯವಾಗುವ ರಸ್ತೆ ಕೆಲಸ ಮಾಡಲು ಜಮೀನನ್ನು ಬಿಟ್ಟುಕೊಡಲು ತಕರಾರು ಮಾಡಿದರೆ ಹೇಗೆ ? ಹೇಗಾದರೂ ಮಾಡಿ ತೀವ್ರಗತಿಯಿಂದ ಸರಕಾರ ಜಮೀನನ್ನು ಅಕ್ವೈರ್ ಮಾಡಿಕೊಂಡು ಕಾಮಗಾರಿ ನಿಲ್ಲದೇಯಿರುವ ಹಾಗೆ ಆದಷ್ಟು ಪ್ರಯತ್ನ ಮಾಡಬೇಕೆಂದು ವಿನಂತಿ.

ಇನ್ನು ಕೆಲವು ಯೋಜನೆಗಳು ಸರಕಾರದಲ್ಲಿವೆ. ಉದಾಹರಣೆಗೆ ಪೌಲ್ಟ್ರಿ ಯೋಜನೆ ಹಾಗೆಯೇ ಅಲ್ಲಿ ಸೆರಿಕಲ್ಚರ್ ಕೈಗಾರಿಕೆ ಮಾಡಬಹುದು. ಇದರ ಬಗ್ಗೆ ಸಾಕಷ್ಟು ಅನುಭವಶಾಲಿಗಳಾದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು, ಅಲ್ಲಿ ಅನುಕೂಲವೆಂದು ಕಂಡುಬಂದರೆ ಅಲ್ಲಿ ಸೆರಿಕಲ್ಚರ್ ಅಭಿವೃದ್ಧಿ ಮಾಡಲು ಅವಕಾಶಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಕುಷ್ಟಗಿಯಲ್ಲಿ ಪರಮಾವಧಿ ಟೆಂಪರೇಚರ್ 100 ಡಿಗ್ರಿ ಇರುತ್ತದೆ. ಅಲ್ಲಿಯಾದರೂ ಸೆರಿಕಲ್ಚರ್ ಕೈಗಾರಿಕೆ ಮಾಡ ಮಾಡಬಹುದೆನಿಸುತ್ತದೆ. ಇದನ್ನು ಮಾಡಿದರೆ ಎಷ್ಟೋ ರೈತರಿಗೆ ಇಂತಹ ದುಷ್ಕಾಲದಲ್ಲಿ ಅದು ಕೂಲವಾಗುತ್ತದೆ.

ಈ ಬರಗಾಲದಲ್ಲಿ ದನಗಳಿಗೆ ಮೇವಿನ ಕೊರತೆ ಇದೆ. ಅಲ್ಲಿ ಕನಿಷ್ಟ ದರ್ಜೆಯ ದನಗಳಿವೆ. ಸುಧಾರಿಸಿದ ತಳಿಗು ದನಗಳಿದ್ದರೆ ಅನುಕೂಲ. ಕೃಷ್ಣ ವ್ಯಾಲಿ ಬ್ರೀಡ್ ಜಾನುವಾರುಗಳು ಹಿಂಡುವುದಕ್ಕೂ ಅನುಕೂಲ ಮತ್ತು ವ್ಯವಸಾಯ ಕೆಲಸಕ್ಕೂ ಅನುಕೂಲವಾಗುತ್ತವೆ. ಆದಕಾರಣ ಆದಷ್ಟು ಬ್ರೀಡಿಂಗ್ ಬುಲ್‌ಗಳನ್ನೂ ಹಸುಗಳನ್ನೂ ಅಲ್ಲಿಗೆ ಸರಬರಾಯಿ ಮಾಡಬೇಕೆಂದು ವಿನಂತಿ.

ಈಗ ನಮ್ಮ ಕಡೆಗೆ ಸಾಕಷ್ಟು ಗೋಧಿಕೊಡಲು ಪ್ರಾರಂಭಿಸಿದ್ದಾರೆ, ನಮಗೆ ಅಕ್ಕಿಯನ್ನು ಕೊಡಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ತರಿ ಪ್ರದೇಶವಿಲ್ಲವಾದುದರಿಂದ ಅಲ್ಲಿ ಅಕ್ಕಿ ಬೆಳೆಯುವುದಿಲ್ಲ. ಆದಕಾರಣ ಅಲ್ಲಿಗೆ ಅಕ್ಕಿಯನ್ನೂ ಕೊಡಬೇಕೆಂದು ವಿನಂತಿ. ಈ ಹೊತ್ತು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟುದಕ್ಕಾಗಿ ಮಾನ್ಯ ಸಭಾಪತಿಯವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಮಳೆ ಸಕಾಲಕ್ಕೆ ಬಾರದೆ ದೇಶದಲ್ಲಿ ಬರಗಾಲ ಬಂದಿರುವ ವಿಚಾರವಾಗಿ ಮಾನ್ಯ ಸಭೆಯಲ್ಲಿ ಚರ್ಚೆ ನಡೆದಿದೆ, ಇನ್ನೂ ನಡೆಯುತ್ತಿದೆ. ದೇಶದಲ್ಲಿ ಮಳೆ ಬಾರದೆ ಆಂದೋಳನ ಬಂದು ಅದನ್ನು ಪರಿಹಾರ ಮಾಡುವುದಕ್ಕೆ ಸರಕಾರದವರು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಶ್ರೀಮಾನ್ ಕೃಷ್ಣಪ್ಪನವರೂ ದೆಹಲಿಗೆ ಹೋಗಿ ಎರಡು ಲಕ್ಷ ಚೀಲ ಗೋಧಿ ಮತ್ತು ಒಂದು ಲಕ್ಷ ಚೀಲ ಅಕ್ಕಿ ಬರುವಂತೆ ಮಾಡಿ ಅದು ಬರುತ್ತದೆಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಪ್ರಕೃತಿಯ ವಿಕೋಪಕ್ಕೊಳಗಾದ ಕೋಟ್ಯಾಂತರ ಜನರನ್ನು ಸರಕಾರ ಎಷ್ಟುಮಟ್ಟಿಗೆ ಸುಧಾರಿಸಬಹುದೆಂಬುದು ಬಹಳ ಮುಖ್ಯ ಪ್ರಶ್ನೆಯಾಗಿದೆ. ಒಂದು ಉದಾಹರಣೆ ತೆಗೆದುಕೊಂಡರೆ, ಎರಡು ಸಾವಿರ ಪ್ರಜಾಸಂಖ್ಯೆ ಇರುವ ಹಳ್ಳಿಯಲ್ಲಿ ಎರಡು ಹೊತ್ತೂ ಊಟ ಮಾಡುವ ಜನರು ನಲವತ್ತು ಅಥವಾ ಐವತ್ತು ಇದ್ದರೆ ಅದೇ ಜಾಸ್ತಿ. ಜನರು ಎಷ್ಟುಮಟ್ಟಿನ ಕಷ್ಟವನ್ನನುಭವಿಸುತ್ತಿದ್ದಾರೆಂದರೆ, ಅವರು ಹೊರಗೆ ಬರುವುದಕ್ಕೆ ಕೂಡ ಅವರಿಗೆ ಚೈತನ್ಯ ಸಾಲದಾಗಿದೆ. ರಿಲೀಫ್ ಕಾಮಗಾರಿಗಳನ್ನು ಸರಕಾರದವರು ಕೈಗೊಂಡಿದ್ದಾರೆ. ಈ ಕೆಲಸಗಳಿಗೆ ಗಂಡಸರು ಹೋಗುತ್ತಾರೆ, ಹೇಗೋ ಮಾಡುತ್ತಾರೆ. ಆದರೆ ಮಧ್ಯಮ ತರಗತಿಯ ಹೆಣ್ಣುಮಕ್ಕಳು ಅಲ್ಲಿ ಹೋಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಗಂಡಸರು ಮಾತ್ರ ಹೋಗಿ ಮಾಡಬೇಕು. ಕೂಲಿಗೆ ಧಾನ್ಯ ಎಲ್ಲಿಂದ ತರುವುದು ಎನ್ನುವುದೊಂದು ಪ್ರಶ್ನೆ. ಧಾನ್ಯಗಳ ಬೆಲೆ ಎಷ್ಟರಮಟ್ಟಿಗೆ ಹೆಚ್ಚಿದೆ ಎನ್ನುವುದು ಅದರ ಅನುಭವವಿಲ್ಲದಿರುವ ಜನರಿಗೆ ಗೊತ್ತಾಗುವುದಿಲ್ಲ. ದೇಶದ ಇತರ ಎಲ್ಲ ಭಾಗಗಳಿಗಿಂತಲೂ ಅಲ್ಲಿ ಹೆಚ್ಚಾಗಿದೆ. ಇದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯುವುದು ಸರಕಾರದ ಬಹು ಮುಖ್ಯ ವಿಚಾರವಾಗಿದೆ. ಹೆಚ್ಚು ಧಾನ್ಯ ಬೆಳೆಯುವ ರೈತರು ಧಾನ್ಯವನ್ನು ಶೇಕರಣೆ ಮಾಡುತ್ತಾರೆಂಬ ಅಭಿಪ್ರಾಯವಿದೆ. ಆದರೆ ಅಂತಹ ರೈತರು ಎರಡು ಮೂರು ಜನರಿಗಿಂತ ಹೆಚ್ಚು ಸಿಕ್ಕುವುದಿಲ್ಲ. ಅವರೂ ಕೂಡ ಇಂತಹ ಕಷ್ಟ ಪರಿಸ್ಥಿತಿಯನ್ನು ನೋಡಿ ಅನೇಕರಿಗೆ ಕಷ್ಟ ಕಾಲದಲ್ಲಿ ಧಾನ್ಯವನ್ನು ಕೊಟ್ಟಿದ್ದಾರೆ. ಕೆಲವು ಜನರು ಮಾತ್ರ ಮುಂದೆ ಹೆಚ್ಚು ಬೆಲೆ ಬರಬಹುದೆಂದು ಧಾನ್ಯವನ್ನು ಮುಚ್ಚಿಟ್ಟುಕೊಂಡಿರಬಹುದು. ಆದರೆ ಬೆಲೆಗಳು ಇಷ್ಟು ಹೆಚ್ಚಿರುವುದಕ್ಕೆ ಕಾರಣರು ವ್ಯಾಪಾರಸ್ಥ ಜನರು. ಇದನ್ನು ಯಾರೂ ತಪ್ಪಾಗಿ ಭಾವಿಸಬಾರದು. ಸರಕಾರದವರು ತಮ್ಮ ಶಕ್ತಿ, ಆಸಕ್ತಿ ಮತ್ತು ದಂಡವನ್ನು ಹೇರುವುದರಿಂದ ವರ್ತಕರು ಶೇಖರಣೆ ಮಾಡಿರುವ ಧಾನ್ಯವೆಲ್ಲವನ್ನೂ ಹೊರಗೆ ತರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕೇಂದ್ರ ಸರಕಾರದ ಗೃಹ ಸಚಿವರಾದ ಶ್ರೀಮಾನ್ ನಂದ ಅವರು ಮತ್ತು ಶ್ರೀಮಾನ್ ಸುಬ್ರಹ್ಮಣ್ಯಂ ಅವರು ವರ್ತಕರಿಗೆ ಈಗಾಗಲೇ ಎಚ್ಚರಿಕೆ ಕೊಟ್ಟಿದ್ದಾರೆ. ಬಚ್ಚಿಡುವವರು ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಎಷ್ಟೇ ಶ್ರೀಮಂತ

(ಶ್ರೀ ಡಿ. ಎಂ. ಸಿದ್ದಯ್ಯ)

ರಾಗಿರಲಿ ಅವರನ್ನು ಉಗ್ರ ಶಿಕ್ಷೆಗೆ ಒಳಗು ಮಾಡುತ್ತೇವೆಂದು ಅವರು ಹೇಳಿದ್ದಾರೆ. ಆದರೆ ಶ್ರೀವರ್ಮಾನಂದ ಅವರಾಗಲೀ ಶ್ರೀಮಾನ್ ಸುಬ್ರಹ್ಮಣ್ಯಂ ಅವರಾಗಲೀ ಎಲ್ಲ ಕಡೆಯೂ ಹೋಗಿ ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದ ವಿಚಾರ ಮಾತನಾಡುವುದಾದರೆ, ನಮ್ಮ ರೆವಿನ್ಯೂ ಸಚಿವರು ಎಲ್ಲ ಜಿಲ್ಲೆಗಳಿಗೂ ಹೋಗಿ ಪರಿಶೀಲನೆ ಮಾಡುವುದು ದುಸ್ಸಾಧ್ಯವಾದ ವಿಷಯ. ಸರಕಾರದ ಯಂತ್ರ ಕೆಳಗಿನಿಂದ ಮೇಲಿನವರೆಗೆ ಪ್ರಾಮಾಣಿಕತೆಯಿಂದ ವರ್ತಿಸಬೇಕು. ಕಷ್ಟಕ್ಕೊಳಗಾಗಿರುವ ಜನರ ಭವಿಷ್ಯ ಅವರ ಕೈಲಿದೆ. ಇದರಲ್ಲಿ ಉತ್ಪ್ರೇಕ್ಷೆ ಇಲ್ಲ. ಸರಕಾರ ಲಕ್ಷಗಟ್ಟಲೆ ಮೌಲ್ಯದ ಆಹಾರ ಧಾನ್ಯಗಳನ್ನು ತರಿಸಬಹುದು. ಲಕ್ಷಾಂತರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕೆಲಸಗಳನ್ನು ಮಾಡಿಸಬಹುದು. ಆದರೆ ಯಾವ ಜನರು ಅನ್ನವಿಲ್ಲದೆ ದುಃಖಕ್ಕೀಡಾಗಿದ್ದಾರೋ ಆ ಜನರಿಗೆ ಅದು ಸರಿಯಾಗಿ ತಲಪುವ ಕೆಲಸ ಮಾಡುವುದು ಸರಕಾರದ ಪ್ರಥಮ ಕರ್ತವ್ಯ. ಈ ಸಂದರ್ಭದಲ್ಲಿ ಏನೇನು ಕೆಲಸ ಒಂದು ಜಿಲ್ಲೆಯಲ್ಲಿ ಸರಕಾರ ಕೈಕೊಂಡಿದ್ದಾರೆಯೋ ಅಂಥ ಕೆಲಸವನ್ನು ಅಧಿಕಾರ ವರ್ಗದವರು ಮುತವರ್ಜಿಯಿಂದ ಮಾನವೀಯ ದೃಷ್ಟಿಯಿಂದ ನೋಡಿ ಕಾರ್ಯಗತ ಮಾಡಬೇಕೆಂದು ಒತ್ತಿ ಹೇಳುತ್ತೇನೆ. ಇಂಥ ವಿಷಯದಲ್ಲಿ ಪರಿಶೀಲನೆ ಮಾಡಿ ಸಲಹೆ ಪಡೆಯಲು ಖಾಸಗಿ ಜನರನ್ನು ಸಹ ಕರೆಯಬೇಕು. ಪ್ರಜಾಪ್ರಭುತ್ವದಲ್ಲಿ ದೇಶ ನಮ್ಮ ಜನತೆಯ ಕೈಯಲ್ಲಿ ಇರುವಾಗ್ಗೆ ಜನತೆಯನ್ನು ಬರಗಾಲದಿಂದ ರಕ್ಷಣೆ ಮಾಡಬೇಕಾದುದು ಆದ್ಯ ಕರ್ತವ್ಯವಾಗಿದೆ. ಇವತ್ತಿನ ದಿವಸ ಜನತೆಗೆ ತಿನ್ನುವುದಕ್ಕೆ ಅನ್ನ ಇಲ್ಲ ದುಡಿಯುವುದಕ್ಕೆ ಕೆಲಸವಿಲ್ಲ ಎಂದು ಹೇಳುವಂಥ ದಾರುಣವಾದ ಪರಿಸ್ಥಿತಿ ಬೇರೊಂದಿಲ್ಲ. ಆದುದರಿಂದ ಅಧಿಕಾರಿ ವರ್ಗದವರು ತಮ್ಮ ಪ್ರಭಾವ ಬೀರಿ ಜನತೆ ತಮ್ಮ ಮಕ್ಕಳು ಎಂದು ತಿಳಿದುಕೊಂಡು ಸಹಾಯ ಒದಗಿಸಬೇಕಾದುದು ಅತ್ಯಗತ್ಯ. ಅನ್ನವಿಲ್ಲದೆ ದುಃಖ ಪಡತಕ್ಕಂಥ ಜನರಿಗೆ ಕೆಲಸ ಕೊಟ್ಟು ಅನ್ನ ಒದಗಿಸುವುದು ಒಳ್ಳೆಯ ಕಾರ್ಯ. ಅಧಿಕಾರಿಗಳು ಅನೇಕ ಸಲ ಕಾರಣವಿಲ್ಲದೆ ಕೆಲಸ ನಿಧಾನ ಮಾಡುತ್ತಾರೆ ಇದು ಸರಿಯಲ್ಲ. ಇಂಥ ಒಂದು ಉದಾಹರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಮ್ಮ ತಾಲ್ಲೂಕಿನಲ್ಲಿಯ ಅಂಥ ಅಧಿಕಾರಿಯನ್ನು ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡಿದರು. ಅಂಥವರು ಬೇರೆ ಕಡೆ ಹೋದರೂ ಅಲ್ಲಿಯೂ ಕೂಡ ಅದನ್ನೇ ಮಾಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಭ್ರಷ್ಟಾಚಾರವನ್ನು ಕೆಲವೇ ದಿವಸಗಳಲ್ಲಿ ಸರಿಪಡಿಸುವುದು ಅಸಾಧ್ಯ. ಇಂಥ ಧಾರುಣ ಪರಿಸ್ಥಿತಿಯಲ್ಲಿ ಸರಕಾರ ಖರ್ಚು ಮಾಡುವ ಹಣವನ್ನು, ಕ್ಷಾಮ ಪೀಡಿತ ಪ್ರದೇಶದ ಜನರಿಗೆ ಒದಗಿಸುವ ಆಹಾರ ಧಾನ್ಯವನ್ನು ಜನತೆಗೆ ಸುಲಭವಾಗಿ ಅದಷ್ಟು ಜಾಗ್ರತೆ ಒದಗಿಸಬೇಕಾದದು ಅತ್ಯಗತ್ಯ. ರೈತರಿಗೆ ಒದಗಿಸುವ ಸಾಲದ ಹಣವನ್ನು ಸಹ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಒದಗಿಸಬೇಕು ಇಲ್ಲದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಲಕ್ಷಾಂತರ ಜನ ಅನ್ನವಿಲ್ಲದೆ ಕಷ್ಟಪಡುವುದು ಸರಿಯಲ್ಲ. ಇಂಥ ಸಂದರ್ಭದಲ್ಲಿ ಲಂಚ ತೆಗೆದುಕೊಂಡು ಶ್ರೀಮಂತರಾಗಬೇಕು ಎಂದು ಹೇಳತಕ್ಕಂಥ ಅನೇಕ ಜನ ಇದ್ದಾರೆ. ಈ ರೀತಿ ಲಂಚ ರುಷುವತ್ತುಗಳ ಮೋಹಕ್ಕೆ ಬಲಿಯಾದ ಜನರ ಮೇಲೆ ಸರಕಾರ ಅತಿ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು ಇದಲ್ಲದೆ ಅಂಥ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಬೇಕು. ಇಂಥ ಸಮಯದಲ್ಲಿ ಅಧಿಕಾರಿಗಳು ಆದರ್ಶವಾದ ರೀತಿಯಲ್ಲಿ ವರ್ತಿಸಬೇಕು. ಇದಲ್ಲದೆ ಹೆಚ್ಚಾಗಿ ಇರಿಗೇಶನ್ ವೆಲ್ಸ್—ನೀರಾವರಿ ಬಾವಿಗಳ ಕಡೆಗೆ ಗಮನ ಕೊಟ್ಟು ನೀರಾವರಿ ಬಾವಿ ತೆಗೆದಿದ್ದರೆ ಐ. ಪಿ. ಸೆಟ್ಟುಗಳನ್ನು ಒದಗಿಸಬೇಕು. ನಮ್ಮ ತಾಲ್ಲೂಕಿನಲ್ಲಿ 50—60 ನೀರಾವರಿ ಬಾವಿಗಳಾಗಿದ್ದರೂ ಕೂಡ ಕಳೆದ ಮೂರು ವರ್ಷದಿಂದ ಪವರ್ ಕೊಟ್ಟಿದ್ದರೂ ಸಹ ಐ. ಪಿ. ಸೆಟ್ಟುಗಳನ್ನು ಕೊಟ್ಟಿಲ್ಲ. ಅನೇಕ ಕಡೆ ಪವರ್ ಕೊಟ್ಟಿಲ್ಲ. ಪವರ್ ಕೊಟ್ಟಿದ್ದರೆ ಸೆಟ್ ಕೊಟ್ಟಿಲ್ಲ. ಐ ಪಿ ಸೆಟ್ ಕೊಟ್ಟಿದ್ದರೆ ಪವರ್ ಕೊಟ್ಟಿಲ್ಲ. ಈ ರೀತಿ ಆಗಿರುವುದು ಸರಿಯಿಲ್ಲ. ನೀರಾವರಿ ಬಾವಿಗಳಿಗೆ ಐ. ಪಿ. ಸೆಟ್ ಕೊಟ್ಟು ಪವರ್ ಒದಗಿಸಿ ಕೊಟ್ಟರೆ ಆಹಾರ ಧಾನ್ಯ ಬೆಳೆಯುವುದಕ್ಕೆ ಬಹಳ ಅನುಕೂಲವಾಗುವುದು. ಆಹಾರ ಧಾನ್ಯ ಬೆಳೆಯುವುದಕ್ಕೆ ಟಾಪ್ ಪ್ರಯಾರಿಟಿ ಕೊಡಬೇಕಾದುದು ಅಗತ್ಯವೆಂದು ಸರಕಾರದ ನೀತಿಯಾಗಿದೆ. ಪದೇ ಪದೇ ಈ ಮಾತನ್ನು ನಾವು ಹೇಳುತ್ತಿದ್ದೇವೆ. ಏಕೆ ಪವರ್ ಕೊಟ್ಟಿಲ್ಲ ಅದಕ್ಕೆ ಕಾರಣವೇನು, ಏನು ತೊಂದರೆ ಇದೆ ಅದನ್ನು ಹೇಗೆ ನಿವಾರಣೆ ಮಾಡಬೇಕು ಎಂಬುದರ ಬಗ್ಗೆ ಮೊದಲು ಗಮನ ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಅನೇಕ ನೀರಾವರಿ ಬಾವಿಗಳಾಗಿದ್ದರೂ ಕೂಡ ಪವರ್ ಕೊಟ್ಟಿಲ್ಲ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಒಂದು ಲಿಸ್ಟ್ ತಯಾರ್ಮಾಡಿ ಕೊಟ್ಟಿದ್ದೇನೆ. ಮುಖ್ಯ ಮಂತ್ರಿಗಳು ಎಲೆಕ್ಟ್ರಿಸಿಟಿ ಬೋರ್ಡ್ ಛೇರಮನ್ ಅವರನ್ನು ಕರೆಸಿ ಹೇಳಿದರು. ಆದರೂ ಕೂಡ ಪವರ್ ಯಾವಾಗ ಕೊಡುತ್ತಾರೋ ಗೊತ್ತಿಲ್ಲ. ಇಂಥ ದಾರುಣ ಪರಿಸ್ಥಿತಿಯಲ್ಲಿ ಜಾಗ್ರತೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಸಣ್ಣ ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನು ಸರಕಾರ ತೆಗೆದುಕೊಂಡಿದೆ. ನಮ್ಮ ತಾಲ್ಲೂಕಿನಲ್ಲಿ

ಮೂರು ಲಕ್ಷ ರೂಪಾಯಿಯ ಯೋಜನೆಯೊಂದಿದೆ. 60—70 ಸಾವಿರ ರೂಪಾಯಿಯಷ್ಟು ಕೆಲಸ ವಾಗಿದೆ. ಈ ಯೋಜನೆಯನ್ನು ಇಂಜನಿಯರ್ ಅವರು ರೀ-ಎಸ್ಟಿಮೇಟು ಮಾಡಿ ಒಂದು ವರ್ಷವಾಗಿ ಹೋದರೂ ಅದರ ಕಡೆ ನಿಗಾ ಕೊಟ್ಟಿಲ್ಲ. ನಾನು ಸರಕಾರಕ್ಕೆ ಒಂದು ಮನವಿ ಮಾಡಿಕೊಳ್ಳುತ್ತೇನೆ ಸಣ್ಣ ಸಣ್ಣ ನೀರಾವರಿ ಯೋಜನೆಗಳ ಫೈನಲ್ ಎಸ್ಟಿಮೇಟು ಮಾಡುವಾಗ್ಗೆ ಹೆಚ್ಚು ಶ್ರಮ ವಹಿಸಿ ಆರು ತಿಂಗಳುಗಳಲ್ಲಿ ಕೆಲಸ ಪೂರ್ತಿಯಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಕಂಟ್ರಾಕ್ಟರರಿಗೆ ಅನುಕೂಲ ಮಾಡಿಕೊಡುವುದಕ್ಕೆ ಎಸ್ಟಿಮೇಟು ಬದಲಾವಣೆ ಮಾಡಿದ್ದಾರೆಯೇ ಎಂಬುದನ್ನು ಪರಿ ಶೀಲನೆ ಮಾಡಬೇಕು. ನಮ್ಮ ಹೋಬಳಿಯಲ್ಲಿ ಒಂದು ಸಣ್ಣ ನೀರಾವರಿ ಯೋಜನೆ ಪೂರ್ತಿ ಮಾಡು ವುದರಿಂದ 500 ಎಕರೆ ಭೂಮಿಗೆ ನೀರು ದೊರೆಯುತ್ತದೆ. ಸಾಕಷ್ಟು ಅಹಾರ ಧಾನ್ಯ ಬೆಳೆದು ತಮಗೆ ಸಾಕಾಗುವಷ್ಟನ್ನು ಇಟ್ಟುಕೊಂಡು ಬೇರೆಯವರಿಗೆ ಸಹ ಭತ್ತ ಕೊಡುವುದಕ್ಕೆ ಸಾಧ್ಯವಿದೆ. ಸರಕಾರ ಎಲ್ಲ ಕೆಲಸವನ್ನೂ ಸದುದ್ದೇಶದಿಂದ ಮಾಡುತ್ತದೆ. ಪ್ರಕೃತಿ ವಿಕೋಪಕ್ಕೆ ಗುರಿಯಾದ ಕೋಟ್ಯಾಂತರ ಜನರ ದಾರುಣ ಪರಿಸ್ಥಿತಿ ಬಗೆಹರಿಸಬೇಕಾಗಿದೆ. ಆದುದರಿಂದ ಸರಕಾರ ಏನು ಸಹಾಯ ಮಾಡುತ್ತದೆಯೋ ಅದನ್ನು ಹೇಗೆ ಕೊಡಬೇಕು, ಜನರಿಗೆ ಅದು ಎಷ್ಟರಮಟ್ಟಿಗೆ ಅನುಕೂಲ ವಾಗುತ್ತದೆ ಎಂಬುದನ್ನು ಹೆಚ್ಚು ಶ್ರದ್ಧೆಯಿಂದ ಅಧಿಕಾರದಲ್ಲಿರುವವರು ನೋಡಬೇಕೆಂದು ಸರ ಕಾರಕ್ಕೆ ತಿಳಿಸುತ್ತೇನೆ.

ಇನ್ನೊಂದು ಮಾತನ್ನು ಇವತ್ತಿನ ದಿವಸ ಈ ಒಂದು ದಾರುಣ ಪರಿಸ್ಥಿತಿಯಲ್ಲಿ ಸರಕಾರಕ್ಕೆ ತಿಳಿಸಬೇಕಾಗಿದೆ. ಆಹಾರ ಧಾನ್ಯವನ್ನು ವರ್ತಕರು ಸಂಗ್ರಹ ಮಾಡುವುದಕ್ಕೆ ಅವಕಾಶ ಕೊಡದೆ ಆಹಾರ ಧಾನ್ಯ ಹೊರಗೆ ತರಬೇಕು. ವರ್ತಕರು ಆಹಾರ ಧಾನ್ಯ ಸಂಗ್ರಹಣೆ ಮಾಡಿ ಅಭಾವದ ಕೃತಕ ಪರಿಸ್ಥಿತಿ ಉಂಟು ಮಾಡುತ್ತಾರೆ. ನಮ್ಮ ಭಾಗದಲ್ಲಿ ಮಳೆ ಚೆನ್ನಾಗಿ ಆಗಿದೆ. ಮಳೆ ಇಲ್ಲದ ಭಾಗದಲ್ಲಿ ದನಗಳಿಗೆ ಕೂಡ ತಿನ್ನುವುದಕ್ಕೆ ಹುಲ್ಲು ಮೇವು ಇಲ್ಲದ ಕಠಿಣವಾದ ಪರಿಸ್ಥಿತಿ ಬರು ತ್ತದೆ. ಇಂಥ ದಾರುಣ ಪರಿಸ್ಥಿತಿ ಸಮಯದಲ್ಲಿ ಧೈರ್ಯದಿಂದ ಎದುರಿಸಬೇಕು. ಅಧಿಕಾರಿಗಳು ಕೊಡುವ ವರದಿಯನ್ನು ಪರಿಶೀಲಿಸಿ ವಿಮರ್ಶೆ ಮಾಡುವಾಗ್ಗೆ ಖಾಸಗಿ ಜನರ ಸ್ಥಳೀಯ ಜನರ ಸಲಹೆ ಪಡೆಯುವುದು ಒಳ್ಳೆಯದು. ಮಂತ್ರಿಗಳು ಕೂಡ ಅಂಥ ಸ್ಥಳದಲ್ಲಿ ಸಂಚಾರ ಮಾಡಿ ಆಯಾಯ ಕ್ಷೇತ್ರದ ಜವಾಬ್ದಾರಿಯುಳ್ಳವರಾದ ಶಾಸನ ಸಭಾ ಸದಸ್ಯರ ಸಲಹೆ ತೆಗೆದುಕೊಂಡು ಅಧಿಕಾರಿಗಳ ವರದಿ ಪರಿಶೀಲಿಸಬೇಕು. ಹಾಗೂ ಜನರಿಗೆ ಜಾಗ್ರತೆ ಸಹಾಯ ಕೊಡಬೇಕು. ರಿಲೀಫ್ ವರ್ಕ್ಸ್ ಪ್ರಾರಂಭ ಮಾಡಬೇಕು. ಜನರಿಗೆ ತಿನ್ನುವುದಕ್ಕೆ ಗೋಧಿ ಹಾಗೂ ಅಕ್ಕಿಯನ್ನು ಒದಗಿಸಿ ಕೊಡ ಬೇಕು. ಕೊನೆಯದಾಗಿ ಇಂಥ ದಾರುಣ ಪರಿಸ್ಥಿತಿಯಿಂದ ಜನತೆಯನ್ನು ಕಾಪಾಡಿ ದೇಶಕ್ಕೆ ಒಳ್ಳೇ ಹೆಸರು ನಮ್ಮ ಸರಕಾರ ತರುತ್ತಾರೆಂದು ನಾನು ಭಾವಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಈ ವರ್ಷ ಮಳೆ ಇಲ್ಲದೆ ಬಹು ಭಾಗದಲ್ಲಿ ಅಭಾವ ಪರಿಸ್ಥಿತಿಯುಂಟಾಗಿ ಆಹಾರ ಧಾನ್ಯ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಸರಕಾರದವರು ಅಭಾವ ಪರಿಸ್ಥಿತಿ ನೀಗುವುದಕ್ಕಾಗಿ ನಾನಾ ಯೋಜನೆಗಳನ್ನು ಕೈಕೊಂಡಿದ್ದಾರೆ. ಮೊನ್ನೆ ದಿನ ಮುಖ್ಯ ಮಂತ್ರಿಗಳು ದಿಲ್ಲಿಗೆ ಹೋಗಿ ಆಹಾರ ಧಾನ್ಯ ಅಭಾವ ಪರಿಸ್ಥಿತಿ ನೀಗುವುದಕ್ಕೆ ಕೇಂದ್ರ ಸರಕಾರದಿಂದ ಎರಡು ಲಕ್ಷ ಟನ್ ಗೋಧಿ ಒಂದು ಲಕ್ಷ ಟನ್ ಅಕ್ಕಿ ದೊರಕಿಸುವ ಸಂದೇಶ ಕೊಟ್ಟಿರುವುದನ್ನು ಹೃತ್ಪೂರ್ವಕವಾಗಿ ಸ್ವಾಗತಿಸತಕ್ಕಂಥಾದ್ದು. ಸರಕಾರ ದವರು ಆಹಾರ ಧಾನ್ಯವನ್ನು ಸಕಾಲದಲ್ಲಿ ತಂದು ಜನರಿಗೆ ಒದಗಿಸಿ ಕೊಡಬೇಕು. ಇಲ್ಲದಿದ್ದರೆ ಬರೀ ಪ್ಲಾಟ್‌ಫಾರ್ಮ್ ಸ್ಪೀಚ್ ಮಾಡಿ ಆಶೆ ತೋರಿಸಿದಂತೆ ಆಗುವುದು ದುಃಖದ ಸಂಗತಿ. ಆದು ದರಿಂದ ಇದರ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಸರಿಯಾದ ಸಮಯದಲ್ಲಿ ಆಹಾರ ಧಾನ್ಯ ಜನರಿಗೆ ಒದಗಿಸಿ ಕೊಡಬೇಕೆಂದು ನಾನು ಹೇಳುತ್ತೇನೆ.

ನಮ್ಮ ಧಾರವಾಡ ಜಿಲ್ಲೆಯ ಬಗ್ಗೆ ಹೇಳುವುದಾದರೆ ಕಳೆದ ಐದಾರು ವರ್ಷಗಳಿಂದ ಮಳೆ ಇಲ್ಲದೆ ಅಭಾವ ಪರಿಸ್ಥಿತಿ ಉಂಟಾಗಿದೆಯಲ್ಲದೆ ಅತಿ ವೃಷ್ಟಿಯಿಂದ ನೆರೆಯ ಹಾವಳಿಯಿಂದ ಹಾಗು ಜೋಳದ ಬೆಳೆಗೆ ನವಣೆ ಬೆಳೆಗೆ ಚಿಟ್ಟೆ ಹಿಡಿದ ಕಾರಣದಿಂದ ಬರಗಾಲ ಪರಿಸ್ಥಿತಿ ಉಂಟಾಗಿದೆ ಈ ಪ್ರದೇಶ ಬರಗಾಲ ಪ್ರದೇಶ ಎಂದು ಸರಕಾರದವರು ಸಾರಿದ್ದಾರೆ. ಇಂಥ ಸಮಯದಲ್ಲಿ ರೈತರಿಗೆ ದಿಕ್ಕು ತೋಚದೆ ಕಂಗಾಲಾಗಿದ್ದಾರೆ. ಆದರೂ ಕೂಡ ಇಂಥ ಜನರ ಕಡೆಯಿಂದ ಕಂದಾಯದ ಬಾಕಿ ವಸೂಲಿ ಬಹಳ ಒತ್ತಾಯದಿಂದ ಅವರ ಮನೆ ಜಪ್ತಿ ಮಾಡಿ ವಸೂಲ್ಮಾಡತಕ್ಕಂಥ ಒಂದು ಪರಿಸ್ಥಿತಿ ಈ ಭಾಗದಲ್ಲಿ ಇದೆ.

ಎರಡನೇದು, ಕೊಟ್ಟಂಥ ತಕಾವಿ ಸಾಲವನ್ನು 5-6 ವರ್ಷ ಕೊಡುವುದಕ್ಕೆ ಯೋಗ್ಯತೆ ಇಲ್ಲದೇನೆ, ದಾರಿ ಇಲ್ಲದೇನೆ, ಒಂದು ಕಟುವಾದ ಹೊರೆಯನ್ನು ಹೊರಿಸತಕ್ಕಂಥ ಪದ್ಧತಿಗಳಿವೆ.

(ಶ್ರೀ ಸಿದ್ದಯ್ಯ ಕಾಶಿಮಠ)

ನಮ್ಮ ಸರಕಾರ ಈ ಸಮಯದಲ್ಲಿ ಜಿಲ್ಲೆಯಲ್ಲಿ ಯಾವ ಪ್ರದೇಶ ಅಭಾವ ಪರಿಸ್ಥಿತಿಗೆ ಸೇರಿದೆ ಆ ಪ್ರದೇಶ ದಲ್ಲಿಯಾದರೂ ಸಹಕಾರ ಸಂಘಗಳ ಸಾಲ ಹಾಗೂ ತಕಾವಿ ಸಾಲಗಳ ಬಗ್ಗೆ ರಿಯಾಯಿತಿ ಕೊಡ ಬೇಕು. ಅವುಗಳನ್ನು ಒಂದು ವರ್ಷ ಮುಂದುವರಿಸಬೇಕು.

ಧಾರವಾಡ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ತುಂಗಭದ್ರ, ವರದ ಹಾಗೂ ಮಲಪ್ರಭ ನದಿಗಳು ಹರಿಯುತ್ತಿವೆ. ಇದಲ್ಲದೆ ಅನೇಕ ಹಳ್ಳಗಳೂ ಹರಿಯುತ್ತಿವೆ. ಇಂಥ ನೀರಿನ ಸಾಫಲ್ಯತೆ ಇದ್ದರೂ ನೀರಾವರಿಯಲ್ಲಿ ಬಹಳ ಹಿಂದುಳಿದಿದೆ ಆ ಜಿಲ್ಲೆ ಎಂದು ಹೇಳುವುದರಲ್ಲಿ ನಾಚಿಕೆಗೊಳ್ಳುವ ಪರಿಸ್ಥಿತಿ ಇದೆ. ಸರಕಾರದ ಪ್ರಾಜೆಕ್ಟುಗಳು, ಯೋಜನೆಗಳು ಇಷ್ಟಿದ್ದಾಗ್ಯೂ ಕೂಡ, ಅಲ್ಲಿ ಹರಿಯತಕ್ಕ ನೀರನ್ನು ಜನರಿಗೆ ಒದಗಿಸದೆ ಇರುವುದು ದುರ್ದೈವದ ಸಂಗತಿ. ಹೊಳೆಗಳು ಹರಿಯುತ್ತಾ ಇರುವ ದಂಡೆಗಳ ಮೇಲೆ ಪೀಕು ಒಣಗಿದೆ. ಆ ನೀರನ್ನು ತೆಗೆದುಕೊಳ್ಳದೆ ಇರುವ ಪರಿಸ್ಥಿತಿಯಲ್ಲಿ ರೈತರಿರುವು ದಕ್ಕೆ ಸರಕಾರದವರೆ ಜವಾಬ್ದಾರರು. ಇರಿಗೇಶನ್ ಡಿಪಾರ್ಟ್‌ಮೆಂಟು ಧಾರವಾಡ ಜಿಲ್ಲೆಯಲ್ಲಿ ಇದೆಯೊ ಇಲ್ಲವೊ ಎನಿಸುತ್ತದೆ. ಇದನ್ನು ಓಪನ್ನಾಗಿ ಕೇಳುತ್ತೇನೆ. ಸರಕಾರದವರು ಯಾವು ದಾದರೂ ಯೋಜನೆಯನ್ನು ಕೈಗೊಳ್ಳಲು ಕ್ರಮ ಕೈಗೊಂಡಿದ್ದಾರೆಯೆ ಎಂಬುದನ್ನು ತಿಳಿಸಬೇಕು. ಬಹು ದಿವಸದಿಂದ ಮಲಪ್ರಭಾ ಯೋಜನೆಯನ್ನು ಕೈಗೊಂಡಿದ್ದೇವೆಂದು ಹೇಳುತ್ತಾರೆ. ಇದೇ ರೀತಿ ಯಲ್ಲಿ ಪ್ರೋಗ್ರೆಸ್ ಆದರೆ, ಅದರಿಂದ ಇನ್ನು 20 ವರ್ಷವಾದರೂ ಸಾಫಲ್ಯತೆ ಒದಗಲಾರದು. ಇಲ್ಲಿಯವರೆಗೆ 2-3 ವರ್ಷವಾದರೂ ಕೂಡ ಫೌಂಡೇಶನ್ ಸ್ಟೋನು ಮಾತ್ರ ಹಾಕಿದೆಯೇ ವಿನಃ, ಇನ್ನೇನೂ ಉಪಯುಕ್ತವಾದ ಕೆಲಸವಾಗಿಲ್ಲ.

ಇನ್ನು ನೀರಾವರಿ ಬಾವಿಗಳ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಗೆ ಬಹಳ ಕಡಿಮೆ ಗ್ರಾಂಟು ಕೊಟ್ಟಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ನೂರಾರು ಅಪ್ಲಿಕೇಷನ್ನುಗಳು ಪೆಂಡಿಂಗಿನಲ್ಲಿವೆ. ಸ್ಥಳದ ಅಧಿಕಾರಿಗಳನ್ನು ಕೇಳಿದರೆ ಅವರು ಸರಕಾರದ ಕಡೆ ಬೆಟ್ಟು ತೋರಿಸತಕ್ಕಂಥ ಪರಿಸ್ಥಿತಿ ಬಂದಿದೆ. ನೀವು ಕೊಟ್ಟಂಥ ಹಣ ಸರಿಯಾಗಿ ಹಂಚಿದರೆ ನಮಗೆ ಸಿಕ್ಕತಕ್ಕಂಥಾದ್ದು 10 ಪರ್ಸೆಂಟು. ಸರಕಾರದವರು ಮತ್ತು ಮುಖ್ಯಮಂತ್ರಿಗಳು ಬೇರೆ ಜಾಗದಲ್ಲಿ ಸಾವಿರಾರುಗಟ್ಟಲೆ ಬಾವಿಗಳನ್ನು ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ರೊಕ್ಕದ ಪರಿಸ್ಥಿತಿ ನೋಡಿದರೆ ಹೀಗಿದೆ. ಸರಕಾರದವರು ಬಾವಿಗೆ ಒಂದು ಕಡೆ ಆಶ್ವಾಸನೆ ಕೊಟ್ಟು, ಇನ್ನೊಂದು ಕಡೆ ಅರ್ಜಿಕೊಟ್ಟರೂ ಹಣ ಇಲ್ಲವೆಂದು ಹೇಳಿದರೆ, ಹಳ್ಳಿಜನರ ವಿಶ್ವಾಸ ಕಳೆದುಕೊಂಡ ಹಾಗಾಗುತ್ತದೆ. ಆದ್ದರಿಂದ ಸರಕಾರ ಸರಿಯಾದ ರೀತಿಯಲ್ಲಿ ನಡೆದುಕೊಂಡು ಎಲ್ಲ ಅರ್ಜಿದಾರರಿಗೂ ಬಾವಿಗೆ ಹಣ ಒದಗಿಸುವಂತೆ ಆದೇಶ ಕೊಡಬೇಕು.

ಈಗಾಗಲೆ ನಿನ್ನೆಯ ದಿವಸ ಮಾನ್ಯ ಮಂತ್ರಿಗಳು 29 ಲಕ್ಷ ರೂಪಾಯಿ ಡಿವಿಜನಲ್ ಕಮಿಷನರಿಗೆ ಹಂಚಿದೆ, ಅದರಿಂದ ಅಭಾವ ನೀಗಿಸುತ್ತೇವೆಂದು ಹೇಳಿದರು. 29 ಲಕ್ಷ ರೂಪಾಯಿಯನ್ನು 4 ಡಿವಿಜನ್ನುಗಳಿಗೆ ಯಾವ ತೆರನಾಗಿ ಹಂಚಲಾಗಿದೆ ? ಒಂದು ಊರಿಗೆ 100 ರೂಪಾಯಿಯಂತೆ ಬರುವ ಪರಿಸ್ಥಿತಿ ಇದೆ. ಈ ಅಲ್ಪ ಹಣದಿಂದ ನೀರಾವರಿ ಯೋಜನೆಯನ್ನು ಮುಂದುವರಿಸುವು ದಕ್ಕಾಗಲಿ, ಆಹಾರೋತ್ಪನ್ನ ಹೆಚ್ಚು ಮಾಡುವುದಕ್ಕಾಗಲಿ ಸಾಧ್ಯವಿಲ್ಲ.

ಈಗಾಗಲೇ ಅಭಾವ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ನಮ್ಮ ಭಾಗದಲ್ಲಿ ಒಡ್ಡುಗಳನ್ನು ಹಾಕುವ ಯೋಜನೆ ಮಾಡಿದ್ದಾರೆ. ಅಭಾವಕ್ಕೊಳಗಾಗಿರುವ ಪ್ರದೇಶಗಳಲ್ಲಿ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಅಲ್ಲಿ ಹಣ ಬಹಳ ಕಡಿಮೆ ಇದೆ. ಆದ್ದರಿಂದ ರಸ್ತೆ ಕೆಲಸವನ್ನು 3-4 ದಿವಸದಲ್ಲಿ ಮುಗಿಸಿಬಿಟ್ಟಿದ್ದಾರೆ. ಹೀಗಾಗಿ ಜನಗಳಲ್ಲಿ ಹಾಹಾಕಾರವೆದ್ದಿದೆ ; ಅನ್ನವಿಲ್ಲದೆ, ನಿರ್ಗತಿಕರಾಗಿ ಬೇರೆ ತಾಲ್ಲೂಕಗಳಿಗೂ, ಜಿಲ್ಲೆಗೂ ಹೋಗುತ್ತಿರುವ ಪರಿಸ್ಥಿತಿ ಇದೆ. ಮೇಲಿಂದ ಮೇಲೆ ಈ ದುಸ್ಥಿತಿಯನ್ನು ಆಫೀಸರುಗಳಿಗೆ ತಿಳಿಸಿದರೂ ಕೂಡ ಅವರು ಜನರಿಗೆ ಏನೂ ಪರಿಹಾರ ಯೋಚನೆ ಮಾಡಿದಹಾಗೆ ಕಾಣುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬಾರೆಹೊಸೂರು, ಸೂರ್ನಗಿ ಮತ್ತಿತರ ಗ್ರಾಮಗಳಲ್ಲಿ ಬರಗಾಲ ಪರಿಸ್ಥಿತಿ ಬಂದು ಬೇರೆ ಜಿಲ್ಲೆಗೆ ಹೋಗಿದ್ದಾರೆ. ಅಲ್ಲಿ 4 ಮೈಲಿ ದೂರದ ರಸ್ತೆಯನ್ನು 6 ದಿವಸದಲ್ಲಿಯೇ ಮುಗಿಸಿದ್ದಾರೆ.

ಅಭಾವ ಪರಿಸ್ಥಿತಿಗೆ ಒಳಗಾಗಿರುವಂಥ ಪ್ರದೇಶಗಳಲ್ಲಿ ಕಾಂಗಾರಿಗಳನ್ನು ನಡೆಸುವಾಗ ಎರಡು ದಿವಸಕ್ಕೆ ಒಮ್ಮೆಯಾದರೂ ಕೂಲಿಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಪಿ. ಡಬ್ಲ್ಯು. ಡಿ. ಯವರು ತಿಂಗಳುಗಟ್ಟಲೆಯಾದರೂ ಪಗಾರವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಈ ದೋಷವನ್ನು ತಾವು ಸರಿಪಡಿಸಬೇಕು. ಆಫೀಸರುಗಳು ದಕ್ಷತೆಯಿಂದ ಕೆಲಸವನ್ನು ವಹಿಸಿಕೊಂಡು, ಕಷ್ಟವನ್ನು ದೂರ ಮಾಡಲಿಕ್ಕೆ ಬದ್ಧಕಂಕಣರಾಗಿ ನಿಂತರೆ ಮಾತ್ರ ಪರಿಸ್ಥಿತಿಯನ್ನು ಎದುರಿಸಬಹುದೇ ಹೊರತು, ಸರಕಾರದವರು ಬರೀ ನೋಟಿಫಿಕೇಷನ್ ಕೊಟ್ಟರೆ ಸರಿಹೋಗಲಾರದು.

ಐದಾರು ವರ್ಷಗಳಿಂದ ಬೀಜ ಹಾಕಿ, ಆರು ಎತ್ತುಗಳನ್ನು ಇಟ್ಟುಕೊಂಡು ಬೇಸಾಯ ಮಾಡುತ್ತಿದ್ದ ರೈತರೆಷ್ಟೋ ಮಂದಿ, ಬರಗಾಲದ ಕಾಂಗಾರಿಯಲ್ಲಿ ಹನ್ನೆರಡಾಣೆ ದುಡಿದುಕೊಂಡು ಜೀವನ ತಳ್ಳುವ ಪರಿಸ್ಥಿತಿ ಬಂದಿದೆ. ರೈತನು ತನಗೆ ಇರತಕ್ಕಂಥ ದನಕರುಗಳನ್ನು ಸ್ಲಾಟರ್‌ಹೌಸಿಗೆ ಕಳುಹಿಸುತ್ತಿರುವ ದೃಶ್ಯವನ್ನು ನೋಡುವ ಸಂದರ್ಭ ನಮ್ಮ ಭಾಗದಲ್ಲಿ ಬಂದಿದೆ. ರೈತನಿಗೆ ಆಹಾರ ವಿಲ್ಲ, ದನಗಳಿಗೆ ಮೇವಿಲ್ಲ. ಮಂತ್ರಿಗಳು ಹೇಳಿದರು, ತಕಾವಿ ಲೋನ್ ಹಳ ಕಳುಹಿಸಿದ್ದೇವೆಂದು. ಎಷ್ಟು ಹಣ ಕಳುಹಿಸಿದ್ದೀರಿ ? ಬಿತ್ತನೆಗೂ ಆಹಾರದ ಕೊರತೆ ಇರುವುದರಿಂದ, ಬೀಜವಿಲ್ಲ. ನಮ್ಮ ಭಾಗದಲ್ಲಿ ಮುಖ್ಯವಾದ ಪೀಕು ಶೇಂಗಾಯಿ. ಅದರ ಬೆಲೆ ತುಟ್ಟಿಯಾಗಿ, ಬೀಜ ಸಿಕ್ಕದ ಪರಿಸ್ಥಿತಿ ಬಂದಿದೆ. ಕೊಡುತ್ತಿರುವ ತಕಾವಿ ಸಾಲದು. ಅದನ್ನಾದರೂ ನಿಮ್ಮ ಆಫೀಸರುಗಳೇ ಹಳ್ಳಿಗೆ ಹೋಗಿ ವಿಲೇವಾರಿ ಮಾಡುವುದು ಒಳ್ಳೆಯದು. ತಾಲ್ಲೂಕು ಕಚೇರಿಗಳಲ್ಲಿ ಹಂಚುವುದರ ಬದಲು, 50 ರೂಪಾಯಿಗೆ ಕಡಿಮೆ ಇರುವ ಹಣವನ್ನಾದರೂ ನಿಮ್ಮ ಸರ್ಕಲ್ ಇನ್‌ಸ್ಪೆಕ್ಟರುಗಳನ್ನು ಹಳ್ಳಿಗಳಿಗೆ ಕಳುಹಿಸಿ ಹಂಚಿಸುವುದು ಒಳ್ಳೆಯದು.

ಹಾವೇರಿ ಭಾಗದಲ್ಲಿ ಮನೆಗಳನ್ನು ಕಟ್ಟಲು ಪ್ರಾರಂಭಿಸಿದ್ದಾರೆ. ಮೂರು ವರ್ಷದ ಲಾಗಾಯಿತು ಅದಕ್ಕೆ ತಗಡು ಸಿಕ್ಕದೆ ಹಾಗೇ ನಿಂತಿವೆ. ಅದಕ್ಕೆ ತಗಡಿನ ವ್ಯವಸ್ಥೆಮಾಡಿ, ಅವುಗಳನ್ನು ಜೋಪಡಿ ರೂಪದಲ್ಲಿ ಬೇಗ ಹಾಕಿಕೊಡಬೇಕು.

ಇನ್ನು ಹಳ್ಳಿಗಳಲ್ಲಿ ಚಿಟ್ಟೆಗಳ ಹಾವಳಿ ಹೇಳತೀರದು. ಸಸಿ ಮೇಲಕ್ಕೆ ಬರುತ್ತಿದ್ದಹಾಗೆ ಚಿಟ್ಟೆಗಳೆದ್ದು ನಾಶಮಾಡಿಬಿಡುತ್ತವೆ. ಕಾಲರ ಹೋಗಲಾಡಿಸುವುದಕ್ಕೆ ಕಾಲರ ಎರ್ರ್ಯಾಡಿಕೇಷನ್ ಸ್ಕೀಮಿದೆ; ಮಲೇರಿಯ ಹೋಗಲಾಡಿಸುವುದಕ್ಕೆ ಮಲೇರಿಯಾ ಎರಾಡಿಕೇಷನ್ ಸ್ಕೀಮಿದೆ. ಅದೇ ರೀತಿ ಚಿಟ್ಟೆಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ಕಂಟಿನ್ಯುಯಸ್ ಸ್ಕೀಮನ್ನು ಪ್ರಾರಂಭಿಸಿ ಹೆಚ್ಚು ಆಹಾರೋತ್ಪತ್ತಿಗೆ ಸಹಾಯ ಮಾಡಬೇಕು. ಈ ಸ್ಕೀಮನ್ನು ಏಕೆ ಪ್ರಾರಂಭಿಸಿಲ್ಲ? ಇದು ರೈತನ ರಾಜ್ಯ, ರೈತನ ಹಿತಕ್ಕಾಗಿ ಕೆಲಸಮಾಡುತ್ತಿದ್ದೇವೆಂದು ಹೇಳುತ್ತೀರ. ಆದರೆ ರೈತನಿಗೆ ಈ ವಿಷಯದಲ್ಲಿ ರಿಲೀಫ್ ಕೊಟ್ಟು ಪೈರು ನಾಶವಾಗದಂತೆ ಸರಕಾರ ಏನೂ ಮಾಡಿಲ್ಲ. ಅಗ್ರಿಕಲ್ಚರ್ ಮಿನಿಸ್ಟರು ಹಾವೇರಿ ಭಾಗದಲ್ಲಿ ಬೆಳೆಗಳಿಗೆ ಸಿಂಪಡಿಸುವುದಕ್ಕಾಗಿ ರೈತರಿಗೆ ಔಷಧಿಯನ್ನು ಸಪ್ಲೈ ಮಾಡಿದೆ ಎಂದು ಹೇಳಿದರು. ಔಷಧಿಯನ್ನು ಇಲಾಖೆಯ ನೌಕರರೇ ಸಿಂಪಡಿಸಬಹುದಲ್ಲ? ಕಾಲರ ಬಂದಾಗ ಇಂಜಕ್ಷನ್ ಟ್ಯೂಬುಗಳನ್ನು ಜನಗಳಿಗೇ ಕೊಟ್ಟು ಇನಾಕ್ಯುಲೇಷನ್ ತೆಗೆದುಕೊಳ್ಳಿ ಅಂತ ಹೇಳುವುದಿಲ್ಲ. ಚಿಟ್ಟೆಗಳ ಹಾವಳಿಯನ್ನು ತಡೆಗಟ್ಟದಿದ್ದರೆ ಒಂದೂವರೆ ಲಕ್ಷ ಎಕರೆ ಜಮೀನಿನಲ್ಲಿ ಉತ್ಪಾದನೆ ಕಡಿಮೆಯಾಗಿ ಆಹಾರ ಕಡಿಮೆಯಾಗುತ್ತವೆ. ಆದ್ದರಿಂದ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಅದಷ್ಟು ನಿಗಾ ವಹಿಸಿ ಈ ಚಿಟ್ಟೆಗಳ ನಿರ್ಮೂಲನಕ್ಕೆ ಕ್ರಮ ತೆಗೆದುಕೊಳ್ಳಬೇಕು.

ವರದಾ ನದಿ ಬಗ್ಗೆ ಬೇಗ ಸರ್ವೆ ನಡೆದು, ಯೋಜನೆ ಕಾರ್ಯಗತವಾದರೆ, ಹಾವೇರಿ, ಹಾನಗಲ್, ಶಿರಹಟ್ಟಿ, ಮುಂಡರ್ಗಿ—ಈ ನಾಲ್ಕು ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯ ಒದಗುತ್ತದೆ.

ಇನ್ನು ಫುಡ್‌ಗ್ರೇನ್ಸ್ ವಿಷಯದಲ್ಲಿ ಹೇಳಬೇಕೆಂದರೆ, ರೈತನಿಗೆ ಕಾಳು ಇಲ್ಲ. ರೇಷನಿಂಗ್ ಅಂಗಡಿಗಳನ್ನು ಸರಕಾರದವರು ತೆಗೆಯಬೇಕು. ಸಹಕಾರ ಸಂಘಗಳ ಮೂಲಕ ಪರಿಹಾರ ಹಂಚುವ ಸಾಧ್ಯತೆ ಇದೆ. ಅದನ್ನು ಮಾಡಬೇಕು. ಕೊಡತಕ್ಕಂಥ ಗೋಧಿಯಲ್ಲಿ ಕೆಲವೊಂದು ದೋಷವಿದೆ. ಇನ್ನೊಂದು ಆಶ್ಚರ್ಯವೇನೆಂದರೆ ಸಹಕಾರ ಸಂಘಗಳಿಗೆ ಪರ್ಮಿಟ್ ತೆಗೆದುಕೊಂಡು ಹೋಗಿ ಗೋಧಿ ಕೇಳಿದಾಗ, ನಿರಾಕರಿಸಿದ ಪ್ರಸಂಗಗಳಿವೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿರುವುದನ್ನು ಕಡಿಮೆ ಮಾಡಬೇಕು. ಮತ್ತು ಆಯಾ ಭಾಗದಲ್ಲಿನ ಮುಖ್ಯವಾದ ಆಹಾರ ಬೆಳೆಗಳಾದ ಜೋಳ, ರಾಗಿ, ಮತ್ತು ಗೋಧಿಯನ್ನು ಸಂಗ್ರಹ ಮಾಡಿ ಜನರಿಗೆ ಸಹಾಯ ಮಾಡಬೇಕು.

ರಿಲೀಫ್ ವರ್ಕ್ಸ್ ನಮ್ಮ ಭಾಗದಲ್ಲಿ ಆದಷ್ಟು ಹೆಚ್ಚಿನ ರೀತಿಯಲ್ಲಿ ಸ್ಟಾರ್ಟ್ ಮಾಡಿ ಜನರಿಗೆ ಕೆಲಸ ಒದಗಿಸುವುದಕ್ಕೆ ಪ್ರಯತ್ನಮಾಡಬೇಕು. ಆಫೀಸರುಗಳಿಗೆ ಈ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಪತಿಗಳೇ; ನಾವು ಪ್ರತಿವರ್ಷವೂ ಈ ಬರಗಾಲದ ವಿಷಯದಲ್ಲಿ ಪದೇ ಪದೇ ಮಾತನಾಡುತ್ತಾ ಇದ್ದೇವೆ, ಇದರಿಂದ ಏನಾದರೂ ಪ್ರಯೋಜನವಾಗಿದೆಯೇ ಎಂದು ಯೋಚನೆ ಮಾಡಿದರೆ ಏನೂ ಮುಂದುವರಿದಂತೆ ಕಾಣಲಿಲ್ಲ. ಬರಗಾಲ ಹೆಚ್ಚಾಗುತ್ತಾ ಇದೆಯೇ ಹೊರತು ಸುಧಾರಣೆಯಾಗುತ್ತಾ ಇದೆ ಎಂದು ನಮ್ಮ ಕಣ್ಣಿಗೆ ಕಾಣುತ್ತಾ ಇಲ್ಲ. ಕಾರಣವೇನೆಂದರೆ ಇಲ್ಲಿ ಒಂದೆರಡು ದಿವಸ ಚರ್ಚೆ ಮಾಡುವುದು, ಸುಮ್ಮನೆ

(ಶ್ರೀ ಎನ್. ನಂಜೇಗೌಡ)

ಮನೆಗೆ ಹೋಗುವುದು ಇಷ್ಟರಲ್ಲಿ ಮುಕ್ತಾಯವಾಗುತ್ತಾ ಇದೆಯೇ ಹೊರತು ಒಳ್ಳೆಯ ಕೆಲಸಗಳು ಅಭಿವೃದ್ಧಿ ಕಾರ್ಯ ನಡೆದಿದೆಯೇ ಎಂದರೆ ಏನೂ ನಡೆದಿಲ್ಲ ಎಂದು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ. ನಮ್ಮ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 45 ಸಾವಿರ ಎಕರೆ ನೀರಾವರಿ ಮಾಡುವುದಕ್ಕೆ ಅವಕಾಶವಿದ್ದು ಈಗ ಕೇವಲ 10-15 ಸಾವಿರ ಎಕರೆ ಮಾತ್ರ ತರಿ ಆಗಿದೆ. ಉಳಿದಿರತಕ್ಕ 30 ಸಾವಿರ ಎಕರೆ ತರಿ ಮಾಡುವುದಕ್ಕೆ ಇನ್ನೂ ಅವಕಾಶವಿದೆ. ನೀರಾವರಿ ಕೆಲಸದಲ್ಲಿ ನಾವು ಬಹಳ ಹಿಂದೆ ಬಿದ್ದಿರುವುದೇ ಈ ಅಭಾವಕ್ಕೆ ಕಾರಣ ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ಪಂಪ್ ಸೆಟ್ಟುಗಳನ್ನು ಹಾಕುವುದಕ್ಕೆ ಬೇಕಾದಷ್ಟು ಅವಕಾಶ ಇದ್ದು ವಿದ್ಯುಚ್ಛಕ್ತಿ ನಮಗೆ ಸಾಕಾದಷ್ಟು ದೊರೆಯುವ ಸಂಭವ ಇರುವುದರಿಂದ ಇರಿಗೇಷನ್ ಬಾವಿಗಳನ್ನು ತೋಡುವುದಕ್ಕೆ ಸರ್ಕಾರದವರು ನಿಗಾ ತೆಗೆದುಕೊಂಡು 10 ಸಾವಿರ ಎಕರೆಗೆ ಒಂದೊಂದು ಪ್ರದೇಶವನ್ನಾಗಿ ವಿಂಗಡಿಸಿ ಅಲ್ಲಿಗೆ ಸರ್ಕಾರದವರೇ ಬಾವಿ ತೋಡಿಸಿ ಪಂಪ್ ಸೆಟ್ಟುಗಳನ್ನು ಹಾಕಿ ನೀರನ್ನು ಸಪ್ಲೈ ಮಾಡಿ ರೈತರಿಂದ ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್‌ನನ್ನು ವಸೂಲು ಮಾಡಿದ್ದೇ ಆದರೆ ನಮ್ಮ ತಾಲ್ಲೂಕಿನಲ್ಲಿ ಅದನ್ನು ಕೊಡುವುದಕ್ಕೆ ರೈತರು ಸಿದ್ಧವಾಗಿದ್ದಾರೆ. ಅದರಂತೆ ಸರ್ಕಾರದವರು ಒಂದು ಸ್ಕೀಮನ್ನು ತಯಾರಿಸಿ ಬಾವಿಗಳನ್ನು ತೆಗೆದು ಪಂಪ್ ಸೆಟ್ಟುಗಳನ್ನು ಹಾಕುವುದರಿಂದ ತರೀ ವ್ಯವಸಾಯಕ್ಕೆ ಅನುಕೂಲವಾಗುತ್ತದೆ ಮತ್ತು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೂ ಬರುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಈಗಿರುವ ಪದ್ಧತಿಯ ಪ್ರಕಾರ ಈಗ ತಾವು ಬಾವಿಗಳಿಗೆ ಕೊಟ್ಟಿರತಕ್ಕ ದುಡ್ಡು ಶೇಕಡ ಮುಕ್ಕಾಲು ಭಾಗ ದುರುಪಯೋಗವಾಗುತ್ತಾ ಇದೆ ನಾಲ್ಕು ಆಣೆ ಪ್ರಯೋಜನ ಸಿಕ್ಕುತ್ತಾ ಇದ್ದರೆ 12 ಆಣೆ ದುರುಪಯೋಗವಾಗುತ್ತಾ ಇದೆ. ಹೆಚ್ಚು ದುಡ್ಡನ್ನು ತಾವು ಖರ್ಚು ಮಾಡುತ್ತಾ ಇದ್ದರೂ ಸಹ ಅದರಿಂದ ಪ್ರತಿಫಲ ಸಿಕ್ಕುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಲ್ಲದೇ ಈಗತಾನೆ ಮಾತನಾಡಿದ ಮಾನ್ಯ ಸದಸ್ಯರುಗಳು ಆಹಾರದ ಬೆಲೆ ಇಳಿಯಬೇಕು, ಅದು ಇಳಿಯದೇ ಬಹಳ ಜನಕ್ಕೆ ತೊಂದರೆಯಾಗಿದೆ ಎಂದು ಹೇಳಿದರು. ಆಹಾರದ ಬೆಲೆ ಇಳಿಯಬೇಕಾದರೆ ಉತ್ಪನ್ನ ಜಾಸ್ತಿಯಾಗಬೇಕು, ಹಾಗಲ್ಲದೇ ರೇಟನ್ನು ಇಳಿಸುತ್ತಾ ಹೋದರೆ ರೈತನಿಗೆ ಉತ್ಸಾಹ ಕಡಿಮೆಯಾಗಿ ಇನ್ನೂ ಹಾನಿ ಜಾಸ್ತಿಯಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಬಹಳ ನಿಗಾ ಕೊಡಬೇಕು. ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ಮಂಡ್ಯ ಜಿಲೆಯಲ್ಲಿ ಪ್ಯಾಕ್‌ಜ್ ಪ್ರೋಗ್ರಾಂ ಇದೆ. ಅಲ್ಲಿ ಬೀಜ ಹಾಕಿದಲಾಗಾಯ್ತು ಕಳೆ ತೆಗೆಯುವವರೆಗೂ ಒಂದು ಎಕರೆಗೆ 300 ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅದಕ್ಕೆ ಹಿಂದಿನ ವ್ಯವಸಾಯದ ಖರ್ಚು ಮತ್ತು ಕಟಾವು ಮಾಡುವ ಖರ್ಚನ್ನು ಅಲ್ಲದೇ ರೇಖು ಆಗಿ ಮನೆಗೆ ತೆಗೆದುಕೊಂಡು ಹೋಗುವ ಖರ್ಚು ಯಾವುದನ್ನೂ ಕೂಡ ಸೇರಿಸಿಲ್ಲ. ನನ್ನ ಅಂದಾಜು ಪ್ರಕಾರ ಅದುದನದ ಗೊಬ್ಬರ ಜಾತಾ 100 ರೂಪಾಯಿ ಆಗುತ್ತದೆ. ಅಲ್ಲಿಗೆ ತರೀ ಫಸಲಿಗೆ ಒಂದು ಎಕರೆಗೆ 400 ರೂಪಾಯಿ ಆಗುತ್ತದೆ. 400 ರೂಪಾಯಿಗಳನ್ನು ಖರ್ಚು ಮಾಡಿದರೆ ಅವನಿಗೆ ಸುಮಾರು 15 ಪಲ್ಲಾದಿಂದ 20 ಪಲ್ಲಾದವರೆಗೂ ಇಳುವರಿ ಬರುತ್ತದೆ. ಅದನ್ನೂ ಕೂಡ ಬಹಳ ಮುತುವರ್ಜಿಯಿಂದ ಮಾಡಿದ ಪಕ್ಷದಲ್ಲಿ. ದನಗಳ ಗೊಬ್ಬರವನ್ನು 100 ರೂಪಾಯಿ ಬೆಲೆ ಗೊಬ್ಬರ ಹಾಕಿ ಮಾಡಿದ ಪಕ್ಷದಲ್ಲಿ ಒಂದು ಎಕರೆಗೆ ಗೊಬ್ಬರದ ವೊಬಲಗಲ್ಲದೆ 400 ರೂಪಾಯಿ ಆಗುತ್ತದೆ. ಹೀಗಿದ್ದೂ ಧಾರಣೆವಾಸಿ ಇಳಿಯಬೇಕು ಎಂದು ಹೇಳುವುದಾದರೆ ಅದು ಹೇಗೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ನಿಗಾ ಇಟ್ಟು ನೋಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಆಹಾರ ಜಾಸ್ತಿ ಬೆಳೆಯಬೇಕಾದರೆ ನಮಗೆ ಸಕಾಲದಲ್ಲಿ ಸೀಮೆ ಗೊಬ್ಬರ ಮತ್ತು ದುಡ್ಡು ಯಾವ ತೊಂದರೆಯೂ ಇಲ್ಲದಂತೆ ಒದಗಿಸಿದ ಪಕ್ಷದಲ್ಲಿ ಈ ಅಭಾವ ಪರಿಸ್ಥಿತಿ ಎಷ್ಟೋ ನಿವಾರಣೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ಸೊಸೈಟಿಗಳಿಗೆ ದುಡ್ಡು ಕೊಡುತ್ತೇವೆ ಎಂದು ಹೇಳುತ್ತೀರಿ, ಆ ಸೊಸೈಟಿಗಳವರ ಪೈಕಿ ಕೆಲವು ಸೊಸೈಟಿಗಳವರು ಡಿಫಾಲ್ಟರ್ಸ್ ಆಗಿರುತ್ತಾರೆ, ಇನ್ನು ಕೆಲವು ಕಡೆ ಅವರು ಸಾಲ ಕೊಡುವುದು ಬಹಳ ಕಷ್ಟ, ಅಧಿಕಾರಿಗಳು ಹೋಗಿ ಒತ್ತಾಯ ಮಾಡಿ ಅವರು ಗೊಬ್ಬರ ವಗೈರೆ ಕೊಡುವುದರೊಳಗೆ ವ್ಯವಸಾಯದ ಕಾಲ ಮುಗಿದು ಹೋಗಿರುತ್ತದೆ ಅಂತಹ ಸಂದರ್ಭಗಳು ಬಹಳ ಇರುವುದರಿಂದ ಅದಕ್ಕೆ ಏನಾದರೂ ಒಂದು ಉಪಾಯವನ್ನು ಕಲ್ಪನೆ ಮಾಡಿ ದುಡ್ಡು ಮತ್ತು ಸಕಾಲದಲ್ಲಿ ಗೊಬ್ಬರ ಸಿಕ್ಕುವಂತೆ ತಕ್ಕ ಏರ್ಪಾಡನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಲ್ಲದೆ ಉಳುಮೆ ಮಾಡುವುದಕ್ಕೆ 5 ಎಚ್ ಪಿ ಮೆಷಿನರಿಯನ್ನು ಕೊಟ್ಟರೂ ಸಹ ಈಗಿನ ಕಾಲದಲ್ಲಿ ಬಹಳ ಪ್ರಯೋಜನವಾಗುತ್ತದೆ. ಎಂದು ಹೇಳುತ್ತೇನೆ. ಈಗ ಒಂದು ಜೊತೆ ಎತ್ತು ತೆಗೆದುಕೊಳ್ಳಬೇಕಾದರೆ 600-800 ರೂಪಾಯಿಗಳನ್ನು ಕೊಡಬೇಕು. ಒಂದು ಗಾಡಿಗೆ 600-700 ರೂಪಾಯಿಗಳನ್ನು ಕೊಡಬೇಕು. ವ್ಯವಸಾಯದ ಸಾಮಾನಿಗೆ ಸುಮಾರು 2 ಸಾವಿರ ರೂಪಾಯಿಗಳು

ಆಗುತ್ತದೆ, ಇಂತಹ ಸಂದರ್ಭದಲ್ಲಿ ಬಡ ರೈತ ವ್ಯವಸಾಯ ಮಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರದವರು ಮೆಷಿನರಿಯನ್ನು ಒದಗಿಸಿ ಅವುಗಳಿಂದ ಯಾರ‍್ಯಾರು ರೈತರು ಭೂಮಿಯನ್ನು ಉಳುಮೆ ಮಾಡುತ್ತಾರೆ ಅಂತಹ ರೈತರಿಂದ ದುಡ್ಡನ್ನು ವಸೂಲು ಮಾಡಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನೀರಾವರಿ ಕೆಲಸದಲ್ಲಿ 10 ವರ್ಷದಿಂದಲೂ ಉಳಿದಿರತಕ್ಕ ಅನೇಕ ಕೆಲಸಗಳು ಇನ್ನೂ ಕೂಡ ಹಾಗೆಯೇ ಇವೆ. ಸುಮಾರು ಲಕ್ಷಾಂತರ ಎಕರೆ ನೀರಾವರಿಯಾಗತಕ್ಕ ಕಾಮಗಾರಿಗಳು ಅರ್ಧಂಬರ್ಧ ಆಗಿವೆ, ನಮ್ಮ ತಾಲ್ಲೂಕಿನಲ್ಲಿ ಇರತಕ್ಕ ಒಂದು ವಿಷಯ ಹೇಳುತ್ತೇನೆ ಮತಿಘಟ್ಟ ಚಾನಲ್ ಅಂತ ಒಂದು ಚಾನಲ್ 1958ರಲ್ಲಿ ಶುರು ಆಯಿತು. ಅದು ಆಗ ಕೇವಲ 24 ಸಾವಿರ ರೂಪಾಯಿಗಳ ಕೆಲಸವಾಗಿತ್ತು. ಆದರಿಂದ 90 ಎಕರೆ ತರೀ ಆಗುತ್ತಾ ಇತ್ತು, ಅದು ಇದುವರೆಗೂ ಕೂಡ ಮುಗಿದಿಲ್ಲ. ದೊಡ್ಡನಕಟ್ಟೆ ಇನ್ನೊಂದು 6 ಲಕ್ಷದ 98 ಸಾವಿರ ರೂಪಾಯಿ ಖರ್ಚಿನಲ್ಲಿ ಮಾಡಬೇಕಾದ್ದು 10 ವರ್ಷ ಆಯಿತು, ಈ ವರ್ಷ ಅದರಿಂದ ನೀರು ಕೊಡುವ ಸ್ಥಿತಿಗೆ ಬಂದಿದೆ. ಈ ರೀತಿ ದೇಶದಲ್ಲಿ ಅನೇಕ ಕೆಲಸಗಳು ಅರ್ಧಂಬರ್ಧವಾಗಿ ನಿಂತು ಹೋಗಿರುವ ಸಂದರ್ಭಗಳು ಅನೇಕವು ಇವೆ. ಎಂದು ಹೇಳುತ್ತೇನೆ. ಇವುಗಳ ವಿಷಯದಲ್ಲಿ ನಿಗಾವಹಿಸಿ ತರೀ ವ್ಯವಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಪತಿಗಳೇ, ನಿನ್ನೆಯಿಂದ ಈ ಸಭೆಯಲ್ಲಿ ಈ ದಾರುಣವಾದ ಒಂದು ಪರಿಸ್ಥಿತಿಯ ವಿಚಾರದಲ್ಲಿ ನಾವೆಲ್ಲಾ ಚರ್ಚೆ ಮಾಡುತ್ತಾ ಇದ್ದೇವೆ, ಎಲ್ಲರೂ ತಮ ತಮಗೆ ತಿಳಿದ ಸಲಹೆಗಳನ್ನು ಈ ಸಭೆಯ ಮುಂದೆ ತಿಳಿಸುತ್ತಾ ಇದ್ದಾರೆ. ಈ ಚರ್ಚೆ ಈ ಸಂದರ್ಭದಲ್ಲಿ ಆದದ್ದು ಬಹಳ ಉಪಯುಕ್ತವಾದ ಚರ್ಚೆ ಎಂದು ನನಗೆ ಅನಿಸುತ್ತಾ ಇದೆ. ಏಕೆಂದರೆ ನಮ್ಮ ದೇಶದ ಮುಂದೆ ಇಂತಹ ಒಂದು ಪರಿಸ್ಥಿತಿಯನ್ನು ನಾವು ಎದುರಿಸಬೇಕಾದ್ದು ಮತ್ತು ಆಗಾಗ್ಗೆ ಇಂತಹ ಒಂದು ಪರಿಸ್ಥಿತಿಯನ್ನು ಹೇಗೆ ಹತೋಟಿಗೆ ತರಬೇಕು ಮತ್ತು ಇಂತಹ ಪರಿಸ್ಥಿತಿ ಪದೇ ಪದೇ ಬರದ ಹಾಗೆ ನೋಡಿಕೊಳ್ಳುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡುವುದಕ್ಕೆ ಈ ಚರ್ಚೆ ಬಹಳ ಸಹಾಯಕವಾಗುತ್ತದೆ. ಒಟ್ಟಿನಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ನಮಗೆ ಒಂದು ದೊಡ್ಡ ತೊಂದರೆ ಎಂದರೆ ನೀರಾವರಿ ಪ್ರದೇಶ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದೆ. ನಮ್ಮ ನೆರೆಹೊರೆಯ ರಾಜ್ಯಗಳಾದ ಮದರಾಸ್ ಮತ್ತು ಆಂಧ್ರ ಪ್ರದೇಶಗಳನ್ನು ನೋಡಿದರೆ ಅಲ್ಲಿ 40 ಪರ್ಸೆಂಟ್ ಮತ್ತು 26 ಪರ್ಸೆಂಟ್ ನೀರಾವರಿ ಇರತಕ್ಕ ಭೂಮಿ ಇದ್ದರೆ ನಮ್ಮ ರಾಜ್ಯದಲ್ಲಿ ಕೇವಲ 7 ಅಥವಾ 8 ಪರ್ಸೆಂಟ್ ಭೂಮಿ ಮಾತ್ರ ನೀರಾವರಿಗೆ ಬರುತ್ತಾ ಇದೆ.

ಶ್ರೀ ಎಸ್. ಗೋಪಾಲ ಗೌಡ.—ಇದು ನಿಮ್ಮ ಮಂತ್ರಿಮಂಡಲದಲ್ಲಿರತಕ್ಕ ದಕ್ಷತೆ ಮತ್ತು ದೂರದೃಷ್ಟಿಯನ್ನು ತೋರಿಸುತ್ತದೆ.

ಶ್ರೀ ಗಾಂಜಿ ವೀರಪ್ಪ.—ಹಾಗೇನೂ ಅಲ್ಲ. 1956 ರಿಂದ ಈಚೆಗೆ ಕರ್ನಾಟಕ ರಾಜ್ಯವಾದ ನಂತರ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಬಹಳ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಂಡು ಈ ಕೆಲಸವನ್ನು ಮಾಡುತ್ತಾ ಇದ್ದಾರೆ ಎಂದು ನಾನು ಹೇಳುತ್ತೇನೆ.

ಈ ವಿಚಾರದಲ್ಲಿ ಎರಡು ವಿಭಾಗ ಮಾಡಬಹುದು. ಬರಗಾಲ ಮತ್ತು ಬರಗಾಲ ಪರಿಸ್ಥಿತಿಯನ್ನು ಶಾಶ್ವತವಾಗಿ ತಡೆಗಟ್ಟುವ ಒಂದು ಮಾರ್ಗ ಮತ್ತು ಈಗಿನ ಪರಿಸ್ಥಿತಿಯನ್ನು ದೇಶದಲ್ಲಿ ಹೇಗೆ ತಡೆಗಟ್ಟಬೇಕೆಂಬುದನ್ನು ಯೋಚನೆ ಮಾಡುವುದು ಇನ್ನೊಂದು ಮಾರ್ಗ, ಈ ಎರಡನ್ನೂ ಒಟ್ಟಿಗೆ ಯೋಚನೆಮಾಡುವುದು ಒಳ್ಳೆಯದು. ಏಕೆಂದರೆ ನಮ್ಮ ರಾಜ್ಯದಲ್ಲಿ ನೀರಾವರಿ ಬಹಳ ಕಡಮೆ ಎಂದು ನಾನು ಹೇಳಿದ ಉದ್ದೇಶ ನಮ್ಮ ರಾಜ್ಯದಲ್ಲಿರುವ ಕೃಷ್ಣ, ಕಾವೇರಿ ಮುಂತಾದ ಹೊಳೆಗಳ ನೀರನು ಪರಮಾವಧಿ ಎಷ್ಟು ಉಪಯೋಗಿಸಿ ಕೊಳ್ಳಬಹುದೋ ಅಷ್ಟನ್ನು ಉಪಯೋಗಿಸಿರುವುದಿಲ್ಲ. ಮುಂದೆ ಉಪಯೋಗಿಸಲು ಸರ್ವ ಪ್ರಯತ್ನಮಾಡಬೇಕು. ಇದಕ್ಕೆ ಹಣ ಬೇಕು. ಹಿಂದೆ ಈ ಸಭೆಯಲ್ಲಿ ಚರ್ಚೆ ಮಾಡಿದಾಗ ಅಂದಾಜಾಗಿರುವ ಪ್ರಕಾರ ಇದಕ್ಕೆ ಸುಮಾರು 200 ಕೋಟಿ ರೂಪಾಯಿ ಬೇಕು. ಪ್ರತಿವರ್ಷ 20 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ 10 ವರ್ಷಗಳಲ್ಲಿ ಕೆಲಸ ಪೂರ್ಣವಾದರೆ ಶೇಕಡ 23-24 ರಷ್ಟು ನೀರಾವರಿಯಾಗುತ್ತದೆ. ಆದೇ ಪಕ್ಕದಲ್ಲಿರುವ ರಾಜ್ಯದಲ್ಲಿ ಶೇಕಡ ಸುಮಾರು 40ರಷ್ಟು ನೀರಾವರಿ ಇದೆ. ಆ ಮಟ್ಟಕ್ಕೆ ನಾವು ಬರುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಇರುವ ರಿಸೋರ್ಸಸ್ ಉಪಯೋಗಿಸಬೇಕು. ಜೊತೆಗೆ ಇರಿಗೇಷನ್ ವೆಲ್ಸ್ ಮತ್ತು ಪಂಪುಸೆಟ್ಟುಗಳನ್ನು ಹೆಚ್ಚಾಗಿ ಕೊಡಬೇಕು. ಈಗ ಕೊಡುವುದು ಸಾಲದು. ನೀರಾವರಿಗೆ ಅನುಕೂಲವಿಲ್ಲದಿರುವ ಕಡೆ ಬಾವಿ ತೆಗೆಯಲು ಈಗ ಮಾಡುತ್ತಿರುವುದರ ಎರಡರಷ್ಟು ಖರ್ಚುಮಾಡಬೇಕು. ನಮ್ಮ ರಾಜ್ಯದಲ್ಲಿ

(ಶ್ರೀ ಗಾಂಜಿ ವೀರಪ್ಪ)

ವಿಶೇಷ ಪರಿಸ್ಥಿತಿ ಇರುವುದರಿಂದ ಅದನ್ನು ಹೋಗಲಾಡಿಸುವುದಕ್ಕೆ ಹೆಚ್ಚು ಸಹಾಯ ಬೇಕೆಂದು ಕೇಂದ್ರಸರ್ಕಾರವನ್ನು ಕೇಳಬೇಕು. ಇದು ಶಾಶ್ವತವಾಗಿ ಮಾಡಬೇಕಾದ ಪರಿಹಾರದ ಕೆಲಸ.

ಈಗ ಚಿತ್ರದುರ್ಗ ಜಿಲ್ಲೆಯ ವಿಚಾರದಲ್ಲಿ ಹೇಳಬೇಕಾದರೆ ಪತ್ರಿಕೆಯಲ್ಲಿ ಕೆಲವು ವಿಚಾರಗಳು ಬಂದಿವೆ. ನಾನು ಆ ಜಿಲ್ಲೆಯವನಾದ್ದರಿಂದ ಬಹುಶಃ ಉತ್ಪ್ರೇಕ್ಷೆ ಮಾಡುತ್ತೇನೆಂದು ಭಾವಿಸಬಾರದು. ಮಂತ್ರಿಗಳು ಕೂಡ ಪ್ರವಾಸಮಾಡಿ ವಿಚಾರ ತಿಳಿದುಕೊಂಡಿದ್ದಾರೆ. ಅನೇಕ ಕಡೆ ಈ ಜಿಲ್ಲೆಯಲ್ಲಿ ಮಾಮೂಲಾಗಿ ಬರಗಾಲ ಬರುತ್ತಿತ್ತು, ಈ ಸಾರಿ ಎಂದೂ ಬರಗಾಲ ಬರದಿದ್ದ ದಾವಣಗೆರೆ ಮತ್ತು ಹರಿಹರದಲ್ಲೂ ಕೂಡ ಅಭಾವ ತಲೆದೋರಿದೆ. ಅಲ್ಲಿ ಎರಡು ವರ್ಷಗಳಿಂದ ಮಳೆಯಾಗದೆ ಅನೇಕ ಕೆರೆಗಳಿಗೆ ನೀರೇ ಬಂದಿರುವುದಿಲ್ಲ. ಅನೇಕ ತಾಲ್ಲೂಕುಗಳಲ್ಲಿ ಎಷ್ಟು ತೆಗದರೂ ಬಾವಿಗಳಲ್ಲಿ ಕುಡಿಯುವುದಕ್ಕೆ ನೀರೇ ದೊರೆಯುವುದಿಲ್ಲ. ಇಂಥ ಪರಿಸ್ಥಿತಿ ಈ ಜಿಲ್ಲೆಯಲ್ಲಿ ನಾನಾ ಕಡೆ ಇದೆ. ಇದರ ಪರಿಣಾಮವಾಗಿ ಜನರಿಗೆ ಕಂದಾಯ ಕೊಡುವುದಕ್ಕೆ ಕೂಡ ಶಕ್ತಿಯಿಲ್ಲವಾಗಿದೆ. ಕಂದಾಯವನ್ನೇನೋ ಅಧಿಕಾರಿಗಳು ಅದು ಅವರ ಕರ್ತವ್ಯವೆಂದು ವಸೂಲುಮಾಡುತ್ತಾರೆ. ಅವರನ್ನು ನಾನು ದೂಷಿಸುವುದಿಲ್ಲ. ಇಂಥ ಪರಿಸ್ಥಿತಿ ಬಂದಾಗ ಸರ್ಕಾರ ಕಂದಾಯ ವಸೂಲು ಮಾಡುವುದನ್ನು ಸಸ್ಪೆಂಡ್ ಮಾಡಬೇಕು, ಮನ್ನಾಮಾಡಬೇಕೆಂದು ನಾನು ಹೇಳುತ್ತಿಲ್ಲ. ಇಲ್ಲಿಯವರೆಗೆ ಸರ್ಕಾರ ಆ ರೀತಿ ಮಾಡಿಲ್ಲ, ಈಗಾಗಲೆ ಶೇಕಡ 75-80 ಭಾಗ ವಸೂಲಾಗಿರಬೇಕು. ಈಗಲಾದರೂ ಸರ್ಕಾರ ಈ ಪರಿಸ್ಥಿತಿಯನ್ನು ತಿಳಿದುಕೊಂಡು ತಮಗೆ ಸಹಾನುಭೂತಿಯಿದೆ ಎಂದು ವ್ಯಕ್ತಪಡಿಸುವುದಕ್ಕಾದರೂ ಕೂಡಲೆ ಅವಶ್ಯಕವಿರುವ ಕಡೆಗಳಲ್ಲಿ ಕಂದಾಯವನ್ನು ಸಸ್ಪೆಂಡ್ ಮಾಡಬೇಕು. ಕೆಲವು ಗ್ರಾಮಗಳಲ್ಲಿ ಪರಿಸ್ಥಿತ ಉತ್ತಮವಾಗಿರಬಹುದು. ಒಟ್ಟಿನಲ್ಲಿ ಇಡೀ ಚಿತ್ರದುರ್ಗ ಜಿಲ್ಲೆಗೆ ಈ ರಿಯಾಯಿತಿ ಕೊಡಬೇಕು. ಅದು ಸಾಲದು. ಅಲ್ಲಿ ರಾಗಿ ಮತ್ತು ಜೋಳಕ್ಕೆ ಧಾರಣೆ ಹೆಚ್ಚಾಗಿದೆ. ಯಾವಾಗಲೂ ದರ ಇಷ್ಟು ಹೆಚ್ಚಾಗಿರಲಿಲ್ಲ. ಈಗ ಜೋಳ ಕ್ವಿಂಟಾಲಿಗೆ 68 ರೂಪಾಯಾಗಿದೆ. ಜನರಿಗೆ ಆ ದರದಲ್ಲಿ ಕೊಳ್ಳಲು ಶಕ್ತಿಯಿಲ್ಲ, ಹಣವಿಲ್ಲ. ತಕಾವಿ ಸಾಲ ಹೆಚ್ಚಾಗಿ ಕೊಡಬೇಕು, ಅದು ವಸೂಲಾಗುತ್ತದೆ. ಜೊತೆಗೆ ಹಳ್ಳಿ ಹಳ್ಳಿಗಾಡುಗಳಲ್ಲಿರುವ ಸಹಕಾರಸಂಘಗಳಿಗೆ ಕಾಳನ್ನು ಕೊಡಬೇಕು, ಜೋಳ ಸಿಕ್ಕುವುದಿಲ್ಲ ರಾಗಿ ಸಿಕ್ಕುವುದೂ ಕಷ್ಟವಿರಬಹುದು, ಅಕ್ಕಿ, ಗೋದಿ ಇದೆ, ಅವನ್ನಾದರೂ ಕೊಡಿ. ವರ್ತಕರಿಗೆ ಅದನ್ನು ಕೊಡುವುದಕ್ಕೆ ಬದಲಾಗಿ ಸೊಸೈಟಿಗಳಿಗೆ ಕೊಡಿ. ವರ್ತಕರಿಗೆ ಕೊಟ್ಟರೆ ಅವರು ಬೇರೆ ರೀತಿಯಲ್ಲಿ ಮಾರಿಕೊಳ್ಳಬಹುದು. ಆದುದರಿಂದ ಗ್ರಾಮಾಂತರಗಳಲ್ಲಿರುವ ಸಹಕಾರ ಸಂಸ್ಥೆಗಳಿಗೆ ಎಮರ್ಜೆನ್ಸಿ ಬೇಸಿಸ್‌ಮೇಲೆ ಕೊಡಬೇಕು. ಅನೇಕರಿಗೆ ಒಪ್ಪತ್ತು ಊಟಮಾಡುವುದಕ್ಕೆ ಕೂಡ ಅವಕಾಶವಿಲ್ಲ, ದನಗಳಿಗೆ ಮೇವಿಲ್ಲ. ಸಿರಗುಪ್ಪದಲ್ಲಿ ಬೇಕಾದಷ್ಟು ಮೇವಿದೆ, ಬೇಕಾದರೆ ತೆಗೆದುಕೊಂಡುಹೋಗಬಹುದು ಎಂದು ಮೊನ್ನೆ ಬಳ್ಳಾರಿಯವರು ಹೇಳುತ್ತಿದ್ದರು; ಉಚಿತವಾಗಿ ಕೊಡುವುದಾಗಿಯೂ ಹೇಳುತ್ತಿದ್ದರು. ಆದರೆ ಅದನ್ನು ಸಾಗಿಸುವ ಛಾರ್ಜು ಹುಲ್ಲಿನ ಬೆಲೆಗಿಂತ ಜಾಸ್ತಿಯಾಗಬಹುದು, ಸರ್ಕಾರ ಟ್ರಾನ್ಸ್‌ಪೋರ್ಟ್ ಛಾರ್ಜ್ ವಹಿಸಿಕೊಂಡು ಮೇವನ್ನು ಸರಬರಾಯಿ ಮಾಡಬಹುದು.

ಇನ್ನೊಂದು ಸಲಹೆ. ಈಗ ರಿಲೀಫ್ ಕೆಲಸ ಮಾಡುತ್ತಿದ್ದಾರೆ. ಹಾಗೆ ಮಾಡುವಾಗ ಹಂಗಾಮಿಯಾಗಿ ಕೆಲವು ರಸ್ತೆಗಳನ್ನು ಮಾಡಿ ಹಣ ಖರ್ಚುಮಾಡುವುದು ಬೇಡ. ಹಿರಿಯೂರು ತಾಲ್ಲೂಕಿನಲ್ಲಿ ಮಂಜೂರಾಗಿರುವ ಇರಿಗೇಷನ್ ಪ್ರಾಜೆಕ್ಟುಗಳಿವೆ. ಮಂಜೂರಾಗಬೇಕಾದ ಕೆಲಸಗಳೂ ಇವೆ. ಅವನ್ನು ತೆಗೆದುಕೊಂಡು ನಾಲಾ ಕೆಲಸ ಮಾಡಬಹುದು. ಅದರಿಂದ ಅನೇಕರಿಗೆ ಕೆಲಸ ಸಿಕ್ಕಿ ಅನುಕೂಲವಾಗುತ್ತದೆ. ದಾವಣಗೆರೆ, ಹರಿಹರಗಳಲ್ಲಿ ಭದ್ರ ಪ್ರಾಜೆಕ್ಟ್ ಕೆನಾಲ್ ಕೆಲಸ ತೀವ್ರವಾಗಿ ಮುಗಿಯದಿದ್ದರೆ ಸಿದ್ದಯ್ಯನವರು ಹೇಳಿದಹಾಗೆ ಅನೇಕರು ಬೇರೆ ಕಡೆಗೆ ವಲಸೆ ಹೋಗುತ್ತಾರೆ. ಸಕಾಲದಲ್ಲಿ ಈ ಕೆಲಸ ತೆಗೆದುಕೊಳ್ಳಬೇಕು. ಹಿರಿಯೂರು ತಾಲ್ಲೂಕಿನಲ್ಲಿ ಅನೇಕ ಪಿಕಪ್‌ಗಳನ್ನು ಮಾಡುವುದಿದೆ. ಇವನ್ನೆಲ್ಲಾ ತೆಗೆದುಕೊಂಡು ರಿಲೀಫ್ ಕೆಲಸದಂತೆ ಮಾಡಿದರೆ ಹಣ ಖರ್ಚಾದರೂ ಶಾಶ್ವತವಾದ ಕೆಲಸವಾಗುತ್ತದೆ. ಕಾಂಟೂರ್ ಬಂಡಿಂಗ್ ಕೆಲಸ ಕೂಡ ಮಾಡಬೇಕು, ಅದೂ ಶಾಶ್ವತವಾದ ಕಾರ್ಯ. ರಿಲೀಫ್ ಕೆಲಸವೆಂದು ಹಂಗಾಮಿ ಕೆಲಸಗಳಿಗೆ ಖರ್ಚುಮಾಡುವುದಕ್ಕೆ ಬದಲಾಗಿ ಶಾಶ್ವತವಾದ ಕೆಲಸಗಳಿಗೆ ಖರ್ಚುಮಾಡಿದರೆ ರೈತರಿಗೂ ಪರಿಹಾರ ಸಿಕ್ಕಿ ಸರ್ಕಾರದ ಹಣ ಖರ್ಚಾದ್ದಕ್ಕೂ ಸಾರ್ಥಕವಾಗುತ್ತದೆ.

ಇನ್ನೊಂದು ವಿಚಾರ ಬಹಳವಾಗಿ ಹೇಳಬೇಕಾಗಿದೆ. ಏನೆಂದರೆ ಅಧಿಕಾರಿಗಳೂ ಕೂಡ ರಿಲೀಫ್ ಕೆಲಸ ಬಹಳ ಪವಿತ್ರವಾದ ಕೆಲಸ, ಜನರು ತೊಂದರೆಯಲ್ಲಿದ್ದಾರೆ ಎಂದು ರೋಟೀನ್ ಆಗಿ ಕೆಲಸಮಾಡದೆ ವಿಶೇಷ ಗಮನ ಕೊಡಬೇಕು. ಮನುಷ್ಯ ಹೊಟ್ಟೆಪಾಡಿಗಾಗಿ ಬಹಳ ಕಷ್ಟಪಡುತ್ತಿದ್ದಾನೆ, ಅದರ ಪರಿಹಾರಕ್ಕೆ ಸಾಕಷ್ಟು ಗಮನ ಕೊಡದಿದ್ದರೆ ಜನರ ಮೊರೇಲ್ ಕೂಡ ಕೆಡಲು

ಅವಕಾಶವಾಗುತ್ತದೆ, ಕ್ರೈಮ್ಸ್ ಹೆಚ್ಚಬಹುದು, ಜನರು ಅನೀತಿಮಾರ್ಗಕ್ಕಿಳಿಯಬಹುದು. ಇಂಥ ಪರಿಸ್ಥಿತಿಯಲ್ಲಿ ಜನರು ಸ್ಕೇರ್ ಆಗುವುದನ್ನು ತಡೆಗಟ್ಟಬೇಕಾಗುತ್ತದೆ. ಅಧಿಕಾರಿಗಳು ಮನೆಯ ಬಾಗಿಲಿಗೆ ಸಹ ಹೋಗಿ ರಿಲೀಫ್ ನೀಡಬೇಕಾಗುತ್ತದೆ. ಸಾಲ ಕೊಡಬೇಕಾದರೆ ರೊಟೀನ್ ಪದ್ಧತಿ ಅನುಸರಿಸಿದರೆ ನಿಧಾನವಾಗಿ ತೊಂದರೆಯಾಗುತ್ತದೆ, ರೈತ ತಾಲ್ಲೂಕು ಕಛೇರಿಗೆ ಹೋಗಿ ಅರ್ಜಿ ಕೊಟ್ಟು ಮಂಜೂರು ಮಾಡಿಸಿ ಹಣ ಪಡೆಯಬೇಕಾದರೆ ನಿಧಾನವಾಗುತ್ತದೆ. ಆದುದರಿಂದ ಫಾರ್ಮ್ಯಾಲಿಟೀಸ್ ಬಿಟ್ಟು ಎಮರ್ಜೆನ್ಸಿ ಇರುವ ಕಾಲದಲ್ಲಿ ರೈತರ ಮನೆಗೆ ನೇರವಾಗಿ ಸಹಾಯ ಮುಟ್ಟುವಂತೆ ಮಾಡಬೇಕು. ಇದು ಬಹಳ ಅಗತ್ಯ. ನಾನು ವಿನಯಪೂರ್ವಕವಾಗಿ ಹೇಳುವುದು ಹೆಚ್ಚು ಕಾಲ ಯೋಚನೆಮಾಡುವುದಕ್ಕೆ ಕಾಲವಿಲ್ಲ, ನಮ್ಮ ಜಿಲ್ಲೆಯನ್ನು ಎಮರ್ಜೆನ್ಸಿಯಲ್ಲಿರುವ ಜಿಲ್ಲೆ ಎಂದು ಪರಿಗಣಿಸಿ ಕಂದಾಯದ ರಿಮಿಷನ್, ಸಾಲವಗೈರೆ ಎಲ್ಲಾ ಸಹಾಯಗಳನ್ನು ಅಲ್ಲಿಗೆ ಆದಷ್ಟು ಜಾಗ್ರತೆ ನೀಡಬೇಕು, ತಡವಾದರೆ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುತ್ತದೆ. ಮತ್ತು ಕೇಂದ್ರ ಸರಕಾರದಿಂದ ಈಗೇನು ಆಹಾರ ಧಾನ್ಯಗಳು ಬರುತ್ತೆ ಎಂದು ಹೇಳುತ್ತಿದ್ದೀರಿ ಅದು ಯಾವುದಕ್ಕೂ ಸಾಲದು. ಅದು ಹೇಗೆ ಸಾಕಾಗುತ್ತದೆ ಎಂದಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಕೇಂದ್ರ ಸರಕಾರದವರು ಬಹುಶಃ ನಮ್ಮ ಮೈಸೂರು ರಾಜ್ಯದವರು ಬಹಳ ಸಭ್ಯರು ಮತ್ತು ಹೆಚ್ಚಾಗಿ ಏನೂ ಗಲಾಟೆ ಮಾಡುವವರಲ್ಲ ಎಂದು ಈ ರೀತಿ ಆಗಿರಬಹುದು. ಆದರೆ ನಮ್ಮ ಮಹಾರಾಷ್ಟ್ರದ ರಾಜ್ಯದವರು ಬಹಳ ದೊಡ್ಡದಾಗಿ ಒಂದು ಕೂಗನ್ನು ಹಾಕಿ ಒಂದು ತರಹದ ಸ್ಕೇರನ್ನು ಹುಟ್ಟಿಸಿ ಪತ್ರಿಕೆಗಳಲ್ಲಿ ಹಾಕಿಸುವುದನ್ನು ನೋಡಿ ಏನೋ ದೊಡ್ಡ ಅನಾಹುತ ನಡೆದುಹೋಗಿದೆ ಎಂದು ಕೇಂದ್ರ ಸರಕಾರದವರು ಅವರಿಗೆ ಸಹಾಯ ಮಾಡುತ್ತಾರೆ ಮತ್ತು ಮಹಾರಾಷ್ಟ್ರ ರಾಜ್ಯದವರಿಗೆ ಆ ಟ್ಯಾಕ್‌ಟಿಕ್ಸಗಳೆಲ್ಲಾ ಚೆನ್ನಾಗಿ ಗೊತ್ತು. ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ಮಾತ್ರ ಆ ರೀತಿ ಏನೂ ಮಾಡುತ್ತಿಲ್ಲ. ನಮಗೆ ರೈಲ್ವೇ ಇದ್ದದ್ದೂ ಹೋಯಿತು ಮತ್ತು ನೀರಿನ ತೊಂದರೆಯೂ ಕೂಡ ಹಾಗೇ ಆಗಿದೆ. ಏಕೆಂದರೆ ನಾವು ಏನೂ ಗಲಾಟೆ ಮಾಡುವವರಲ್ಲ ಎಂದು ತಿಳಿದಿದ್ದಾರೆ. ಅದರಿಂದ ನಾನು ಸರಕಾರಕ್ಕೆ ಸೂಚನೆ ಮಾಡುವುದು ಆದಷ್ಟೂ ನಮ್ಮ ಕೂಗು ದೊಡ್ಡದಾಗಿ ಕೇಂದ್ರ ಸರಕಾರಕ್ಕೆ ಮುಟ್ಟುವಂತೆ ಮಾಡಬೇಕು ಮತ್ತು ಅದಕ್ಕಾಗಿ ಇನ್ನೂ ಜಾಸ್ತಿ ಕೂಗಬೇಕು. ಇದರಲ್ಲಿ ದೇಶದ ಎಲ್ಲ ಪಕ್ಷಗಳ ಬೆಂಬಲವೂ ಸರಕಾರಕ್ಕಿದೆ ಎಂದು ನಾನು ಧಾರಾಳವಾಗಿ ಹೇಳುತ್ತೇನೆ. ಏಕೆಂದರೆ ಇದು ಎಲ್ಲರಿಗೂ ಅಗತ್ಯವಾಗಿ ಬೇಕಾಗುವಂತಹುದು. ಶ್ರೀಮಾನ್ ಕೃಷ್ಣಪ್ಪನವರು ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿದ್ದವರು ಮತ್ತು ಅಲ್ಲಿ ಫುಡ್ ಇಲಾಖೆಯಲ್ಲಿ ಯಾವ ತರಹ ನಡೆಯುತ್ತಿದೆ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಅವರು ಬೇಕಾದರೆ ಒಂದು ಎಂಟು ದಿನಗಳ ಕಾಲ ದೆಹಲಿಯಲ್ಲೇ ಇದ್ದು ಕೇಂದ್ರಕ್ಕೆ ಮನವರಿಕೆಯಾಗುವಂತೆ ಹೇಳಿ ಹೆಚ್ಚಿನ ಆಹಾರ ಧಾನ್ಯಗಳನ್ನು ಪಡೆದು ಬರಬಹುದು ಎಂಬುದಾಗಿ ನಾನು ಅಭಿಪ್ರಾಯಪಡುತ್ತೇನೆ. ಇದರಿಂದ ಮಾನ್ಯ ಸಚಿವರಾದ ಶ್ರೀ ಕೃಷ್ಣಪ್ಪನವರು ಒತ್ತಾಯ ಮಾಡಲು ಅನುಕೂಲವಾಗುತ್ತದೆ ಎಂದು ಆಷ್ಟೇ. ಇದು ಬಹು ಮುಖ್ಯವಾದ ವಿಚಾರ. ಕೇಂದ್ರಕ್ಕೆ ಸರಿಯಾಗಿ ಮನವರಿಕೆಯಾಗುವಂತೆ ಹೇಳಿ ಅವರಿಂದ ಬರೀ ಅಕ್ಕಿ ಮತ್ತು ಗೋಧಿಯನ್ನು ಪಡೆದರೇ ಸಾಲದು. ಆದರ ಜೊತೆಗೆ ಇನ್ನಷ್ಟು ಹಣವೂ ಹೆಚ್ಚಾಗಿ ಬೇಕಾಗುತ್ತದೆ. ಅದಕ್ಕಾಗಿ ಈಗ ನಾನು ಸರಕಾರಕ್ಕೆ ಸಲಹೆ ಕೊಡುವುದು. ಈಗ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಅದಕ್ಕಾಗಿ ಸಾಕಷ್ಟು ಟೆಂಪರರಿ ಮೆಷರುಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಶಾಶ್ವತವಾದ ಪರಿಹಾರಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳಿ ಪದೇ ಪದೇ ಬರಗಾಲ ಬಾರದಂತೆ ತಕ್ಕ ಕ್ರಮಗಳನ್ನೂ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ವರ್ಷೇ ವರ್ಷೇ ನಮಗೆ ಬರ ಬಂತು ಎಂದು ಹೇಳತಕ್ಕ ಒಂದು ಅಭಿಪ್ರಾಯ ನಮಗೆ ಬಂದು ಬಿಟ್ಟಿದೆ. ಅದಕ್ಕೇನು ಪರಿಹಾರಗಳನ್ನು ಮಾಡಬೇಕೆನ್ನುವ ವಿಚಾರಗಳಲ್ಲಿ ಈಗಿನ ಸರಕಾರದವರು ತೀವ್ರ ಗಮನವನ್ನು ಕೊಟ್ಟಿಲ್ಲವೆಂದು ನಾನು ಇಲ್ಲಿ ಹೇಳಬೇಕಾಗಿದೆ. ನನ್ನ ತಾಲ್ಲೂಕಿನ ಮಟ್ಟಿಗೆ ಸ್ವಲ್ಪ ಅರಿಕೆ ಮಾಡಬೇಕಾದರೆ ಸೆಪ್ಟಂಬರು 15ನೇ ತಾರೀಖಿನಿಂದ ಅಕ್ಟೋಬರು ವರೆಗೆ ನಮಗೆ ಬರಬೇಕಾಗಿದ್ದ ಮಳೆ ಬಾರದೆ ಆ ಕಾಲದಲ್ಲಿ ಬಿತ್ತನೆಯನ್ನು ಮಾಡಿಕೊಳ್ಳಲು ಆಗದೆ ಯಾವ ಬೆಳೆಯನ್ನೂ ಮಾಡಲು ಆಗಲಿಲ್ಲ. ಇದನ್ನು ಯಾರೂ ಉತ್ಪ್ರೇಕ್ಷೆ ಎಂದು ಭಾವಿಸಬಾರದು. ಅನೇಕ ಗ್ರಾಮಗಳಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದೇ ಇರುವ ಪರಿಸ್ಥಿತಿ ಬಂದಿದೆ. ಕ್ಷಾಮ ಕಾಲದಲ್ಲಿ ತುಂಬಿದ್ದ ಎರಡು ಮೂರು ಕೆರೆಗಳ ನೀರನ್ನುಪಯೋಗಿಸಿಕೊಂಡು ಸರಿಯಾದ ಬೆಳೆಯೂ ಕೈಸೇರದ ಹಾಗಾಯಿತು, ಇಂತಹ ಪರಿಸ್ಥಿತಿ ನಮಗೆ ಈಗ ಬಂದಿದೆ. ನಮ್ಮ ತಾಲ್ಲೂಕಿನ ಜನರು ಹಿಂದೆ ಕೆಲಸಗಳಿಗಾಗಿ ನೀಲಗಿರಿ, ಭದ್ರಾವತಿ ಹಾಗೂ ಬೊಂಬಾಯಿ ಕಡೆಗೆ ಹೋಗುತ್ತಿದ್ದರು ಹಿಂದೆ ಅವರಿಗೆ ಕೆಲಸಗಳು ಸಿಗುತ್ತಿದ್ದವು. ಈಗ ಅವರಿಗೆ ಯಾವ ಕೆಲಸಗಳೂ ಸಿಗುತ್ತಿಲ್ಲ. ಅದರಿಂದಾಗಿ ಅವರುಗಳು ಬೀದಿ ಬೀದಿಯಲ್ಲಿ ಅಲೆಯುವ ಪ್ರಸಂಗ ಬಂದಿದೆ. ಈ ಸಂದರ್ಭಗಳಲ್ಲಿ ಆಹಾರ ಧಾನ್ಯಗಳ ಕೊರತೆ ತುಂಬಾ ಇದೆ.

(ಶ್ರೀ ಟಿ ಎನ್. ಮಾದಪ್ಪ ಗೌಡ)

ಅದಕ್ಕಾಗಿ ರೇಷನಿಂಗನ್ನು ತರುವುದು ಒಂದು ಕ್ರಮ ಎಂದು ಕೆಲವರು, ಮತ್ತು ಈ ಆಹಾರ ಧಾನ್ಯವನ್ನು ಹಂಚುವುದಕ್ಕಾಗಿ ಧಾರಣೆವಾಸಿಗಳು ಹೆಚ್ಚು ಹೆಚ್ಚಾಗಿ ಏರುತ್ತಿದೆ, ಅದನ್ನು ಕಮ್ಮಿ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಇಲ್ಲಿ ಸರಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಇವೆರಡು ವಿಧದಿಂದಲೂ ಬಡ ರೈತರಿಗೆ ತೊಂದರೆಯಾಗುತ್ತದೆ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ರೇಷನಿಂಗನ್ನು ಜಾರಿಗೆ ತಂದರೆ ಅದರಿಂದ ಮಧ್ಯಸ್ತಗಾರನಿಗೆ ಲಾಭವಾಗುತ್ತದೆಯೇ ಹೊರತು ಅದರಿಂದ ದವಸ ಬೆಳೆಯತಕ್ಕ ರೈತನಿಗೆ ಅನುಕೂಲವಾಗದೆ ಬಹಳ ಹಿಂಸೆಯಾಗುತ್ತದೆ. ಮತ್ತು ಸೊಸೈಟಿಗಳ ಮೂಲಕ ಅಥವಾ ಬೇರೆ ವಿಧದಲ್ಲಿ ಹಂಚುವ ವಿತರಣೆಯನ್ನು ಮಾಡುವುದರಿಂದಲೂ ರೈತರಿಗೆ ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಲ್ಲಿ ಇಷ್ಟಪಡುತ್ತೇನೆ. ನನ್ನ ಸ್ನೇಹಿತರಾದ ಶ್ರೀಮಾನ್ ನಂಜೇ ಗೌಡರು ನನ್ನ ಊರಿನ ಪಕ್ಕದಲ್ಲೇ ಎಂದರೆ ಕೃಷ್ಣರಾಜಪೇಟೆಯಲ್ಲಿರುವವರು. ಅಲ್ಲಿ ಒಂದು ಎಕರೆಗೆ 15 ಪಲ್ಲದಷ್ಟು ಬೆಳೆಯುತ್ತೇವೆಂದು ಹೇಳಿದರು. ನಾವೂ ಅವರೂ ಪಕ್ಕ ಪಕ್ಕದಲ್ಲೇ ಇರುವವರು, ಕೇವಲ 10–12 ಮೈಲಿ ದೂರದಲ್ಲಿರುವವರು. ಅಂತರವೇನೂ ಅಷ್ಟು ಹೆಚ್ಚಿಲ್ಲ. ನಾವುಗಳು ಕಷ್ಟಪಟ್ಟು ಬೆಳಗಿನಿಂದ ಸಂಜೆಯವರಿಗೆ ದುಡಿದರೂ ಕೂಡ ಎಕರೆಗೆ 8–10 ಪಲ್ಲದಷ್ಟು ದವಸವನ್ನು ಬೆಳೆದರೆ ಮುಗಿಯಿತು. ಅದೂ ಪ್ಯಾಕೇಜು ಕ್ರಮವನ್ನನುಸರಿಸಿ ಮಾಡಿದರೆ ಇಷ್ಟು ಬೆಳೆಯಬಹುದು. ಆದರೆ ಕೃಷ್ಣರಾಜ ಪೇಟೆಯಲ್ಲಿ ಅವರು ಹೇಗೆ 15 ಪಲ್ಲದಷ್ಟು ಬೆಳೆಯುತ್ತಾರೆನ್ನುವುದನ್ನು ನಾನು ಅಲ್ಲಿಗೆ ಹೋಗಿ ನೋಡಬೇಕಾಗಿದೆ. ಅಲ್ಲಿ ಅವರು ಒಂದು ಎಕರೆಗೆ 300 ರಿಂದ 400 ರೂಪಾಯಿಗಳಷ್ಟು ಖರ್ಚು ಆಗುತ್ತದೆ ಎಂದು ಹೇಳಿರುವ ಮಾತು ಒಪ್ಪತಕ್ಕ ಮಾತು. ಒಂದು ಸಂಸಾರದಲ್ಲಿರತಕ್ಕವರೆಲ್ಲರೂ ಬೆಳಗಿನಿಂದ ಸಂಜೆಯವರಿಗೂ 365 ದಿನಗಳೂ ಬಿಸಿಲು, ಮಳೆ ಗಾಳಿಗಳೊಂದನ್ನೂ ಲೆಕ್ಕಿಸದೇ ಕಷ್ಟಪಟ್ಟು ದುಡಿದರೆ ಇಂತಹ ಒಂದು ಪರಿಸ್ಥಿತಿ ಬರುತ್ತದೆ. ಈಗಿನ ಒಂದು ಪರಿಸ್ಥಿತಿ ಹೇಗಿದೆ ಎಂದರೆ ಈಗಿರತಕ್ಕ ಧಾರಣೆವಾಸಿಗಳಂತೆ ಅವನ್ನು ಅಷ್ಟು ಖರ್ಚು ಮಾಡುವುದಕ್ಕಾಗುತ್ತದೆಯೇ ? ಹಾಗೆ ಖರ್ಚು ಮಾಡಿದರೂ ಅದಕ್ಕೆ ತಕ್ಕ ಪ್ರತಿಫಲವೂ ಬಾರದೇ ಹೋದರೆ ವ್ಯವಸಾಯ ಮಾಡುವವರ ಗತಿಯನ್ನು ಕೇಳುವವರೇ ಇಲ್ಲ. ಬೆಂಗಳೂರಿನಲ್ಲಿರುವ ಕಾರ್ಖಾನೆಗಳಲ್ಲಿ ಕೂಲಿ ಮಾಡಿಕೊಂಡಿದ್ದರೆ ತಿಂಗಳಿಗೆ 60 ರಿಂದ 70 ರೂಪಾಯಿಗಳವರೆಗೆ ಅವರುಗಳಿಗೆ ಸಂಬಳ ಸಿಗುತ್ತದೆ ಎಂದರೆ ವರ್ಷಕ್ಕೆ 800–900 ರೂಪಾಯಿಗಳಷ್ಟು ಆದಾಯ ಬಂದಂತೆ ಆಗುತ್ತದೆ. ಆದರೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಕೂಲಿಯ ಆಳುಗಳಿಗೆ ದಿನಕ್ಕೆ ಎರಡಾಣೆ ಹಾಗೂ ಮೂರಾಣೆ ಎಂದು ಕೊಟ್ಟು ಅವರುಗಳು ಜಮೀನಿನಲ್ಲಿ ಬೆಳಗಿನಿಂದ ಸಾಯಂಕಾಲದವರೆಗೂ ದುಡಿದರೂ ಅವನಿಗೆ ಸರಿಯಾಗಿ ಕೂಲಿ ಸಿಗುತ್ತಿಲ್ಲ. ವ್ಯವಸಾಯ ಮಾಡುವ ಕೆಲಸಗಾರರ ಸ್ಥಿತಿ ಬಹಳ ಕಷ್ಟ. ಅಲ್ಲದೆ ಈಗ ಕಮ್ಮಿ ಕೂಲಿ ತೆಗೆದುಕೊಂಡು ಭೂಮಿಯ ಮೇಲೆ ಕೆಲಸ ಮಾಡಲು ಯಾರೂ ತಯಾರಾಗಿಲ್ಲ. ಈಗ ಎತ್ತು ಬಂಡಿಗಳ ಪರಿಸ್ಥಿತಿ ಹೇಗಿದೆ ಎಂದು ಇಲ್ಲಿ ಒಬ್ಬರು ಸದಸ್ಯರು ಹೇಳಿದರು. ಎತ್ತು ಬಂಡಿಗಳನ್ನು ಕೊಂಡುಕೊಂಡರೂ ಉಳುವುದಕ್ಕೆ ಜನ ಸಿಗುತ್ತಿಲ್ಲ ಎಂದು. ಈಚೆಗೆ ದುಡ್ಡಿನ ಬೆಲೆ ಜಾಸ್ತಿಯಾಗಿದೆ ಮತ್ತು ಪ್ರಜಾಸಂಖ್ಯೆಯೂ ಕೂಡ ಲಂಗು ಲಗಾಮಿಲ್ಲದೆ ಬೆಳೆಯುತ್ತಿದೆ. ಈಗ ಕಬ್ಬು, ಹೊಗೆಸೊಪ್ಪು ಮುಂತಾದ ಬೆಳೆಗಳೇ ಜಾಸ್ತಿಯಾಗಿರತಕ್ಕದ್ದು. ಇದನ್ನೇ ಜಾಸ್ತಿಯಾಗಿ ಬೆಳೆಯುತ್ತಿದ್ದರೆ ಹೆಚ್ಚು ಆಹಾರದ ಬೆಳೆಗಳನ್ನು ಬೆಳೆಯತಕ್ಕವರು ಯಾವ ಗ್ರಾಮದಲ್ಲೂ ಹೆಚ್ಚಿಗೆ ಇಲ್ಲ. ಇದನ್ನು ನಾವು ಕಂಟ್ರೋಲು ಕಾಲದಿಂದ ಅನುಭವಿಸಿಕೊಂಡು ಬಂದಿರುವಂತಹುದು. ಅದಕ್ಕಾಗಿ ನನ್ನ ಸಲಹೆ ಇಷ್ಟು ದುಡ್ಡು ಬರುವಂತಹ ಬೆಳೆಯನ್ನು ಇಲ್ಲಿ ಮಾಡಬೇಕು ಮತ್ತು ಇಷ್ಟು ಎಕರೆಗಳಲ್ಲಿ ಆಹಾರ ಧಾನ್ಯಗಳನ್ನು ಕಡ್ಡಾಯವಾಗಿ ಬೆಳೆಯಬೇಕು ಎಂದು ಸರಕಾರ ನಿಗದಿ ಮಾಡಬೇಕು. ಮತ್ತು ಯಾವ ಯಾವ ಕಾಲದಲ್ಲಿ ಹೇಗೆ ಮಳೆ ಬರುತ್ತದೋ ಆಗ ಮಳೆ ಬಿದ್ದ ಕಾಲದಲ್ಲಿ ಯಾವ ತರಹದ ಬಿತ್ತನೆಯ ಬೀಜವನ್ನು ಹಾಕಿದರೆ ಬೆಳೆ ಕೈಗೆ ಸಿಗಬಹುದು ಎನ್ನುವುದರ ಬಗ್ಗೆ ವ್ಯವಸಾಯ ಇಲಾಖೆಯವರು ಒಂದು ರೀಸರ್ಚನ್ನು ಮಾಡಬೇಕು. ಇದರ ಜೊತೆಗೆ ಈಗ ಸರಕಾರದವರು ರೈತರಿಗೆ ಬಾವಿಗಳನ್ನು ತೆಗೆಯುವುದಕ್ಕಾಗಿ ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ. ಇದರ ರೀತಿನೀತಿಗಳು ಸರಿಯಾಗಿಲ್ಲ ಎಂದು ನನಗನಿಸುತ್ತಿದೆ. ಈಚೆಗೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರು ನಮ್ಮ ತಾಲ್ಲೂಕಿನ ಕಡೆಗೆ ಬಂದಿದ್ದರು. ಅವರಿಗೂ ಅಲ್ಲಿ ಬಾವಿಗಳನ್ನು ರೈತರು ಹೇಗೆ ತೋಡಿಸುತ್ತಿದ್ದಾರೆನ್ನುವುದನ್ನು ತೋರಿಸಿದೆ. ಬಾವಿಯನ್ನು ಎಷ್ಟು ಆಳವಾಗಿ ತೋಡಿದರೂ ಸರಿಯಾಗಿ ನೀರೆ ಕೆಲವು ಕಡೆಗಳಲ್ಲಿ ಬರುತ್ತಿಲ್ಲ. ಕೆಲವು ಕಡೆಗಳಲ್ಲಿ ಆಳವಾಗಿ ತೋಡಿ ನೀರನ್ನು ತೆಗೆಯಬೇಕಾದರೆ ನೀವು ಕೊಡುವ 3,000 ದಷ್ಟು ಹಣವೂ ಖರ್ಚಾಗಿ ಹೋಗುತ್ತದೆ. ಆದುದರಿಂದ ಈಗ ತಾವು ಪಂಪುಸೆಟ್ಟುಗಳಿಗಾಗಿ ಎಂದು ಬೇರೆ ಕೊಡುತ್ತಿದ್ದೀರಿ. ಅದನ್ನೂ ಬಾವಿಗಾಗಿ ಸಾಲ ಕೊಡುವುದರ ಜೊತೆಯಲ್ಲೇ ಕೊಟ್ಟರೆ ಅನುಕೂಲವಾಗುತ್ತದೆ ಮತ್ತು

ಬಾವಿಗಳನ್ನು ತೋಡಿಸಲು ಪಂಪನ್ನುಪಯೋಗಿಸಿಕೊಂಡು ಅಲ್ಲಿ ಬರುವ ಅಲ್ಪ ಸ್ವಲ್ಪ ನೀರಿನಿಂದಲಾದರೂ ಸ್ವಲ್ಪ ತರಕಾರಿಗಳನ್ನಾದರೂ ಬೆಳೆಯಲು ಅನುಕೂಲವಾಗುತ್ತದೆ. ಆದುದರಿಂದ ಬಾವಿಗಾಗಿ ಸಾಲಗಳನ್ನು ಕೊಡುವುದರ ಜೊತೆಯಲ್ಲಿಯೇ ಪಂಪುಗಳ ಸಾಲವನ್ನೂ ಮೊದಲೇ ಕೊಡಬೇಕೆಂದು ಸರಕಾರದಲ್ಲಿ ಒತ್ತಾಯಪೂರ್ವಕವಾಗಿ ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಸಭೆ ಈಗ ಅರ್ಧಗಂಟೆ ಕಾಲ ವಿರಾಮಕ್ಕಾಗಿ ಏಳುತ್ತದೆ.

The House adjourned for recess at Three of the Clock and reassembled at Thirty-Minutes Past Three of the Clock.

[Mr. Speaker in the Chair]

ಶ್ರೀ ಟಿ. ಎನ್. ಮಾದಪ್ಪ ಗೌಡ.—ಇನ್ನು ನಾನು ಈ ನೀರಾವರಿ ಬಾವಿಗಳ ವಿಚಾರವಾಗಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಜೊತೆಗೆ ಸಣ್ಣ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಬೇಕು. ಈ ಹಿಂದೆ ಈ ವಿಚಾರದಲ್ಲಿ ಒಂದು ಮಾಸ್ಟರ್ ಪ್ಲಾನನ್ನು ತಯಾರಿಸುವುದಾಗಿ ಮಂತ್ರಿಗಳು ತಿಳಿಸಿದ್ದರು. ಈ ಬಗ್ಗೆ ನಮ್ಮ ತಾಲ್ಲೂಕಿನಲ್ಲಿಯೂ 50 ಲಕ್ಷ ರೂಪಾಯಿಗಳ ಒಂದು ಪಟ್ಟಿಯನ್ನು ತಯಾರು ಮಾಡಲಾಗಿತ್ತು. ಆದರೆ ಅದಕ್ಕೆಲ್ಲ ದುಡ್ಡನ್ನು ಎಲ್ಲಿಂದ ಒದಗಿಸುತ್ತಾರೋ ನನಗೆ ತಿಳಿಯದು. ಸರ್ಕಾರದವರು ಹೇಗೆ ಯೋಜನೆಗಳನ್ನು ತಯಾರು ಮಾಡುತ್ತಾರೋ ಹಾಗೇ ಅವರು ಅವುಗಳಿಗೆ ಹಣವನ್ನು ಒದಗಿಸಿಕೊಳ್ಳಬೇಕಾದ್ದು ಅವರ ಜವಾಬ್ದಾರಿ. ಅವುಗಳಿಗೆಲ್ಲಾ ಅವರು ಹಣವನ್ನೊದಗಿಸಿಕೊಂಡು ಬೇಗ ಆ ಕೆಲಸಗಳನ್ನೆಲ್ಲಾ ಪೂರೈಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ ಸಮಾಜದಲ್ಲಿರತಕ್ಕ ನಾನಾ ವರ್ಗಗಳಿಗೆ ನಾನಾ ರೀತಿಯ ಸೌಲಭ್ಯಗಳು ಬೇಕು. ಆದರೆ ಸಾಮಾನ್ಯವಾಗಿ ಎಲ್ಲಾ ವರ್ಗದವರಿಗೂ ಅನುಕೂಲಗಳು ದೊರೆಯುತ್ತಿವೆ. ಆದರೆ ರೈತನಿಗೆ ಬೇಕಾದ ಸೌಕರ್ಯಗಳನ್ನು ಕೇಳತಕ್ಕವರೂ ಇಲ್ಲ, ಅವುಗಳನ್ನು ಒದಗಿಸತಕ್ಕವರು ಮೊದಲೇ ಇಲ್ಲ. ಆದರೆ ಬಾಯಿನಲ್ಲಿ ಮಾತ್ರ ರೈತನು ದೇಶದ ಬೆನ್ನು ಮೂಳೆ ಎಂದು ಮಾತ್ರ ಮಾತೆತ್ತಿದರೆ ಹೇಳುತ್ತಾರೆ. ಸರ್ಕಾರಕ್ಕೆ ಒಂದು ವೇಳೆ ರೈತನಿಗಿಷ್ಟು ಉಪಕಾರಮಾಡೋಣವೆಂಬ ಮನಸಿದ್ದರೂ ಇಲ್ಲಿಯ ಅಧಿಕಾರಿಗಳಿಂದ ಅದು ಕಾರ್ಯಗತವಾಗುತ್ತಿಲ್ಲ. ಇನ್ನು ಸರ್‌ಛಾರ್ಜ ವಿಚಾರದಲ್ಲಿ ಈಗಾಗಲೇ ಶ್ರೀ ಗಾಂಜೀವೀರಪ್ಪನವರು ಹೇಳಿದಂತೆ......

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಪ್ರೆಸ್ಸಿನವರೊಬ್ಬರೂ ಇಲ್ಲಿ, ಕಾಣುತ್ತಿಲ್ಲ, ಏನು ಅವರೆಲ್ಲರೂ ಸರ್ಕಾರದಮೇಲೆ ಮುನಿಸಿಕೊಂಡಿದ್ದಾರೇನು ?

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಮ್ಮಲ್ಲಿ ಈಗ ಇಬ್ಬರು ಡಿ. ಸಿ. ಗಳಿದ್ದಾರೆ. ಅವರಿಗೆ ಹೆಚ್ಚಿಗೆ ವಿಚಾರಗಳು ಗೊತ್ತಿಲ್ಲ. ಅವರೇನಿದ್ದರೂ ಹೆಚ್ಚಿಗೆ ರೆವಿನ್ಯೂ ತರ್ಫಿನಲ್ಲಿ ನುರಿತಿರುವಂತೆ ಕಂಡುಬರುತ್ತದೆ. ನಾವು ಹೇಳಿದ್ದ ಗ್ರಾಮಗಳಲ್ಲಿ ಅವರು 10-15 ಗ್ರಾಮಗಳನ್ನು ಬಿಟ್ಟು ಉಳಿದವುಗಳಿಗೆ ಶಿಫಾರಸ್‌ಮಾಡಿದ್ದಾರೆ. ಆದರೆ ಸರ್ಕಾರದವರು ಕೊಡಬೇಕಾದ ರಿಮಿಷನ್ ವಗೈರೆಗಳೇ ನನ್ನೂ ಇಲ್ಲಿಯವರಿಗೂ ಕೊಟ್ಟಿಲ್ಲ. ಸಾಲದ್ದಕ್ಕೆ ಮತ್ತೀಗ ಹೊಸ ಕಂದಾಯವನ್ನು ಬೇರೆ ಹಾಕಬೇಕೆಂದಿದ್ದಾರೆ. ಈಗಲೇ ರೈತಾಪಿ ಜನರಿಗೆ ತಿನ್ನಲು ಅನ್ನವಿಲ್ಲ, ಉಡಲು ಬಟ್ಟೆಯಿಲ್ಲ. ಇನ್ನು ಜನರು ದಂಗೆಯೇಳುವುದೊಂದೇ ಬಾಕಿಯಿರುವುದು. ನಾವು ಅವನ ಪ್ರತಿನಿಧಿಗಳಾಗಿ ಇಲ್ಲಿ ಬಂದು ಅವನ ಕೊರತೆಗಳನ್ನು ನೀಗಲಾರದೆ ತಲೆ ತಗ್ಗಿಸಿಕೊಂಡು ತಿರುಗಾಡಬೇಕಾಗಿದೆ. ಈಗಲಾದರೂ ಆ ಹೆಚ್ಚಿನ ಕಂದಾಯವನ್ನು ಹಾಕುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇದನ್ನ ನಾನು ಈಗ ಒಂದು ಎಚ್ಚರಿಕೆಯರೂಪದಲ್ಲಿ ತಿಳಿಸುತ್ತಿದ್ದೇನೆ. ಈ ದಿವಸ ಲೇಬರ್‌ವರ್ಗದಲ್ಲಿ ಅವರಿಗೆ ಬೇಕಾದ ವಸತಿಸೌಕರ್ಯ, ಬೋನಸ್ ಇತ್ಯಾದಿಗಳನ್ನೆಲ್ಲಾ ಕೊಡುತ್ತಿದ್ದಾರೆ. ದೇಶಕ್ಕೆ ಅನ್ನವನ್ನು ಕೊಡತಕ್ಕ ರೈತನಿಗೆ ಸೌಕರ್ಯಗಳಿಲ್ಲ. ದೇಶಕ್ಕೆ ಯಾರು ಅನ್ನವನ್ನು ಕೊಡುತ್ತಾನೋ ಅವನು ದೇವರಿಗೆ ಸಮಾನ ಎಂದು ಹೇಳುತ್ತಿರುವಾಗ ಅವನನ್ನು ಅಷ್ಟು ನಿಕೃಷ್ಟವಾಗಿ ನೋಡುವುದು ತೀರಾ ಅನ್ಯಾಯ. ಅಂಥ ರೈತನಿಗೆ ಕಿರುಕುಳವನ್ನು ಪ್ರಪಂಚದಲ್ಲಿರತಕ್ಕ ಯಾವ ಸರ್ಕಾರವೂ ಕೊಡುವುದಿಲ್ಲ. ಅಂಥವನಿಗೆ ಕಿರುಕುಳ ಕೊಡುವುದು ನಾಗರೀಕ ಸರ್ಕಾರದ ಲಕ್ಷಣವೂ ಅಲ್ಲ. ಇದನ್ನು ಸರ್ಕಾರ ಬೇಗ ಅರಿತು ಕೊಳ್ಳದಿದ್ದರೆ ಸಧ್ಯದಲ್ಲೇ ಅವರು ದಂಗೆಯೇಳತಕ್ಕ ಪ್ರಸಂಗಬಂದೇ ಬರುತ್ತದೆ ಎಂಬ ಈ ಒಂದು ಎಚ್ಚರಿಕೆಯ ಮಾತನ್ನು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಇದುವರೆಗೆ ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಿಕ ಸಮಸ್ಯೆಗಳ ಬಗ್ಗೆ ವಿಚಾರವೇನಿದೆ ಎಂಬುದನ್ನು ಅವರೆಲ್ಲರೂ ಈ ಸಭೆಯ ಮುಂದೆ ವ್ಯಕ್ತಪಡಿಸಿದ್ದಾರೆ. ನಮ್ಮ ಜಿಲ್ಲೆಯ ಹಾಗೂ ತಾಲ್ಲೂಕಿನ ವಿಚಾರವನ್ನು ಹೇಳುವುದಾದರೆ ಅದು ಇಲ್ಲಿಯವರೆಗೂ ಏನು ಹೇಳಿದ್ದಾರೋ ಅದಕ್ಕಿಂತ ಯಾವ ರೀತಿಯಲ್ಲೂ ಭಿನ್ನರೂಪವಾಗಿಲ್ಲ. ಸಾಮಾನ್ಯವಾಗಿ ಇಡೀ ಭಾಗದಲ್ಲೆಲ್ಲಾ ಹಾಗೇ ಇದೆ. ಈ ವಿಚಾರದಲ್ಲಿ ಸರ್ಕಾರದವರು ಡಿವಿಜನಲ್ ಕಮಿಷನರ ಹಾಗೂ ಡಿ. ಸಿ. ಗಳ ಮಟ್ಟದಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಸಾಕಷ್ಟು ಹಣವನ್ನೊದಗಿಸಿದ್ದೇವೆ ಎಂದು ಮಾನ್ಯ ಕಂದಾಯದ ಸಚಿವರು ಹೇಳಿದರು. ರೈತನ ದೃಷ್ಟಿಯಿಂದ ಇದೊಂದು ಸುಸ್ವಾಗತವಾದ ಮಾತು.

ಸ್ವಾಮಿ, ನನ್ನ ಸ್ಥಾನೀಕ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡುವ ಮುನ್ನ ನಾನು ಈ ಆಹಾರ ಸಮಸ್ಯೆಯ ಸಂಬಂಧದಲ್ಲಿ ಕೆಲವು ಕೂತೂಹಲಕರವಾದ ವಿಚಾರಗಳಿದ್ದಿರುವುದರಿಂದ ನನಗೆ ತಿಳಿದ ಹಾಗೆ ಕೆಲವು ಮೂಲಭೂತ ವಿಚಾರಗಳನ್ನು ಈ ಆಹಾರ ಸಮಸ್ಯೆಗೆ ಸಂಬಂಧಪಟ್ಟ ಹಾಗೆ, ಈಗ ಈ ಸಭೆಯ ಮುಂದಿಡಬೇಕೆಂಬ ಆಸೆ ನನಗಿದೆ.

ಮೈಸೂರು ದೇಶದಲ್ಲಿ ಈ ಒಕ್ಕಲುತನದಿಂದ ವೈಯಕ್ತಿಕವಾಗಿ ಬರತಕ್ಕ ಉತ್ಪನ್ನ 150 ರೂಪಾಯಿಗಳಿದ್ದರೆ ಇತರ ಉದ್ಯೋಗಗಳಿಂದ ವೈಯಕ್ತಿಕವಾಗಿ ಬರತಕ್ಕ ವರಮಾನ ಬಹಳ ಹೆಚ್ಚಾಗಿರುತ್ತದೆ. ಹೀಗೆ ವೈಯಕ್ತಿಕ ವರಮಾನಗಳಲ್ಲಿ ವ್ಯಕ್ತಿ ವ್ಯಕ್ತಿಗೂ ಬಹಳ ಅಂತರ ಉಂಟು. 1950 ರಿಂದ ಕಳೆದ 10-12 ವರ್ಷಗಳಲ್ಲಿ ವ್ಯವಸಾಯದ ಉತ್ಪನ್ನ ಮತ್ತು ಉಳಿದ ಉತ್ಪನ್ನಗಳನ್ನು ತುಲನ ಮಾಡಿದರೆ ಹಳೆಯ ಮೈಸೂರು ಪ್ರಾಂತ್ಯದಲ್ಲಿ ವ್ಯವಸಾಯದ ಉತ್ಪನ್ನ ಶೇ. 50 ರಿಂದ ಶೇ. 4ಕ್ಕೆ ಇಳಿದಿದೆ. ಉಳಿದ ಉತ್ಪನ್ನಗಳು ಏರುತ್ತಿವೆ. ಇದರಿಂದ ವ್ಯವಸಾಯಗಾರರಲ್ಲಿ ಹಣವಿದೆಯೋ ಅಥವಾ ಬೇರೆ ಉದ್ಯೋಗಗಳಲ್ಲಿ ಮತ್ತು ಕೈಗಾರಿಕೆ ಮಾಡುವವರಲ್ಲಿ ಹಣವಿದೆಯೋ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಈಗ ಒಕ್ಕಲುತನ ಲಾಭದಾಯಕ ಉದ್ಯೋಗವಲ್ಲವೆನ್ನುವುದನ್ನು ಎಲ್ಲರೂ ಒಪ್ಪತಕ್ಕ ಮಾತಾಗಿದೆ. ಆದ್ದರಿಂದಲೇ ಹಳ್ಳಿಗರು ಈಗ ಈ ವ್ಯವಸಾಯ ಕಸುಬಿಗೆ ಬರರು. ಹಳ್ಳಿಯಲ್ಲಿ ದುಡಿಯುವ ಒಬ್ಬ ಕೂಲಿಗಾರನೂ ಸಹ ಪಟ್ಟಣದಲ್ಲಿ ಹೋಗಿ ಕೆಲಸ ಮಾಡೋಣ, ಇಲ್ಲವೇ ಸಿಪಾಯಿ ಕೆಲಸಕ್ಕೆ ಹೋಗಿ ಸೇರೋಣವೆಂದು ಹೇಳುತ್ತಾನೆ. ಒಬ್ಬ ರೈತನ ಮಗ ಏನಾದರೂ ಎಸ್. ಎಸ್. ಎಲ್. ಸಿ. ಪಾಸ್ ಮಾಡಿದರೆ ಸಾಕು. ಪಟ್ಟಣಕ್ಕೆ ಬಂದು ಯಾವುದಾದರೂ ಒಂದು ಉದ್ಯೋಗ ಮಾಡಲು ಪ್ರಾರಂಭಿಸುತ್ತಾನೆ. ನಿಜವಾಗಿ ಯಾವನಾದರೂ ಒಬ್ಬ ಅಲ್ಲಿ ಗ್ರ್ಯಾಜುಯೇಟ್ ಆದರೆ ಖಂಡಿತವಾಗಿ ಹೊಲದಲ್ಲಿ ಕೆಲಸ ಮಾಡಬೇಕೆಂದು ಹೋಗುವುದಿಲ್ಲ. ಯಾವುದಾದರೂ ಒಂದು ಸರ್ಕಾರಿ ನೌಕರಿಯನ್ನು ಪಡೆಯುತ್ತಾನೆ. ಪಟ್ಟಣಕ್ಕೆ ಒಂದು ಸಾರಿ ಉದ್ಯೋಗಕ್ಕೆ ಬಂದ ಮೇಲೆ ಅಥವಾ ಯಾರೇ ಆಗಲೀ ಪಟ್ಟಣಕ್ಕೆ ಹೋಗಿ ಬಂದವರು ಪುನಃ ಹಳ್ಳಿಗೆ ಹೋಗುವುದೇ ಇಲ್ಲ. ಪಟ್ಟಣ ಎಂಬುದು ಅವರಿಗೆ ಸ್ವರ್ಗ ಲೋಕವಿದ್ದಹಾಗೆ ಇರುತ್ತದೆ. ಹಳ್ಳಿಯಲ್ಲಿ ಏನಿದೆ ಬರೀ ಉತ್ಪನ್ನವಿದೆಯೆಂಬುದಾಗಿ ಅಲ್ಲಗಳೆಯುವ ಮಾತನಾಡುತ್ತಾರೆ. ಹೀಗಿರು ಕಾರಣ ಭಾರತ ದೇಶದಲ್ಲಿ ಪ್ರತಿವರ್ಷವೂ ಆಹಾರವನ್ನು ಪರದೇಶಗಳಿಂದ ಎರಡು ನೂರು ಕೋಟಿ ರೂಪಾಯಿಗಳಷ್ಟು ತರಿಸುತ್ತಿದ್ದಾರೆ. ಸಾಮಾನ್ಯವಾಗಿ ಆಹಾರ ಬೆಳೆ ಹೆಚ್ಚಾಗಿ ಆಗಬೇಕಾಗಿದ್ದರೆ ರೈತನಿಗೆ ಹೊಲದಲ್ಲಿ ಉಳಬೇಕು ಎಂಬ ಉತ್ಸಾಹಬೇಕು, ಇತ್ತೀಚೆಗೆ ಹಳ್ಳಿಯಲ್ಲಿ ವಾಸ ಮಾಡುವುದನ್ನು ಬಿಟ್ಟು ಪಟ್ಟಣದಲ್ಲಿ ಸಿಪಾಯಿ ಕೆಲಸಕ್ಕೆ ಹೋಗೋಣವೆನ್ನುತ್ತಾರೆ. ಒಕ್ಕಲುತನದಲ್ಲಿಯೂ ಅನೇಕರು ಬುದ್ಧಿವಂತರು ಇದ್ದಾರೆ. ಪಟ್ಟಣಕ್ಕೆ ಬಂದು ಶಾಲೆಯಲ್ಲಿ ಸೇರಿ 3ನೇ ವರ್ಗ ದಾಟಿದರೆಂದರೆ ವ್ಯವಸಾಯ ಕಸುಬನ್ನು ಬಿಟ್ಟ ಹಾಗೆಯೇ. ಅವರು ವ್ಯವಸಾಯ ಮಾಡುವುದು reverse-gear ಆಗುತ್ತದೆ. ವ್ಯವಸಾಯ ಮಾಡತಕ್ಕ ಮನುಷ್ಯ ಪಟ್ಟಣದಲ್ಲಿ ಸೇರಿದ ಮೇಲೆ ಹಳ್ಳಿಯ ಕಸುಬು ಅವನಿಗೆ ಹಿಡಿಸುವುದಿಲ್ಲ. ಇದರಿಂದ ನಮ್ಮ ಆಹಾರ ಅಭಾವ ಖಂಡಿತವಾಗಿ ಕಡಿಮೆಯಾಗುವುದಿಲ್ಲವೆಂದು ಕೆಲವರು ಹೇಳಿದರು. ಅದು ತಪ್ಪು ವಾದ. ನನ್ನ ಮನಸ್ಸಿನಲ್ಲಿ ಆಹಾರ ಅಭಾವ ಹೆಚ್ಚಾಗಿದೆ ಎಂದು ಹೇಳುತ್ತೇನೆ. ಇವತ್ತಿನ ದಿವಸ ಒಕ್ಕಲಿಗನ ಮೇಲೆ ಯಾವ ಯಾವ ತರಹ ಭಾರಗಳು ಇವೆ, ಅವನ್ನು ಹೇಗೆ ಕಡಮೆ ಮಾಡಬೇಕು ಎನ್ನುವುದನ್ನು ನಾನು ಈ ಸಭೆಯ ಮುಂದೆ ಹೇಳುತ್ತೇನೆ. ಈಗ ಸದ್ಯಕ್ಕೆ ಭೂಕಂದಾಯ ನಾಲ್ಕು ಕೋಟಿ ರೂಪಾಯಿಗಳಷ್ಟು ತುಂಬುವುದಿತ್ತು. ಈಗ ರಿವೈಜ್ಡ್ ಎಸ್ಟಿಮೇಟು ಪ್ರಕಾರ ಅದು 8 ಕೋಟಿ ರೂಪಾಯಿಗಳಾಗುತ್ತದೆ. ಎಂಬುದಾಗಿ ಕಂದಾಯ ಮಂತ್ರಿಗಳು ಹೇಳಿದರು. ಇವತ್ತು ಭೂಕಂದಾಯವನ್ನು ಗ್ರಾಸ್ ಇನ್‌ಕಂ ಮೇಲೆ ಒಂದಾಣೆ ಸ್ಟಾಂಡರ್ಡ್ ರೇಟ್ ಎಂದು ಮಾಡಿದ್ದಾರೆ. ಆ ಒಂದು ಸ್ಟಾಂಡರ್ಡ್ ರೇಟ್ ಪ್ರಕಾರ ಮೈಸೂರು ಸಂಸ್ಥಾನದಲ್ಲಿ 8 ಕೋಟಿಯನ್ನು 16 ರಿಂದ ಗುಣಿಸಿದರೆ 128 ಕೋಟಿ ರೂಪಾಯಿಗಳಾಗುತ್ತದೆ. ಭೂಕಂದಾಯ ಸ್ಟಾಂಡರ್ಡ್ ರೇಟ್ ಪ್ರಕಾರ ಲೆಕ್ಕ ಹಾಕಿದರೆ ಇಡೀ ಮೈಸೂರು ದೇಶದ ವ್ಯವಸಾಯ ಉತ್ಪನ್ನ 128 ಕೋಟಿ ರೂಪಾಯಿಗಳಾಗುತ್ತದೆ. ಅಂದ ಮೇಲೆ ನಮ್ಮಲ್ಲಿ ಈಗ

2 ಕೋಟಿ 60 ಲಕ್ಷ ಎಕರೆಯಷ್ಟು ಭೂಮಿ ಇದೆ. ಒಂದು ಎಕರೆಗೆ ಗ್ರಾಸ್ ಇನ್‌ಕಂ 50 ರೂಪಾಯಿಗಳಷ್ಟಾದರೆ ಒಣ ಭೂಮಿಗೆ 1 ರೂಪಾಯಿ ಆಗುತ್ತದೆ. ಆಗ ನೆಟ್ ಇನ್‌ಕಂ 1 ಎಕರೆಗೆ ಡ್ರೈ ಏರಿಯಾದಲ್ಲಿ ಎರಡು ಖರ್ಚು ಆಗುತ್ತದೆ. ಒಂದು ಉಳಿತಾಯವಾಗುತ್ತದೆ. ಆಗ ಒಂದು ಎಕರೆಗೆ 25 ರೂಪಾಯಿಗಳ ಅಂದಾಜು ಬೀಳುತ್ತದೆ. ಇವತ್ತಿನ ದಿವಸ ಕೇಂದ್ರ ಸರ್ಕಾರದವರು ವರಮಾನ ತೆರಿಗೆಯನ್ನು ಹಾಕಬೇಕಾದರೆ 3 ಸಾವಿರ ರೂಪಾಯಿಗಳ ನಿವ್ವಳ ಉತ್ಪನ್ನ ವರ್ಷಕ್ಕೆ ಬಂದರೆ ಅದರಮೇಲೆ ಹಾಕುತ್ತಾರೆ. ಒಂದು ಎಕರೆ ಭೂಮಿಗೆ 25 ರೂಪಾಯಿಗಳ ಮೇಲೆ ವರಮಾನ ಬರುವವರಿಗೆ ಕಂದಾಯ ಹಾಕುತ್ತಾರೆ. ಭೂಕಂದಾಯ ಪದ್ಧತಿಯಲ್ಲಿ ರೈತನಿಗೆ ನಿಜವಾಗಿ ಕಲ್ಯಾಣ ಮಾಡಬೇಕಾದರೆ ಸಂಪೂರ್ಣವಾಗಿ ಈಗಿನ ಪದ್ಧತಿ ಬದಲಿ ಮಾಡಬೇಕು. ಯಾವ ಭೂಮಿಯಿಂದ ಶಾಶ್ವತವಾಗಿ ಉತ್ಪನ್ನ 3 ಸಾವಿರ ರೂಪಾಯಿಗಳವರೆಗೂ ಎಲ್ಲಿಯವರೆಗೂ ಬರುವುದಿಲ್ಲವೋ ಅಂತಹವನಿಗೆ 1 ಪೈ ಭೂಕಂದಾಯವೂ ಬೀಳುವುದಿಲ್ಲ. ಅದಕ್ಕೆ ಮೇಲೆ ಏನಾದರೂ ಉತ್ಪನ್ನವೇನಾದರೂ ಬಂದರೆ ಅಂತಹವರಿಗೆ ಭೂಕಂದಾಯ ಸ್ವಲ್ಪ ಮಟ್ಟಿಗೆ ಬೀಳುತ್ತದೆ. ಸಾಮಾನ್ಯ ಒಬ್ಬ ಗ್ರ್ಯಾಜುಯೇಟ್ ಏನೋ ಒಕ್ಕಲಿಗನ ಮತದಲ್ಲಿದ್ದರೆ ಅವನು ನಿಜವಾಗಿ ಪಟ್ಟಣದಲ್ಲಿ ಕೆಲಸ ಮಾಡಿದ ಮೇಲೆ ಹಳ್ಳಿಗೆ ಹೋಗುವುದಿಲ್ಲ. ಅವನು ಪಟ್ಟಣದಲ್ಲಿದ್ದರೆ ತನ್ನ ಮಗನಿಗೆ ಮೆಡಿಕಲ್ ಕಾಲೇಜು ಅಥವಾ ಇತರ ಯಾವುದಾದರೂ ಕಾಲೇಜಿಗೆ ಕಳುಹಿಸುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತಾನೆ. ಸರ್ಕಾರೀ ನೌಕರನಾಗಿಯೇ ಇರುವುದಾದರೆ ಸುಖವಾಗಿರುತ್ತದೆ ಎಂದು ಹೇಳುತ್ತಾನೆ. ಇನ್ನು ಒಟ್ಟು ಕಂದಾಯದ ವಿಚಾರ ವಿನಿಮಯ ಮಾಡಿದ್ದಾದರೆ ಒಕ್ಕಲುತನದ ಪದ್ಧತಿ ಎಲ್ಲೋ ಸ್ವಲ್ಪ ಮಟ್ಟಿಗೆ ಅಲ್ಲಿ ಉಳಿಯುತ್ತದೆ. ಎಷ್ಟೇ ಮಾಡಿದರೂ ಅವನ ಕಷ್ಟ ಪರಿಹಾರವಾಗುವುದಿಲ್ಲವೆಂಬುದಾಗಿ ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಇವತ್ತಿನ ದಿವಸ ಎಲೆಕ್ಟ್ರಿಸಿಟಿ ಶರಾವತಿಯಿಂದ ಬರುತ್ತದೆ. ಎಲ್ಲಾ ಕೈಗಾರಿಕೆಗಳಿಗೂ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಶೇ. 8 ರಷ್ಟು ನೀರಾವರಿಗೆ ಬಿಟ್ಟರೆ ಇವತ್ತಿನ ದಿವಸ ಒಣಭೂಮಿಗೆ ವಿದ್ಯುಚ್ಛಕ್ತಿಯನ್ನು ಪ್ರತಿಯೊಂದು ಪ್ರಾಂತಕ್ಕೂ ಕೊಟ್ಟರೆ ಯಾವ ರೈತ ಸಾಲ ತೆಗೆದು ಉತ್ಪನ್ನವನ್ನು ಹೆಚ್ಚಾಗಿ ಮಾಡುತ್ತಾನೆ ? ಅದು ಬಹಳ ಕಷ್ಟ. ಆದ್ದರಿಂದ ಉಳಿದ ಎಲ್ಲಾ ಯೋಜನೆಗಳನ್ನು ಹಾಗೆಯೇ ಇಟ್ಟು, ವಿದ್ಯುಚ್ಛಕ್ತಿ ಯೋಜನೆಯ ಮಟ್ಟದ ಕಾರ್ಯಗಳಿಗೆ top priority ಕೊಡಲೇಬೇಕು. ನೆರೆಹೊರೆ ರಾಜ್ಯಗಳಲ್ಲಿ ಇದನ್ನು ಈಗಾಗಲೇ ಮಾಡುತ್ತಿದ್ದಾರೆ, ಆದರಿಂದಲೇ ಆ ಪ್ರದೇಶಗಳಲ್ಲಿ ಹೆಚ್ಚು ಉತ್ಪನ್ನವಾಗುತ್ತಿದೆ.

ಇನ್ನೊಂದು ವಿಷಯ. ಕಂದಾಯದ ಒಂದು ಇಂಪ್ಯಾಕ್ಟ್ ಆಗಿ ಅದನ್ನು ಹಾಕದೇ ಇದ್ದರೆ ಸುಮಾರು 6 ಕೋಟಿ ರೂಪಾಯಿಗಳಷ್ಟು ಕಂದಾಯ ನಮಗೆ ಹೋಗುತ್ತದೆಂದು ಹೇಳಬಹುದು. ಕಂದಾಯದ ವಸೂಲಿಗೆ ಅನೇಕ ಸೋರ್ಸಸ್ ಉಂಟು. ಅಂಥಾದ್ದು ಉಪಯೋಗವಾಗಲಿಕ್ಕೆ ಉಂಟು. ಅದನ್ನು ಟ್ಯಾಪ್ ಮಾಡುವ ಶಕ್ತಿ ನಮಗಿನ್ನೂ ಬಂದಿಲ್ಲ. ನಮ್ಮ ಎಂ. ಎಲ್. ಎ. ಪೈಕಿ ಸುಮಾರು 70 ಜನರು ವಿದ್ಯುಚ್ಛಕ್ತಿಯನ್ನು ವಿಶೇಷವಾಗಿ ಉಪಯೋಗಿಸುವವರಿದ್ದಾರೆ. ಹಳ್ಳಿಗಳಲ್ಲಿ ಕೆಲವು ಶ್ರೀಮಂತರುಗಳು ಉಪಯೋಗಿಸುತ್ತಾರೆ. ಅಂತಹವರಿಗೆ ಕಂದಾಯ ಜಾಸ್ತಿ ಹಾಕಬೇಕಾಗಿ ಬರುತ್ತದೆ. ಇದರಿಂದ ಕೇವಲ ಬಡವರ ಮೇಲೆ ಒತ್ತಾಯ ಮಾಡಿದರೆ ಭಾರ ನಮ್ಮ ಮೇಲೆ ಬೀಳುತ್ತದೆ. ಇವತ್ತಿನ ದಿವಸ ಒಬ್ಬ ಅಡಿಗೆ ಮಾಡುವುದಕ್ಕೆ ಕಟ್ಟಿಗೆ ತರುವುದಕ್ಕಿಂತ ವಿದ್ಯುಚ್ಛಕ್ತಿಯನ್ನುಪಯೋಗಿಸಿದರೆ ಬಹಳ ಕಡಿಮೆ ಖರ್ಚು ಬೀಳುತ್ತದೆಂದು ಹೇಳುತ್ತಿದ್ದಾನೆ. ವಿದ್ಯುಚ್ಛಕ್ತಿ ಮೇಲೆ ಇಷ್ಟು ಡಿಮ್ಯಾಂಡ್ ಇರುವಾಗ ಏತಕ್ಕೋಸ್ಕರ ಸರ್‌ಚಾರ್ಜನ್ನು ಅವರ ಬಳಕೆದಾರರ ಮೇಲೆ ಹೇರುವುದಿಲ್ಲ. ಎಲ್ಲೆಲ್ಲಿ ಕಂದಾಯ ವಿಧಿಸಬೇಕೋ ಅಲ್ಲಿ ಬೀಳುವುದಿಲ್ಲ. ಎಲ್ಲೆಲ್ಲಿ ಕಂದಾಯ ಬೀಳುವುದಿಲ್ಲವೋ ಅಲ್ಲಿ ಕಂದಾಯವನ್ನು ಹಾಕುತ್ತಾರೆ ಇದನ್ನು ಚೆನ್ನಾಗಿ ಪರೀಕ್ಷೆ ಮಾಡಬೇಕಾಗಿದೆ. ಎಲೆಕ್ಟ್ರಿಸಿಟಿ ಅದಕ್ಕೆ ಬೇಕು, ಇದಕ್ಕೆ ಬೇಕು ಎಂದು ಎಲ್ಲಾದಕ್ಕೂ ಉಪಯೋಗಿಸುವಾಗ ಸರ್‌ಚಾರ್ಜನ್ನು ಏತಕ್ಕೆ ಅವುಗಳ ಮೇಲೆ ಹೇರುವುದಿಲ್ಲ. ಅದರಂತೆ ಮತ್ತೊಂದು ಹೇಳಬೇಕೆಂದರೆ ಇವತ್ತಿನ ದಿವಸ ಮೋಟಾರುಗಳು, ಟಾಕೀಗಳ ಮೇಲೆ 2 ಸಾವಿರ ರೂಪಾಯಿಗಳ ಟ್ಯಾಕ್ಸ್ ಹಾಕುತ್ತಾರೆ. ಮೋಟಾರ್ ಕಾರಿಗೆ 80-100 ರೂಪಾಯಿಗಳಂತೆ ತೆರಿಗೆಯನ್ನು ಇಟ್ಟಿದ್ದಾರೆ. ಉಪಯೋಗಿಸಲೀ, ಉಪಯೋಗಿಸದೇ ಇರಲಿ, ತೆರಿಗೆಯನ್ನು ಕೊಡಬೇಕು. ಯಾವನು ಮೋಟಾರು ಕಾರನ್ನು ಇಟ್ಟಿದ್ದಾನೋ ಅವನಿಗೆ ತೆರಿಗೆಯ ಭಾರವು ಸ್ವಲ್ಪ ಇದೆಯೆಂದು ನಾನು ಹೇಳುತ್ತೇನೆ. ಹಿಂದೆ 100 ಮೋಟಾರುಗಳು ಇದ್ದುದು ಈಗ 20 ಸಾವಿರ ಮೋಟಾರು ಕಾರುಗಳಿವೆ. ಆದ್ದರಿಂದ 100 ರೂಪಾಯಿಗಳಿಂದ 500 ರೂಪಾಯಿಗಳವರೆಗೆ ಒಂದೊಂದು ಮೋಟಾರಿಗೂ ಕಂದಾಯ ಹೆಚ್ಚು ಮಾಡಿದರೆ ಹೆಚ್ಚು ಉತ್ಪತ್ತಿ ಸರ್ಕಾರಕ್ಕೆ ಬರುತ್ತದೆ. ಹೀಗೆ ಎಷ್ಟೋ ಸೋರ್ಸಸ್ ಇವೆ.

ಇನ್ನೊಂದು ವಿಷಯ. ಪಟ್ಟಣದೊಳಗೆ ಬೇಕಾದಷ್ಟು ಮನೆಗಳನ್ನು ಬಾಡಿಗೆಗೆ ಕೊಟ್ಟು ಹೆಚ್ಚು ಉತ್ಪನ್ನ ಮಾಡುವವರೂ ಇದ್ದಾರೆ. ಅವರಿಗೆ ಪ್ರತಿವರ್ಷ ತೆರಿಗೆ ಹಾಕುವುದು ಉಂಟು. ಪಟ್ಟಣ

(ಶ್ರೀ ಎಂ. ಆರ್. ಪಾಟೀಲ್)

ಗಳಲ್ಲಿರುವಂತಹ ಬಡವರ ಮೇಲೆ ತೆರಿಗೆ ಹಾಕಿ ಎಂಬುದಾಗಿ ನಾನು ಹೇಳುವುದಿಲ್ಲ. ಕೇವಲ ಶ್ರೀಮಂತರಾಗಿ 10-20 ಸಾವಿರ ರೂಪಾಯಿಗಳಷ್ಟು ತಿಂಗಳಿಗೆ ಬಾಡಿಗೆ ರೂಪದಲ್ಲಿ ಪಡೆಯುವವರ ಮೇಲೆ ಏಕೆ ತೆರಿಗೆ ಹಾಕುವುದಿಲ್ಲವೋ ನನಗೆ ಗೊತ್ತಿಲ್ಲ.

ಸರ್ಕಾರದವರು ಹಾಕತಕ್ಕ ಕಂದಾಯವನ್ನೆಲ್ಲಾ ಷಹರುಗಳಲ್ಲಿರತಕ್ಕ ನಾವುಗಳೂ ಕೊಡುತ್ತೇವೆಂದು ಅವರು ಹೇಳಬಹುದು. ಅವರೇನು ಕಂದಾಯವನ್ನು ಕೊಡುತ್ತಾರೆಯೋ ಅದು ಅವರಿಗೆ ಒದಗಿಸತಕ್ಕ ನೀರಿನ ಸೌಕರ್ಯ ಮತ್ತು ಎಲೆಕ್ಟ್ರಿಸಿಟಿ ಇತ್ಯಾದಿಗಳಿಗೆ ಖರ್ಚಾಗುತ್ತದೆ. ಮತ್ತೇನೂ ಇಲ್ಲ.

ಇನ್ನೊಂದು ವಿಷಯ. ಒಬ್ಬ ರೈತನು ತಾನು ಬೆಳೆದ ಬೆಳೆಯನ್ನು ಷಹರುಗಳಲ್ಲಿ ತಂದು ಮಾರಾಟ ಮಾಡಬೇಕು ಎಂದರೆ ಅದಕ್ಕೆ ಆಕ್ಟ್ರಾಯ್ ಹಾಕುತ್ತಾರೆ. ಅವನು ಏನಾದರೂ ಕೊಂಡು ಕೊಳ್ಳುವುದಕ್ಕೆ ಹೋದರೆ ಅದರ ಮೇಲೆ ಟ್ಯಾಕ್ಸ್ ಹಾಕುತ್ತಾರೆ. ಒಕ್ಕಲುತನದ ಹುಟ್ಟುವಳಿಯ ಮೇಲೆಯೂ ಟ್ಯಾಕ್ಸ್ ಹಾಕುವುದು ಕೆಲವು ಮುನಿಸಿಪಾಲಿಟಿಗಳಲ್ಲಿ ಇದೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂದರೆ ಒಕ್ಕಲುತನದ ಹುಟ್ಟುವಳಿಯ ಮೇಲೆ ಆಕ್ಟ್ರಾಯ್ ಹಾಕತಕದ್ದು ರೈತನ ಪರಿಸ್ಥಿತಿಗೆ ಒಳಿತಲ್ಲ. ಈ ಒಂದು ವಿಚಾರವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಸುಧಾರಣೆ ಮಾಡದೆ ಇದ್ದರೆ ರೈತನಿಗೆ ತೊಂದರೆಯಾಗುತ್ತದೆ. ಷಹರುಗಳಲ್ಲಿ ಮುನಿಸಿಪಾಲಿಟಿಯವರು ಒಕ್ಕಲುತನದ ಹುಟ್ಟುವಳಿಯ ಮೇಲೆ ಆಕ್ಟ್ರಾಯನ್ನ ಹಾಕಿ ಅದನ್ನು ತಮ್ಮ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ, ಎಲೆಕ್ಟ್ರಿಸಿಟಿ ಮತ್ತು ನೀರಿನ ಸೌಲಭ್ಯವನ್ನು ಒದಗಿಸಿಕೊಳ್ಳುವುದಕ್ಕೆ ಅದನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಇದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಹಳ್ಳಿಯೊಳಗೆ ಕುಡಿಯುವ ನೀರಿನ ಬಾವಿಗಳಿಲ್ಲ. ಮೂರು-ನಾಲ್ಕು ಮೈಲಿ ದೂರದಿಂದ ಜನಗಳು ಕೊಡಗಳಲ್ಲಿ ನೀರನ್ನು ತಲೆಯಮೇಲೆ ಹೊತ್ತುಕೊಂಡು ತರಬೇಕು. ಇಂಥಾ ಕಷ್ಟಗಳನ್ನು ಸರ್ಕಾರದವರು ಹೋಗಲಾಡಿಸಿ ರೈತನ ಜೀವನ ಸುಖಮಯವಾಗುವಂತೆ ಮಾಡಬೇಕು. ರೈತನಿಗ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನನಗೆ ಸಿಕ್ಕದಂತಹ ಸ್ವಲ್ಪ ಸಮಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಿದ್ದೇನೆ. ಇವುಗಳೆಲ್ಲವನ್ನೂ ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ. ವರ್ಷೇ ವರ್ಷೇ ಸ್ವಲ್ಪ ಸ್ವಲ್ಪ ಕೆಲಸಗಳನ್ನು ಮಾಡಿಸಿಕೊಂಡು ಹೋಗ ಬೇಕಾಗುತ್ತದೆ. ಈ ಒಂದು ಅಭಾವ ಪರಿಸ್ಥಿತಿಯ ಬಗ್ಗೆ ನಮ್ಮ ತಾಲ್ಲೂಕಿನಲ್ಲಿ ಸರ್ಕಾರದವರು ಏನೇನು ಕಾರ್ಯಗಳನ್ನು ಮಾಡಿಸಬೇಕೆಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದಾರೆಯೋ ಅದನ್ನು ತೀವ್ರಗತಿಯಿಂದ ಮಾಡಬೇಕು. ಮತ್ತು ರೈತನ ಸುಧಾರಣೆಯಾಗುವುದಕ್ಕೆ ಏನೇನು ಕೆಲಸಗಳನ್ನು ಮಾಡಬೇಕೋ ಅವುಗಳನ್ನು ಆದಷ್ಟು ತೀವ್ರವಾಗಿ ಮಾಡಬೇಕು. ರೈತನ ಮೇಲೆ ಬೀಳತಕ್ಕಂಥ ಟ್ಯಾಕ್ಸ್‌ಗಳು ಏನಿವೆಯೋ ಅವುಗಳನ್ನು ತೆಗೆದುಹಾಕಿದರೆ ಆಹಾರ ಧಾನ್ಯಗಳ ಬೆಲೆ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ನನ್ನ ಮನಸ್ಸಿನಲ್ಲಿರುವ ನಾಲ್ಕು ಮಾತುಗಳನ್ನು ನಾನು ಹೇಳಿದ್ದೇನೆ. ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರುಗುಪ್ಪ).—ಮಾನ್ಯ ಅಧ್ಯಕ್ಷರೇ, ಈಗ ಈ ರಾಜ್ಯದಲ್ಲೆಲ್ಲಾ ವ್ಯಾಪಕವಾಗಿ ಬಂದಿರತಕ್ಕ ಘೋರವಾದ ಈ ಒಂದು ಅಭಾವ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರನೇಕರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಆಗಿಂದಾಗ್ಗೆ ಕೊಟ್ಟರೂ ಸಹ ಸರ್ಕಾರದವರು ಅವುಗಳನ್ನು ಕಾರ್ಯಗತಮಾಡುವುದಕ್ಕೆ ವಿಳಂಬ ನೀತಿಯನ್ನು ತೋರಿಸುತ್ತಿದ್ದಾರೆ. ಎಷ್ಟು ಹೇಳಿದರೂ ಕೂಡ ಇದರ ಕಾರ್ಯಗಳು ಚುರುಕಾಗಿ ನಡೆಯುತ್ತಾ ಇಲ್ಲ. ಈ ಅಭಾವ ಪರಿಸ್ಥಿತಿ ಎನ್ನತಕ್ಕಂಥಾದ್ದು ರೈತ ಜನಾಂಗಕ್ಕೆ ರೈತ ಕೂಲಿಗಾರರಿಗೆ ಒಂದು ಗಂಡಾಂತರವಾಗಿ ಹಳ್ಳಿಗಳಲ್ಲಿ ಬಹಳ ತೊಂದರೆಯುಂಟಾಗಿದೆ. ಈಗ ಈ ಸಭೆಯಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ಮಾತನಾಡುವವರು ನಿಜವಾಗಿ ಹಳ್ಳಿಗಳ ಕಡೆ ಪರಿಸ್ಥಿತಿ ಏನಿದೆ ಎಂಬುದನ್ನು ಕಣ್ಣಾರೆ ನೋಡಿ ಮಾತನಾಡುವವರು ಕೆಲವರಿದ್ದಾರೆ. ಹಳ್ಳಿಗಳ ಪರಿಸ್ಥಿತಿಯನ್ನು ನೋಡದೆ ಮಾತನಾಡುವವರು ಕೆಲವರಿದ್ದಾರೆ. ಈವೊತ್ತು ರೈತ ಸರಕಾರದಿಂದ ಸಹಾಯವನ್ನು ಕಾಳನ್ನೂ ಕೇಳುವ ಒಂದು ಅನಿವಾರ್ಯ ಪರಿಸ್ಥಿತಿಗೆ ಬಂದಿದ್ದಾನೆ. ರೈತ ತಾನು ಬೆಳೆಯನ್ನು ಬೆಳೆದು ಆಹಾರಧಾನ್ಯವನ್ನು ಪಟ್ಟಣಗಳಿಗೆ ಒದಗಿಸಿ ಪಟ್ಟಣಿಗರಿಗೂ ವರ್ತಕರುಗಳಿಗೂ ಮತ್ತು ಅಧಿಕಾರಿಗಳಿಗೂ ಉಣಿಸತಕ್ಕ ರೈತ ಇವೊತ್ತು ಸರ್ಕಾರವನ್ನು ಬೇಡಿ ಆಹಾರ ಧಾನ್ಯವನ್ನು ತರುವಂಥ ಒಂದು ಪರಿಸ್ಥಿತಿಗೆ ಬಂದಿದ್ದಾನೆ. ಮಳೆ ಸರಿಯಾಗಿ ಆಗಿದ್ದರೆ ರೈತ ಸರ್ಕಾರವನ್ನು ಬೇಡುವಂತಹ ಪರಿಸ್ಥಿತಿ ಒದಗುತ್ತಾ ಇರಲಿಲ್ಲ. ಮಳೆಯು ಸರಿಯಾಗಿ ಆಗದೆ

ಬೆಳೆಯನ್ನು ಬೆಳೆಯದೆ ಅಭಾವ ಪರಿಸ್ಥಿತಿ ಉಂಟಾಗಿ ಜನಗಳು ಒಂದು ಹೊತ್ತು ಊಟಮಾಡುವಂತಹ ಒಂದು ದರಿದ್ರಾವಸ್ಥೆಗೆ ಜನಗಳು ಬಂದಿದ್ದಾರೆ. ಸರ್ಕಾರದ ಖರ್ಚು ವೆಚ್ಚಗಳಿಗೆ ಹಣವನ್ನು ಕೊಡತಕ್ಕಂಥ ರೈತನಿಗೆ ಎಲ್ಲರಿಗೂ ಸಮೃದ್ಧಿ ಮಾಡತಕ್ಕಂಥ ರೈತನಿಗೆ ಕೊರತೆ ಮತ್ತು ತೊಂದರೆ ಬಂದಾಗ ಅವರಿಗೆ ಪರಿಹಾರವನ್ನು, ಸಹಾಯವನ್ನು ಒದಗಿಸತಕ್ಕ ವಿಷಯದಲ್ಲಿ ಸರ್ಕಾರ ವಿಳಂಬ ಮಾಡದೆ ತೀವ್ರಗತಿಯಿಂದ ಅದನ್ನು ಒದಗಿಸಬೇಕು. ಸಹಕಾರ ಸಂಘಗಳ ಮೂಲಕವಾಗಲೀ ಅಥವಾ ಬೇರೆ ಯಾವ ವ್ಯವಸ್ಥೆಯನ್ನಾಗಲೀ ಮಾಡಿ ರೈತನಿಗೆ ಆಹಾರ ಪದಾರ್ಥಗಳನ್ನು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಯಾವ ಒಂದು ಕೆಲಸದಲ್ಲೇ ಆಗಲೀ ವಿಳಂಬ ಎನ್ನುವುದು ಸರ್ಕಾರದಲ್ಲಿ ಮಾಮೂಲಾಗಿ ನಡೆಯುತ್ತದೆ. ನಮ್ಮ ತಾಲ್ಲೂಕಿನಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸಿ ಕೊಡಬೇಕೆಂದು ಈಗ ಎರಡು ವರ್ಷಗಳಿಂದಲೂ ಒಂದೇ ಸಮನಾಗಿ ಹೇಳುತ್ತಿದ್ದೇನೆ. ಆದರೂ ಸಹ ಆ ಕಡೆ ಸರ್ಕಾರದವರು ಗಮನವನ್ನು ಕೊಟ್ಟಿಲ್ಲ. ಈಗಾಗಲೇ ಕ್ಷಾಮ ಪ್ರಾರಂಭವಾಗಿದೆ. ಸ್ಕೇರ್‌ಸಿಟಿ ಎಂದು ಹೇಳುತ್ತಾರೆ, ಇಂಥಾ ಸಂದರ್ಭದಲ್ಲಿಯೂ ಕೂಡ ಆಗಬೇಕಾಗಿರತಕ್ಕ ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಕೆಲವು ಕೆರೆಗಳು ಮುಂಜೂರಾಗಿ ಎರಡು ವರ್ಷಗಳಾಗಿದ್ದರೂ ಕೂಡ ಇನ್ನೂ ಅವುಗಳ ಕೆಲಸ ಆರಂಭವಾಗಿಲ್ಲ. ಒಂದು ಕೆರೆಯ ಎಸ್ಟಿಮೇಟ್ ಆಗಬೇಕಾದರೇ ವರ್ಷಾನುಗಟ್ಟಲೇ ಆಗುತ್ತದೆ. ಅದನ್ನು ಪರಿಶೀಲಿಸಿ ಕಟ್ಟೆಯನ್ನು ಕಟ್ಟುವುದಕ್ಕೆ 8-10 ವರ್ಷಗಳು, ಆಮೇಲೆ ಅದರ ಮುಖಾಂತರ ಜಮೀನಿಗೆ ನೀರನ್ನು ಒದಗಿಸಿ ಉತ್ಪತ್ತಿ ಆಗುವುದಕ್ಕೆ ಎಷ್ಟೋ ವರ್ಷಗಳಾಗುತ್ತವೆ. ಹೀಗಾದರೆ ಕ್ಷಾಮನಿವಾರಣೆಯಾಗುವುದಿಲ್ಲ. ಆದ್ದರಿಂದ ಈಗ ಸರ್ಕಾರದವರು ನಮ್ಮ ಪ್ರಾಂತದಲ್ಲಿ ಯಾವ ಯಾವ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೋ ಅವುಗಳನ್ನು ಆದಷ್ಟು ಜಾಗ್ರತೆಯಾಗಿ ಕಾರ್ಯಗತ ಮಾಡಬೇಕೆಂದು ಸರ್ಕಾರದವರನ್ನು ನಾನು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

ಇನ್ನು ಬಾವಿತೋಡಿಸುವುದಕ್ಕಾಗಿ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ವಿಷಯದಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯ ವಿಷಯವನ್ನು ಹೇಳಬೇಕಾದರೆ ಅಲ್ಲಿಗೆ ಈಗಾಗಲೇ ಮುಂಜೂರಾಗಿ ಕೆಲಸ ನಡೆಯತಕ್ಕ ಹಳೆಯ ಬಾವಿಗಳನ್ನು ಪೂರ್ತಿ ಮಾಡಬೇಕಾದರೆ 4½ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹೀಗಿರುವಾಗ ಹಳೆಯಬಾವಿಗಳನ್ನು ಪೂರ್ತಿಮಾಡುವುದಕ್ಕೆ 1½ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಹಳೆಯ ಬಾವಿಗಳನ್ನು ಪೂರ್ತಿ ಮಾಡುವುದಕ್ಕೋಸ್ಕರ ಜನಗಳಿಂದ ಬೇಡಿಕೆಗಳು ಬಂದರೂ ಕೂಡ ದುಡ್ಡು ಇಲ್ಲ, ಕೊಡುವುದಿಲ್ಲ ಎಂದು ಹೇಳುತ್ತಾರೆ. ಬಳ್ಳಾರಿ ಜಿಲ್ಲೆಯು ಪೂರ್ವದಿಂದಲೂ ಬರಗಾಲ ಜಿಲ್ಲೆ ಎಂದು ತಿಳಿದಿದ್ದರೂ ಕೂಡ ಅಲ್ಲಿಗೆ ಹಳೆಯ ಬಾವಿಗಳನ್ನು ಪೂರ್ತಿ ಮಾಡುವುದಕ್ಕೆ ಕೇವಲ 1½ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಮತ್ತು ಈ ವರ್ಷ ಹೊಸ ಬಾವಿಗಳಿಗೆ ಒದಗಿಸಿರತಕ್ಕ ಹಣವೂ ಸಹ ಬಹಳ ಕಡಿಮೆ ಇದೆ. ಇವೊತ್ತು ದೇಶದಲ್ಲಿ ಬರಗಾಲ ಪರಿಸ್ಥಿತಿ ಒದಗಿದ್ದರೂ ಕೂಡ ಸರ್ಕಾರ ಬೇರೆ ಕೆಲಸಗಳಿಗೆ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ಈಗ ಉದಾಹರಣೆ ಹೇಳಬೇಕಾಗಿದ್ದರೆ ರಾಜಭವನವನ್ನು ಕಟ್ಟುವುದಕ್ಕೆ 20 ಲಕ್ಷ ರೂಪಾಯಿಗಳನ್ನ ವೆಚ್ಚಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ದೇಶದಲ್ಲಿ ಉತ್ಪತ್ತಿಯನ್ನು ಜಾಸ್ತಿ ಮಾಡಬೇಕಾದರೆ ಏನು ಮಾಡಬೇಕು ಎಂಬುದನ್ನು ಕೈ ಬಿಟ್ಟು ಕೆಲಸಕ್ಕೆ ಬಾರದೆ ಇರತಕ್ಕ ಯೋಜನೆಗಳನ್ನು ಹಾಕೊಂಡಿದ್ದಾರೆ. ದೇಶದಲ್ಲಿ ಅಭಾವ ಪರಿಸ್ಥಿತಿ ಇರುವಾಗ ಲಗ್ಜುರಿ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದು ಸರಿಯಲ್ಲ. ಅಂಥ ಯೋಜನೆಗಳನ್ನು ಕೈ ಬಿಟ್ಟು ಪ್ರಜೆಗಳಿಗೆ ಅನುಕೂಲವಾಗತಕ್ಕಂಥ ಕೆಲಸಗಳಿಗೆ ಹೆಚ್ಚು ಹೆಚ್ಚು ಹಣವನ್ನು ವೆಚ್ಚಮಾಡಬೇಕು.

ಇನ್ನು ಇತರೆ ನೀರಾವರಿ ಯೋಜನೆಯ ವಿಷಯವನ್ನು ಹೇಳಬೇಕಾಗಿದ್ದರೆ ತುಂಗಭದ್ರಾ ಅಣೆಕಟ್ಟಿನ ಕೆಳಗೆ ಅನೇಕ ಎಕರೆ ಭೂಮಿ ಸಾಗಾಗಬೇಕಾಗಿದೆ. ಅಲ್ಲಿರತಕ್ಕ 60 ಸಾವಿರ ಎಕರೆ ಡ್ರೈ ಕಂ ವೆಟ್‌ಲ್ಯಾಂಡಿನಲ್ಲಿ ಸುಮಾರು 10 ಸಾವಿರ ಎಕರೆ ಡ್ರೈ ಕಂ ವೆಟ್‌ಲ್ಯಾಂಡ್ ಡೆವಲಪ್ ಆಗಿಲ್ಲ. ಅಲ್ಲಿ ನೀರಿನ ಸೌಕರ್ಯ ಇದ್ದರೂ ಕೂಡ ಆ ಜಮೀನಿಗೆ ಸರಿಯಾಗಿ ನೀರು ದೊರಕುತ್ತಾ ಇಲ್ಲ. ಆ ಜಮೀನನ್ನು ಲೆವೆಲ್ ಮಾಡುವುದಕ್ಕೆ ಸರ್ಕಾರದವರು ಸಾಲವನ್ನು ಕೊಡುತ್ತಿಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಆ ಕಡೆ ಗಮನವನ್ನು ಕೊಡುತ್ತಿಲ್ಲ. ಬೇಕಾದಷ್ಟು ನೀರು ಇದ್ದು, ಜಮೀನು ಇದ್ದು, ಅದನ್ನು ಸರಿಯಾಗಿ ಉಪಯೋಗಮಾಡದೇ ಇದ್ದರೆ ದೇಶಕ್ಕೆ ಸರಿಯಾಗಿ ಉತ್ಪತ್ತಿ ಬರುವುದಿಲ್ಲ. ನೀರಿನ ತೆರಿಗೆ ಸರ್ಕಾರಕ್ಕೆ ಬರುತ್ತಿಲ್ಲ. ದೇಶದ ಉತ್ಪತ್ತಿ ಕಡಿಮೆ ಯಾಗುತ್ತದೆ. ಹೀಗೆ ಅನೇಕ ಯೋಜನೆಗಳು ಆರಂಭವಾಗುತ್ತವೆ ಆದರೆ ಅದರಿಂದ ಜನಗಳಿಗೂ ಪ್ರಯೋಜನವಾಗುವ ಹಾಗಿಲ್ಲ. ಸರ್ಕಾರಕ್ಕೆ ಪ್ರತಿಫಲ ಬರುವ ಹಾಗಿಲ್ಲ. ಈ ರೀತಿ ಆಗಿದೆ. ಸರ್ಕಾರಕ್ಕೆ ಯಾವುದೋ ರೊಕ್ಕ ಹೇಗೋ ಬಂತು ಆ ಹಣದಲ್ಲಿ ಡ್ಯಾಮು ಕಟ್ಟಿದರು. ಆ ಡ್ಯಾಮಿನಿಂದ ಜನಗಳು ನೀರನ್ನು ಉಪಯೋಗಿಸಿಕೊಂಡು ಬೆಳೆಯನ್ನು ಬೆಳೆದರೆ ಜನಗಳಿಗೂ ಪ್ರಯೋಜನವಾಗುತ್ತದೆ. ದೇಶಕ್ಕೂ ಉತ್ಪತ್ತಿ

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಬರುತ್ತದೆ ಆ ರೀತಿ ಮಾಡುವುದಾದರೆ ಸ್ಕೇರ್ಸಿಟಿಯೂ ಕಡಿಮೆಯಾಗುತ್ತದೆ. ಅದು ಉಪಯೋಗ ವಾಗುವಂತೆ ಮಾಡಲು ಸರ್ಕಾರದವರು ಸಹಾಯ ಮಾಡದಿದ್ದರೆ, ಜನಗಳಿಗೂ ಪ್ರಯೋಜನವಿಲ್ಲ, ಸರ್ಕಾರಕ್ಕೂ ಪ್ರಯೋಜನವಿಲ್ಲ. ಈ ರೀತಿ ಜನಗಳಿಗೂ ಪ್ರಯೋಜನವಾಗದೆ, ಸರ್ಕಾರಕ್ಕೂ ಪ್ರತಿಫಲ ಬಾರದೆ ಇರತಕ್ಕ ಯೋಜನೆಗಳನ್ನು ಮಾಡಿದರೆ ಸಮೃದ್ಧಿಯಾಗುವುದಿಲ್ಲ ಎಂದು ನನಗೆ ಅನಿಸುತ್ತದೆ.

ಆದಕಾರಣ ಇದರ ಮೇಲೆ ನಿಗಾ ಹಾಕಬೇಕೆಂದು ಒತ್ತಾಯಮಾಡಿ ಕೇಳುತ್ತೇನೆ. ರಾಯಚೂರು ಕಡೆ ಆರು ಲಕ್ಷ ಎಕರೆ ಭೂಮಿಯನ್ನು ಅಭಿವೃದ್ಧಿ ಪಡಿಸಬಹುದು. ಅದರಲ್ಲಿ ಒಂದೂವರೆ ಲಕ್ಷ ಎಕರೆ ಕೂಡ ಅಭಿವೃದ್ಧಿಯಾಗಿಲ್ಲ. ಹೀಗಾದರೆ ಅಭಾವ ಪರಿಸ್ಥಿತಿ ಕಡಮೆಯಾಗುವುದಾದರೂ ಹೇಗೆ? ಅದಷ್ಟು ಮಟ್ಟಿಗೆ ಸ್ವಲ್ಪ ಮುತುವರ್ಜಿ ವಹಿಸಿ ಈಗಲಾದರೂ ಜನರಿಗೆ ಭೂಮಿಯನ್ನು ಲೆವಲ್ ಮಾಡುವುದಕ್ಕೆ ಸಾಲ ಕೊಟ್ಟರೆ ಬಳ್ಳಾರಿ ಮತ್ತು ರಾಯಚೂರು ಕಡೆ ಕೆಲಸವಿಲ್ಲದ ಕಾಲದಲ್ಲಿ ಕೆಲಸ ಮಾಡಿ ಬದುಕಿಕೊಳ್ಳುತ್ತಾರೆ. ಮುಂದೆ ನೀರು ತೆಗೆದುಕೊಂಡು ಬೆಳೆದು ಅಭಾವ ಪರಿಸ್ಥಿತಿಯನ್ನು ತಡೆಗಟ್ಟಲು ಸಹಾಯವಾಗುತ್ತದೆ. ಇಂಥ ಕಾರ್ಯವನ್ನು ಈಗಲಾದರೂ ತೆಗೆದುಕೊಳ್ಳಬೇಕೆಂದು ಸರ್ಕಾರದ ಮುಂದೆ ಹೇಳಬಯಸುತ್ತೇನೆ.

4–00 P.M.

ಕೆಲಸಗಳನ್ನು ಒದಗಿಸುವಪರಿಸ್ಥಿತಿಯಲ್ಲಿ ಅನೇಕ ಕಡೆ ಕೆಲಸಗಳನ್ನು ಒದಗಿಸುವುದಕ್ಕೆ ಕೆರೆಗಳನ್ನು ಕಟ್ಟುವುದಕ್ಕೆ ಅಸ್ಪದವಿರುವುದಿಲ್ಲವೋ ಅಂಥ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ನಮ್ಮ ಕಡೆ ಮಾಡಿರುವ ರಸ್ತೆಗಳಲ್ಲಿ ಕರೀ ಮಣ್ಣಿನಲ್ಲಿ ಮಾಡಿರುವ ರಸ್ತೆಗಳು. ಅದಕ್ಕೆ ಮೆಟಲ್ ಕಲೆಕ್ಷನ್ ಮಾಡಿದರೆ ಜನರಿಗೆ ಕೆಲಸ ದೊರೆಯುತ್ತದೆ ಮತ್ತು ಹಳ್ಳಿಗಳಿಗೆ ಸಾರಿಗೆ ಸಂಪರ್ಕದ ಅನುಕೂಲವನ್ನೂ ಮಾಡಿದಂತಾಗುತ್ತದೆ. ಅದ್ದರಿಂದ ಇಂಥ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತೇನೆ. ಇಲ್ಲದೆ ಇದ್ದರೆ ಅಲ್ಲಿಯ ಜನಗಳಿಗೆ ಕೆಲಸವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಕೆಲಸವನ್ನು ಕೊಡದ ಹೊರತು ಜನರಿಗೆ ಆಹಾರವನ್ನು ಒದಗಿಸಿ ಆಹಾರಾಭಾವವನ್ನು ನೀಗಲು ಸಾಧ್ಯವಿಲ್ಲ.

ಅನೇಕ ಕಾರ್ಯಕ್ರಮಗಳನ್ನು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಆ ಸಲಹೆಗಳನ್ನು ತೆಗೆದುಕೊಂಡು ಅಭಾವ ಪರಿಸ್ಥಿತಿಯನ್ನು ನೀಗುವ ದಾರಿ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಸಭಾಪತಿಗಳೇ, ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿಯು ನಮ್ಮ ಮೈಸೂರು ರಾಜ್ಯದಲ್ಲಿ ಅಷ್ಟೇ ಅಲ್ಲ, ಭಾರತದ ಅನೇಕ ರಾಜ್ಯದಲ್ಲಿ ಉದ್ಭವಿಸಿದ ಈ ಪರಿಸ್ಥಿತಿಯನ್ನು ಸುಧಾರಿಸಲು ನಮ್ಮ ರಾಷ್ಟ್ರದಲ್ಲಿ 44 ಕೋಟಿ ಜನರಿಗೆ ಆಹಾರವನ್ನು ಒದಗಿಸುವ ಪ್ರಶ್ನೆ ಕೇಂದ್ರ ಸರ್ಕಾರಕ್ಕೆ ಇದ್ದರೆ ಮೈಸೂರು ರಾಜ್ಯದಲ್ಲಿರುವ ಎರಡೂವರೆ ಕೋಟಿ ಜನಾಂಗಕ್ಕೆ ಆಹಾರ ಪದಾರ್ಥಗಳನ್ನು ಒದಗಿಸತಕ್ಕ ಮತ್ತು ಆಹಾರ ಪರಿಸ್ಥಿತಿಯನ್ನು ಒಳ್ಳೆಯ ರೀತಿಯಲ್ಲಿ ಸುಧಾರಿಸತಕ್ಕ ಒಂದು ಕರ್ತವ್ಯ ಕೇವಲ ಸರ್ಕಾರದ ಮೇಲೆ ಅಷ್ಟೇ ಅಲ್ಲ ಜನತೆಯ ಮೇಲೂ ಇದೆ ಎಂದು ನಾನು ಕೆಲವೊಂದು ವಿಚಾರಗಳನ್ನು ಸಭೆಯ ಮುಂದೆ ಇಡುತ್ತೇನೆ.

ನಮ್ಮ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ಅನೇಕ ಜಿಲ್ಲೆಗಳಲ್ಲಿ ಅಗಾಗ್ಗೆ ಬರಗಾಲ ಮತ್ತು ಅಭಾವ ಪರಿಸ್ಥಿತಿ ಬರುವುದುಂಟು. ನಮ್ಮ ರಾಜ್ಯದಲ್ಲಿ ರಾಯಚೂರು, ಬಿಜಾಪುರ ಬಳ್ಳಾರಿ ಮತ್ತು ಅಂಧ್ರ ಪ್ರದೇಶದಲ್ಲಿನ ರಾಯಲಸೀಮಾ ಮುಂತಾದ ಕೆಲವೊಂದು ಭಾಗಗಳು, ಅದೇ ರೀತಿಯಾಗಿ ಹಳೇ ಮೈಸೂರಿನಲ್ಲಿ ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಭಾಗಗಳು ಇವುಗಳನ್ನು ನಾವು ನೋಡಿದ್ದೇ ಆದರೆ ಹಲವಾರು ವರ್ಷಗಳು ಡ್ರೈ ಏರಿಯಾ, ಫ್ಯಾಮಿನ್ ಬೆಲ್ಟ್ ಏರಿಯಾ ಎಂದು ಹೇಳುವ ಈ ಭಾಗಗಳಲ್ಲಿ ಅನೇಕ ಸಲ ಬರಗಾಲದ ಭಯಾನಕ ಭೀತಿಯನ್ನು ಅಗಾಗ್ಗೆ ಜನತೆ ಎದುರಿಸುತ್ತಿದೆ. ಈಗಲೂ ಕೂಡ ನಾವು ವಿಚಾರಮಾಡಿ ನೋಡಿದರೆ ಕೇವಲ ಮಳೆ ಸಕಾಲಕ್ಕೆ ಬೀಳದಿರುವುದರಿಂದ ಮತ್ತು ಆಹಾರ ಧಾನ್ಯಗಳಲ್ಲಿ ಅರ್ಧ ಭಾಗ ಹೋದದ್ದರಿಂದ ನಮಲ್ಲಿ ಆಹಾರ ಪರಿಸ್ಥಿತಿಯ ಸಂಬಂಧವಾಗಿ ಸ್ವಲ್ಪ ತೊಂದರೆಯಾಗಿ ಜನರಲ್ಲಿ ಹಾಹಾಕಾರ ಎದ್ದಿದೆ ಎನ್ನುವುದು ಸರ್ವ ಸದಸ್ಯರಿಗೂ ಕೂಡ, ಗೊತ್ತಿದೆ. ಅವರಿಗೆಲ್ಲ ತಾರು, ಪತ್ರಗಳ ಮುಖೇನ ವಿಷಯ ತಿಳಿದಿರುತ್ತದೆ. ಅದೇ ರೀತಿಯಾಗಿ ನನಗೂ ತಾರುಗಳು ಬಂದಿವೆ, ಪತ್ರಗಳು ಬಂದಿವೆ. ಅದನ್ನು ಪರಿಶೀಲನೆಮಾಡಿ ನಾನು ಹೇಳುವುದು ಇಷ್ಟು. ಈ ವಿಚಾರದಲ್ಲಿ ಸರ್ಕಾರದ ಹೊಣೆ ಅಥವಾ ಸರ್ಕಾರದ ಜವಾಬ್ದಾರಿ ಅಷ್ಟೇ ಸದಸ್ಯರಾದ ನಾವು ಮತ್ತು ಜನತೆಯ ಕರ್ತವ್ಯವು ಇದರಲ್ಲಿದೆ ಎಂದು ಹೇಳುತ್ತೇನೆ. ಈ

ಸಮಯದಲ್ಲಿ ನಾನು ಜನತೆಯ ಒಬ್ಬ ಪ್ರತಿನಿಧಿಯಾಗಿ ಹೇಳುತ್ತೇನೆ, ನಾವು ಮಾಡತಕ್ಕ ಕರ್ತವ್ಯಗಳನ್ನು ನಾವು ಮೊದಲು ಮಾಡತಕ್ಕದ್ದು ಮುಖ್ಯ. ಈಗ ಎಷ್ಟೋ ಜನ ವ್ಯಾಪಾರಸ್ಥರು, ಈ ಸಮಯವನ್ನು ನೋಡಿ ಆಹಾರ ವಸ್ತುಗಳನ್ನು ದಾಸ್ತಾನು ಮಾಡಿ ಅದಷ್ಟೂ ಕಳ್ಳ ಪೇಟೆಯಲ್ಲಿ ಹೆಚ್ಚು ಬೆಲೆಗೆ ಮಾರತಕ್ಕ ಮನೋಭಾವವನ್ನು ತೆಗೆದುಹಾಕುವುದು. ಅವರು ಮಾಡುವ ಧಾನ್ಯ ಸಂಗ್ರಹವನ್ನು ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆಯಲ್ಲಿ ಅದಷ್ಟು ಮಟ್ಟಿಗೂ ಮಾರಾಟ ಮಾಡತಕ್ಕ ಭಾವನೆ ಬರಬೇಕು. ಇದೂ ಅಲ್ಲದೆ ಹಳ್ಳಿಯಲ್ಲಿರತಕ್ಕ ಅನೇಕ ಜನ ಒಕ್ಕಲಿಗರಲ್ಲಿ ಕೆಲವು ಜನರಲ್ಲಿ ಕಾಳಿನ ಸಂಗ್ರಹವಿದೆ. ಆ ಧಾನ್ಯದ ಸಂಗ್ರಹವನ್ನು ಅಲ್ಲಿನ ಜನಗಳಿಗೆ ಅವರು ಕೊಡುವ ಮನಸ್ಸು ಮಾಡಬೇಕು. ಅವರಲ್ಲಿರುವ ಸಂಗ್ರಹವನ್ನು ಹಳ್ಳಿಯ ಜನಗಳಿಗೆ ಸಕಾಲಕ್ಕೆ ಕೆಲವೊಂದು ಉದ್ಯೋಗಗಳನ್ನು ಒದಗಿಸಿ ಕಾಳಿನ ರೂಪದಲ್ಲಿ ಜನರಿಗೆ ಸಹಾಯ ಮಾಡತಕ್ಕ ಮನೋವೃತ್ತಿ, ಮನೋಭಾವನೆ ಬರಲೇ ಬೇಕು.

ಇನ್ನೊಂದು ವಿಷಯವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹಿಂದಕ್ಕೆ ಹೈದರಾಬಾದು ಕರ್ಣಾಟಕದಲ್ಲಿ ಕಂಟ್ರೋಲ್ ಜಾರಿಯಲ್ಲಿದ್ದಾಗ ಗ್ರೇನ್ ಬ್ಯಾಂಕ್ಸ್ ಎಂದು ಪ್ರತಿ ಹಳ್ಳಿಯಲ್ಲಿಯೂ ಮಾಡಿದ್ದರು. ಆ ಕಾಲಕ್ಕೆ ಒಂದು ಮಣ ಧಾನ್ಯವನ್ನು ವಸೂಲು ಮಾಡಿದರೆ ಅದರಲ್ಲೆ ಐದು ಸೇರು ಧಾನ್ಯವನ್ನು ಸಂಗ್ರಹ ಮಾಡತಕ್ಕ ಪದ್ಧತಿ ಇತ್ತು. ಇಂತಹ ಸಾವಿರಾರು ಬ್ಯಾಂಕುಗಳು ಪ್ರತಿಯೊಂದು ಊರಿನಲ್ಲಿಯೂ ಇದ್ದುವು. ಅಂಥ ಬ್ಯಾಂಕುಗಳಲ್ಲಿದ್ದ ಆಹಾರ ಧಾನ್ಯಗಳನ್ನು ತಿಂದು ಹಾಕಿದವರು ಕೂಡ ಇದ್ದಾರೆ. ಇಂಥ ಪದ್ಧತಿಯನ್ನು ಇಡೀ ಮೈಸೂರು ರಾಜ್ಯಕ್ಕೆ ಅನ್ವಯಿಸಿದರೆ ಆಹಾರಾಭಾವ ಇರುವ ಇಂಥ ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಆ ಕಾಳಿನಿಂದ ಆಯಾ ಗ್ರಾಮದಲ್ಲಿ ಸ್ವಾವಲಂಬನೆಯಾಗಿ ಇಂಥ ದುರ್ಭಿಕ್ಷ ಕಾಲಗಳಲ್ಲಿ ಅದರ ಅನುಕೂಲತೆ ಜನತೆಗೆ ದೊರೆಯುತ್ತದೆ ಎಂದು ನನ್ನ ಸೂಚನೆ ಇದೆ.

ಇದೇ ಪ್ರಕಾರವಾಗಿ ಸರ್ಕಾರದವರು ಅಭಾವ ಪರಿಸ್ಥಿತಿಯನ್ನು ನೀಗಿಸಲು ತೆಗೆದುಕೊಳ್ಳುವ ರಸ್ತೆ ಕೆಲಸ ಇಂಥ ಅನೇಕ ಕಾರ್ಯಗಳಿಗೆ ನಮ್ಮ ಸಹಕಾರ ಮತ್ತು ಸಹಾನುಭೂತಿಯನ್ನು ತೋರಿಸಿ ಅವರು ಮಾಡುವ ಕಾರ್ಯಗಳಲ್ಲಿ ಭಾಗಿಗಳಾಗಬೇಕು. ಈಗ ಸರ್ಕಾರದವರು ಮಾಡತಕ್ಕ ಕಾರ್ಯಗಳಲ್ಲಿ ಕೂಡ ನಾನು ಒಂದೆರಡು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ. ಮೊದಲನೆಯದಾಗಿ ಈ ಸಮಯದಲ್ಲಿ ಅತಿ ತೀವ್ರವಾಗಿ ಯಾವ ಯಾವ ಭಾಗದಲ್ಲಿ ಅಭಾವ ಪರಿಸ್ಥಿತಿ ಇದೆಯೋ ಆ ಭಾಗಗಳಲ್ಲಿ ಕಾಳು ಕಡ್ಡಿ ಜೋಳ ಇಂಥ ಆಹಾರ ವಸ್ತುಗಳು ಒಕ್ಕಲಿಗರಲ್ಲಿ ಸಾಕಷ್ಟು ಇಲ್ಲದೆ ಎರಡು ಹೊತ್ತೂ ಉಪವಾಸ ಮಾಡುತ್ತಿದ್ದಾರೆ. ಅಂಥ ಪರಿಸ್ಥಿತಿಯಲ್ಲಿ ರಸ್ತೆಗಳು, ಕೆರೆಗಳು, ಬಾವಿಗಳು ಈ ಕೆಲಸಗಳನ್ನು ಅತಿ ತೀವ್ರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ಅಂಥ ಸ್ಥಳಗಳಲ್ಲಿ ಸುಲಭ ದರದ ಅಂಗಡಿಗಳನ್ನು ಏರ್ಪಾಡು ಮಾಡಿ ಆಹಾರ ಧಾನ್ಯಗಳ ಸರಬರಾಜನ್ನು ಸರಿಯಾಗಿ ಮಾಡಿ ಜನರಿಗೆ ಕಡಮೆ ದರದಲ್ಲಿ ಸಿಕ್ಕುವಂತೆ ವ್ಯವಸ್ಥೆ ಮಾಡತಕ್ಕದ್ದು. ಈ ಎರಡು ಕಾರ್ಯಗಳನ್ನು ತೆಗೆದುಕೊಂಡರೆ ಮಾತ್ರ ಈ ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿಯನ್ನು ಸುಧಾರಿಸಬಹುದು ಇಲ್ಲದೆ ಇದ್ದರೆ ಬಗೆಹರಿಸುವುದಕ್ಕಾಗುವುದಿಲ್ಲ.

ಕೆಲವೊಂದು ಭಾಗಗಳಲ್ಲಿ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ನೀರಾವರಿಯಿಂದ ಎಷ್ಟೋ ಬೆಳೆ ಬರತಕ್ಕ ಪ್ರಸಂಗವಿರುವುದರಿಂದ ಅಂಥಲ್ಲಿ ಅದಷ್ಟೂ ಹೆಚ್ಚು ಹೆಚ್ಚು ಹಣವನ್ನು ಸರ್ಕಾರದವರು ಒದಗಿಸಿಕೊಟ್ಟು, ವ್ಯವಸಾಯ ಇಲಾಖೆಯಿಂದ ಒಳ್ಳೆಯ ಗೊಬ್ಬರ, ಉತ್ತಮ ಬೀಜ ಇವುಗಳನ್ನೆಲ್ಲ ಕೊಟ್ಟು ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಗಮನ ಕೊಡಬೇಕು. ಈ ಪ್ರಶ್ನೆಯನ್ನು ಬಿಡಿಸಬೇಕಾಗಿದ್ದರೆ ಒಕ್ಕಲಿಗನಿಗೆ ಸಾಕಷ್ಟು ಸಹಾಯ ದೊರೆಯಲೇ ಬೇಕು.

ಈ ದಿವಸ ಇಂತಹ ಒಂದು ಭಾಗಕ್ಕೆ ಹೆಚ್ಚಿನ ಸಹಾಯಕೊಟ್ಟು ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಎಕರೆಗೆ ಒಂದು ಪಲ್ಲ ಉತ್ಪತ್ತಿ ಬರುವುದಕ್ಕೆ ಬದಲು ಇಪ್ಪತ್ತು ಪಲ್ಲ ಬರುವಂತೆ ಒಕ್ಕಲಿಗೆರಿಗೆ ಸಹಾಯಕೊಟ್ಟು ಪರಿಹಾರ ಮಾಡುವ ಒಂದು ಯೋಜನೆಯನ್ನು ಸರಕಾರ ಕೈಕೊಳ್ಳಬೇಕು. ಈ ರೀತಿ ಅನುಕೂಲ ಮಾಡುವ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಒಳ್ಳೆಯದು. ನಾವು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದೇವೆ ಎಂದು ಪ್ರತಿಯೊಂದು ಜಿಲ್ಲೆಯಿಂದಲೂ, ಪ್ರತಿಯೊಂದು ಭಾಗದಿಂದಲೂ ಕೂಗು ಬರುತ್ತಿದೆ. ಇಂತಹ ವಿಷಯವನ್ನು ಕೂಲಂಕಷವಾಗಿ ವಿಚಾರವಿನಿಮಯ ಮಾಡಬೇಕಾದರೆ ಕೇವಲ ಮಾತಿನಿಂದ ಸಾಧ್ಯವಿಲ್ಲ. ಕೃತಿಯಿಂದ ಮಾಡಿ ಅನುಷ್ಠಾನಕ್ಕೆ ತರುವ ಕೆಲಸ ಮಾಡಬೇಕು. ಪ್ರಕೃತಿ ನಿಯಮ ಈ ವಿಷಯದಲ್ಲಿ ಬದಲಾವಣೆಯಾಗದೆ ಸರಕಾರ ಅಥವಾ ನಾವು ಏನೂ ಮಾಡುವಹಾಗಿಲ್ಲ. ಆದರೂ ನಾವು ಮಾಡುವ ಸರ್ವಪ್ರಯತ್ನಗಳನ್ನೂ ಮಾಡಲೇಬೇಕು. ನಮ್ಮಲ್ಲಿ ಒಂದು ಭಾವನೆ ಬರಬೇಕು. ಈಗ್ಯೆ ಕೆಲವು ದಿನಗಳ ಹಿಂದೆ ಪ್ರಧಾನಿಗಳಾದ ಶ್ರೀಮಾನ್ ಶಾಸ್ತ್ರಿಯವರು ಒಂದು ಮಾತು ಹೇಳಿದರು. ಕೊನೆಯ ಪಕ್ಷ ಒಂದ

(ಶ್ರೀ ಎ. ಶರಣಪ್ಪ)

ವಾರದಲ್ಲಿ ಒಂದು ದಿವಸವಾದರೂ ನಾವು ಹಳ್ಳಿಯಲ್ಲಿ ವಾಸಮಾಡಿ ಗ್ರಾಮಾಂತರದ ಜನರೊಡನೆ ಬೆರೆತು ಅವರ ಕಷ್ಟಸುಖಗಳನ್ನು ವಿಚಾರ ಮಾಡಿನೋಡಬೇಕು ಎಂದು ಹೇಳಿದರು. ಈ ಭಾವನೆ ನಮ್ಮಲ್ಲಿ ಬೆಳೆಯಬೇಕು. ಆ ರೀತಿ ನಾವೆಲ್ಲರೂ ಮಾಡಿದ್ದೇ ಅದರೆ ಅತಿ ಕ್ಷಿಪ್ರವಾಗಿ ನಮ್ಮ ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯ. ಈಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಂದೇಶವನ್ನು ನೀಡಿದ್ದಾರೆ. ಆದರ ಶಕ್ತಿ ಸಾಮರ್ಥ್ಯಗಳಿಂದ ನಮ್ಮ ರಾಜ್ಯಕ್ಕೆ ಆಹಾರಧಾನ್ಯವನ್ನು ಪಡೆದಿದ್ದಾರೆ ಕೇಂದ್ರದಿಂದ. ಇದೇ ರೀತಿ ಅವರು ಇನ್ನೂ ಹೆಚ್ಚು ಪ್ರಯತ್ನಮಾಡಿ ಹೆಚ್ಚು ಪಡೆಯಬೇಕು. ಇದೇ ರೀತಿ ಶ್ರೀಮಾನ್ ಕೃಷ್ಣಪ್ಪನವರೂ ಮಾಡಬೇಕು. ಪಾಂಡವರಿಗೆ ಹೇಗೆ ವನವಾಸ ಬಂದಿತ್ತೋ ಅದೇ ರೀತಿ ನಮ್ಮ ಮೈಸೂರು ದೇಶದ ಜನತೆಗೂ ವನವಾಸ ಬಂದಿದೆ. ಪಾಂಡವರಿಗೆ ಕೃಷ್ಣಪರಮಾತ್ಮ ಸಾರಥಿಯಾಗಿ ನಿಂತು ಹೇಗೆ ಅವರಿಗೆ ಬಂದಿದ್ದ ಬಿಕ್ಕಟ್ಟನ್ನು ಪರಿಹಾರ ಮಾಡಿದನೋ ಅದೇರೀತಿ ನಮ್ಮ ಮುಖ್ಯ ಮಂತಿಗಳು ಜನತೆಗೆ ಬಂದಿರುವ ಕಷ್ಟವನ್ನು ನಿವಾರಿಸಲು ಜನತೆಯ ಸಾರಥಿಯಾಗಬೇಕು. ಇದು ಕೇವಲ ಒಂದು ಹಳ್ಳಿ ಅಥವಾ ಒಂದು ತಾಲ್ಲೂಕು ಅಥವಾ ಜಿಲ್ಲೆಯ ಪ್ರಶ್ನೆಯಲ್ಲ. ಈ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ಎಲ್ಲ ಕಾರ್ಯಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ, ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೆ, ರಾಜ್ಯದ ಬಹು ಭಾಗದಲ್ಲಿ ಅಭಾವ ಹಾಗೂ ಕ್ಷಾಮ ಪರಿಸ್ಥಿತಿ ತಲೆದೋರಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು, ತಿನ್ನುವ ಆಹಾರ ಮತ್ತು ಮಾಡುವುದಕ್ಕೆ ಉದ್ಯೋಗವಿಲ್ಲದ ಪರಿಸ್ಥಿತಿ ತೀರಾ ಕಳವಳಕರವಾಗಿರುವ ವಿಷಯದ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈಗತಾನೇ ಮಾತನಾಡಿದ ಸದಸ್ಯರು ಶ್ರೀಮಾನ್ ಕೃಷ್ಣಪ್ಪನವರು ಮಹಾಭಾರತದ ಕೃಷ್ಣನಂತೆ ಈ ರಾಜ್ಯದ ವನವಾಸವನ್ನನುಭವಿಸುವುದಕ್ಕೆ ಹೋಗುತ್ತಿರುವ ಎರಡುಕೋಟಿ ಮೂವತ್ತೈದು ಲಕ್ಷ ಜನರನ್ನು ಕಾಪಾಡಬೇಕೆಂದು ಹೇಳುತ್ತಿದ್ದರು. ಇದು ಬಹಳ ದೊಡ್ಡ ಪ್ರಶಂಸೆ. ಮಹಾಭಾರತದ ಕೃಷ್ಣನ ಕೈಲಿ ಸುದರ್ಶನವಿತ್ತು, ನಮ್ಮ ಕೃಷ್ಣಪ್ಪನವರ ಕೈಯಲ್ಲಿ ಯಾವ ಸುದರ್ಶನ ಚಕ್ರವಿದೆಯೋ ಗೊತ್ತಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನನಗೆ ಎರಡು ಬೆರಳುಗಳಲ್ಲಿ ಚಕ್ರಗಳಿವೆ. (ನಗು)

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ; ಮಾನ್ಯ ಕೃಷ್ಣಪ್ಪನವರು ಮಳೆಯನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಮಳೆ ಬಂದರೆ ಕಂದಾಯ ಹಾಗೂ ಆಹಾರ ಖಾತೆಯ ಮಂತ್ರಿತನ ತಮಗೇ ಉಳಿಯುತ್ತದೆ, ಮುಂದುವರಿಯುತ್ತದೆ ಎಂದು ಅವರ ಆಶೆ. ಬಾರದೇಯಿದ್ದರೆ ಮಾದಯ್ಯಗೌಡರು ಹೇಳಿದಹಾಗೆ ಜನರು ದಂಗೆ ಏಳಬಹುದು. ಇದಕ್ಕೆ ಶ್ರೀಮಾನ್ ಎಂ. ಆರ್. ಪಾಟೀಲರ ಬೆಂಬಲವೂ ಇದೆ.

ಸ್ವಾಮಿ, ಮಾನ್ಯ ಕಂದಾಯ ಸಚಿವರು ಈ ಪ್ರಸ್ತಾಪವನ್ನು ಸಭೆಯ ಮುಂದೆ ಮಂಡಿಸುತ್ತ ಕರ್ಣಾಟಕ ರಾಜ್ಯದಲ್ಲಿ ಫಲವತ್ತಾದ ಜಮೀನಿದೆ, ತುಂಬಿ ಹರಿಯುವ ನದಿಗಳಿವೆ, ಮೀಸೆ ಹೊತ್ತ ಅನೇಕ ರೈತಕುಲವಿದೆ ಎಂದು ಹೇಳಿ ಅಲ್ಲಿಗೇ ನಿಲ್ಲಿಸಿದರು. ನೀರಾವರಿ ಇಲ್ಲ ಎಂದು ಸೇರಿಸುವುದಕ್ಕೆ ನಾನಿಚ್ಛಿಸುತ್ತೇನೆ. ನಮ್ಮಲ್ಲಿ ದುರದೃಷ್ಟವಶಾತ್ ಇದನ್ನೆಲ್ಲ ಉಪಯೋಗಿಸಿ ಪ್ರಕೃತಿ ಸಂಪತ್ತನ್ನು ಅಳವಡಿಸಿಕೊಂಡು ದೇಶಕ್ಕೆ ಹಿತವನ್ನು ತರುವಂತಹ ಕಣ್ಣು, ಎದೆಗಾರಿಕೆ, ತಾಳ್ಮೆ, ಮುತ್ಸದ್ದಿತನ ಇವುಗಳೆಲ್ಲ ಇರುವ ಅಧಿಕಾರಿಗಳಿಲ್ಲವಲ್ಲ ಎಂದು ವ್ಯಥೆಪಡುತ್ತೇನೆ. ನಮ್ಮ ದೇಶದಲ್ಲಿ ಎಲ್ಲವೂ ಇದೆ. ಅದರೆ ದುರ್ದೈವವಶಾತ್ ಇದನ್ನೆಲ್ಲ ಒಟ್ಟುಗೂಡಿಸುವ ಕಾರ್ಯ ಈ ಹೊತ್ತು ನಡೆಯುತ್ತಿಲ್ಲವೆಂದು ವ್ಯಥೆಪಡಬೇಕಾಗಿದೆ. ಚೀನಾ ಆಕ್ರಮಣದಿಂದ ತುರ್ತು ಪರಿಸ್ಥಿತಿ ಬಂತು. ಇದನ್ನುಪಯೋಗಿಸಿಕೊಂಡು ಈ ದೇಶದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಏನು ಸಾಧನೆಯನ್ನು ಆಹಾರ ಉತ್ಪತ್ತಿ ಮಾಡುವುದಕ್ಕೆ ಮಾಡಿವೆ ಎನ್ನುವುದನ್ನು ನೋಡಿದರೆ ಒಂದು ಅಂಶವನ್ನು ವಿಷಾದದಿಂದ ಮನಗಾಣುತ್ತೇವೆ. ಈ ತುರ್ತು ಪರಿಸ್ಥಿತಿಯನ್ನು ತುಲಾಭಾರಕ್ಕೆ ಉಪಯೋಗ ಮಾಡಲಾಯಿತು. ಇದೆಲ್ಲ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯ. ಇಂತಹ ದುರಾಡಳಿತದ ಮುಂದೆ ನಾವು ಏನು ಹೇಳಿದರೂ ಬೋರ್ಕಲ್ಲ ಮೇಲೆ ಮಳೆ ಸುರಿದಂತಾಗುತ್ತದೆ. ನಾವು ಹೇಳುವುದು ಮತ್ತು ಇಂದಿನ ದಾರುಣ ಪರಿಸ್ಥಿತಿ ಎಷ್ಟುಮಟ್ಟಿಗೆ ಆಡಳಿತ ನಡೆಸುವವರ ಹೃದಯಕ್ಕೆ ನಾಟುತ್ತದೆ, ಇದು ಎಷ್ಟುಮಟ್ಟಿಗೆ ಸರಕಾರದ ಯಂತ್ರ ಚಲಿಸುವಂತೆ ಮಾಡುತ್ತದೆ, ಎಷ್ಟುಮಟ್ಟಿಗೆ ಸಾವಿಗೆ ತುತ್ತಾಗುವ ಜನರನ್ನು ಸಾವಿನ ದವಡೆಯಿಂದ ತಪ್ಪಿಸುತ್ತದೆ ಎನ್ನುವ ಬಗ್ಗೆ ನನಗೆ ವಿಶ್ವಾಸವಿಲ್ಲ. ಆದರೂ ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಜನರ ಬಗ್ಗೆ ಕಳಕಳಿಯಿಂದ ಏನನ್ನು ವ್ಯಕ್ತಪಡಿಸಬೇಕೋ, ಸಕಾಲದಲ್ಲಿ ಸರಕಾರಕ್ಕೆ ಈ ಬಗ್ಗೆ ಎಚ್ಚರಿಕೆಯನ್ನು ಕೊಡಬೇಕೆಂದು ಕರ್ತವ್ಯ ದೃಷ್ಟಿಯಿಂದ ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಸರಕಾರಕ್ಕೆ ಹೇಳಬೇಕಾಗಿದೆ.

ಸ್ವಾಮಿ, ಬೆಲೆಗಳನ್ನು ಹತೋಟಿಯಲ್ಲಿಡತಕ್ಕ ಕೆಲಸ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದ್ದು ಎಂದು ರಾಜ್ಯ ಸರಕಾರದವರು ಹೇಳುತ್ತಾರೆ. ಭುವನೇಶ್ವರದಲ್ಲಿ, ಆಗತಾನೇ ಕೇಂದ್ರದ ಅರ್ಥಿಕ ಮಂತ್ರಿ ಸ್ಥಾನವನ್ನು ಆಕ್ರಮಿಸಿದ್ದ ಶ್ರೀಮಾನ್ ಟಿ. ಟಿ. ಕೃಷ್ಣಮಾಚಾರ್ಯರು ಬೆಲೆಗಳನ್ನು ಹತೋಟಿಗೆ ತರಬೇಕಾಗುತ್ತದೆ, ನಾವೇ ಆಹಾರ ಧಾನ್ಯಗಳ ವ್ಯಾಪಾರವನ್ನು ವಹಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ಆಮೇಲೆ ಕೇಂದ್ರದ ಆಹಾರ ಮಂತ್ರಿ ಇದು ಸಾಧ್ಯವಿಲ್ಲದ ಮಾತು, ನಾವು ಹಾಗೆಯೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳುತ್ತಾರೆ. ತಮ್ಮ ಗಮನಕ್ಕೆ ಮತ್ತೊಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಭುವನೇಶ್ವರದಲ್ಲಿ ಮಾಡಿದ ಸಮಾಜವಾದಿ ಸಮಾಜದ ನಿರ್ಮಾಣದ ನಿರ್ಣಯವನ್ನು ಕಾರ್ಯಗತ ಮಾಡುವುದಕ್ಕೆ ಒಂದು ಕಾಂಗ್ರೆಸ್‌ನವರನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಕ ಮಾಡಿದರು.

ಈ ಸಬ್ ಕಮಿಟಿಯಲ್ಲಿ ಢೇಬರ್, ಶ್ರೀಮನ್ನಾರಾಯಣ ಮುಂತಾದ ಮುಖಂಡರು ಇದ್ದಾರೆ. ಬೆಲೆಗಳನ್ನು ಹತೋಟಿಗೆ ತರುವುದು ಕೂಡಲೆ ಆಗಬೇಕು ಎಂದು ಅವರು ಸಹ ಸಲಹೆ ಕೊಟ್ಟಿದ್ದಾರೆ. ಆಹಾರ ಧಾನ್ಯದ ಕನಿಷ್ಠ ಬೆಲೆ ನಿಗದಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಆಹಾರ ಧಾನ್ಯದ ಸಾಗಾಣಿಕೆಗೆ ಕೊಡಬೇಕಾಗುವ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಮತ್ತು ಇತರೇ ಖರ್ಚುಗಳ ಬಗ್ಗೆ ಮಾರ್ಜಿನ್ ಇಟ್ಟು ಬಳಕೆದಾರನಿಗೆ ಧಾನ್ಯ ಒದಗಿಸುವಂತೆ ಪ್ರತಿಯೊಬ್ಬ ವ್ಯಾಪಾರಸ್ಥನಿಗೆ ತಿಳಿಸಿ ಅವನು ಆ ರೀತಿ ಮಾರಾಟ ಮಾಡುವುದಕ್ಕೆ ಲೈಸೆನ್ಸ್ ಪಡೆದಿರಬೇಕು. ಗರಿಷ್ಠ ಬೆಲೆ ಅಂದರೆ ಮಾಗ್ಝಿಮಂ ಬೆಲೆಗೆ ಮಾರಾಟವಾಗಬಾರದು ಎಂದು ತಿಳಿಸಬೇಕು. ನಿಗದಿ ಮಾಡಿದ ಬೆಲೆಗೆ ಮಾರಾಟವಾಗುವುದು ಸಾಧ್ಯವಾಗಬೇಕು. ಇದನ್ನು ಸರಕಾರ ಯೋಚನೆ ಮಾಡಿ ಅಗ್ಗ ದರದ ಅಂಗಡಿಗಳನ್ನು ಅಲ್ಲಲ್ಲಿ ಪ್ರಾರಂಭ ಮಾಡಬೇಕಾದುದು ಅಗತ್ಯ. ಸಹಕಾರ ಸಂಘಗಳ ಮೂಲಕ ಈ ಕಾರ್ಯ ನಡೆಯಬೇಕು ಮತ್ತು ಇದಕ್ಕೆ ಕಾಂಗ್ರೆಸ್ ಸಂಸ್ಥೆ ಸಹಾಯ ಮಾಡಬೇಕು ಎಂದು ಹೇಳಿರುವುದನ್ನು ನಾನು ವಿರೋಧಿಸುತ್ತೇನೆ. ಇಂಥ ವಿಷಯದಲ್ಲಿ ಕಾಂಗ್ರೆಸ್ಸಿನವರು ಕೈ ಹಾಕುವುದು ಸೂಕ್ತವಲ್ಲ. ಇಂದು ಕಾಂಗ್ರೆಸ್ ಸಂಸ್ಥೆಯಲ್ಲಿ ದೊಡ್ಡ ದೊಡ್ಡ ಅಧಿಕಾರ ಸ್ಥಾನ ಪಡೆದವರು ಮಂತ್ರಿಗಳಾದವರು ಹೋರ್ಡರ್ಸ್ ಪ್ರಾಫೀಟಿಯರ್ಸ್ ಆಗಿದ್ದವರು ಇದ್ದಾರೆ. ಅವರ ಸಲಹೆ ಏನು ಇದೆ ಎಂಬುದು ನಮಗೆ ಗೊತ್ತಿದೆ. ದೊಡ್ಡ ದೊಡ್ಡ ವ್ಯಾಪಾರಸ್ಥರು ಮುಂಬಯಿ, ದಿಲ್ಲಿ, ಕಲ್ಕತ್ತಾನಲ್ಲಿ ಕುಳಿತುಕೊಂಡು ಮಂತ್ರಿಗಳನ್ನು ಬುಗುರಿ ಆಡಿಸಿದಂತೆ ಆಡಿಸುತ್ತಿರುವುದು ಚನ್ನಾಗಿ ಗೊತ್ತಿದೆ. ಅವರಿಗೆ ಇವರು ಏನೂ ಮಾಡಲಾರರು. ಸಹಕಾರ ಸಂಘಗಳ ಮುಖಾಂತರ ಸಕ್ಕರೆ ಹಂಚಲಾಗುತ್ತಿದೆ. ಒಬ್ಬ ವ್ಯಾಪಾರಸ್ಥ ಎಲ್ಲಿಯೋ ಪ್ರಾಮಾಣಿಕನಾಗಿ ಇರಬಹುದು. ಆದರೆ ಹೆಚ್ಚು ಜನ ವ್ಯಾಪಾರಸ್ಥರು ಲೈಸೆನ್ಸ್ ಪಡೆದು ತಮ್ಮ ಕೋಟಾ ತೆಗೆದುಕೊಂಡು ಬ್ಲ್ಯಾಕ್‌ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಾ ಇಲ್ಲವೇ? ಲಾಭಬಡಕತನ ಎಲ್ಲ ಕಡೆ ಇದೆ. ನಮಗೆ ಸಕ್ಕರೆ ದೊರೆಯದೇ ಇರುವಾಗ್ಗೆ ಸಕ್ಕರೆ ಎಕ್ಸ್‌ಪೋರ್ಟ್ ಮಾಡಿ ಕೋಟ್ಯಾಂತರ ರೂಪಾಯಿ ಲಾಭ ಪಡೆಯುತ್ತಿದ್ದಾರೆ. ಇದನ್ನು ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ವಾಸ್ತವಾಂಶ ಬಹಳ ವಿಚಿತ್ರವಾಗಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಪ್ರತಿವರ್ಷ ಕೊನೆಯ ಆರು ತಿಂಗಳುಗಳಲ್ಲಿ ಅಂದರೆ ಜೂನ್ ಜುಲೈ ಆಗಸ್ಟ್ ಸೆಪ್ಟೆಂಬರ್ ಅಕ್ಟೋಬರ್ ನವೆಂಬರ್ ಡಿಸೆಂಬರ್‌ನಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚಾಗುತ್ತದೆ. ಇದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸುಗ್ಗಿಯ ಕಾಲದಲ್ಲಿ ಬೆಲೆ ಬಿದ್ದು ಹೋಗುತ್ತದೆ. ಸುಗ್ಗಿಯ ಕಾಲದಲ್ಲಿ ಕಡಿಮೆ ಬೆಲೆಗೆ ರೈತರು ಆಹಾರ ಧಾನ್ಯ ಮಾರಾಟ ಮಾಡಬೇಕಾಗುತ್ತದೆ. ಆ ಕಾಲದಲ್ಲಿ ವ್ಯಾಪಾರಸ್ಥರು ಕಡಿಮೆ ಬೆಲೆಗೆ ಕೊಂಡು ದಾಸ್ತಾನು ಮಳಿಗೆಯಲ್ಲಿ ಗೋಡೌನಿನಲ್ಲ ಹೋರ್ಡ್‌ಮಾಡಿ ಇಡುತ್ತಾರೆ. ಆಮೇಲೆ ಬೆಲೆ ಏರಿಸುತ್ತಾ ಡಿಸೆಂಬರ್ ವರೆಗೆ ಹೋಗುತ್ತಾರೆ. ಇದನ್ನು ಎಲ್ಲರೂ ನೋಡಬಹುದು. ಇದನ್ನು ತಡೆಗಟ್ಟುವುದಕ್ಕೆ ಸರಕಾರ ಏನು ಮಾಡುತ್ತಿದ್ದಾರೆ? ಆಹಾರ ಧಾನ್ಯ ಜುಲೈ ತಿಂಗಳಿನಲ್ಲಿ ಗೋಡೌನ್‌ನಲ್ಲಿ ಸೇರಿದ ನಂತರ ಈ ಆಡಳಿತ ಯಂತ್ರದಲ್ಲಿ ಭ್ರಷ್ಟಾಚಾರ ತುಂಬಿದೆ. ಇಂಥ ಸಮಯದಲ್ಲಿ ರೇಶನ್ ವ್ಯವಸ್ಥೆ ಜಾರಿ ಮಾಡಿ ತರುವುದು ಬಹಳ ಕಷ್ಟ. ಆದುದರಿಂದ ಜನರಿಗೆ ಯಾವ ರೀತಿ ಆಹಾರ ಧಾನ್ಯ ಒದಗಿಸಬೇಕು ಎಂಬುದು ಬಹಳ ಪ್ರಾಮುಖ್ಯವಾದುದು. ಸರಕಾರದ ನೀತಿಯಲ್ಲಿ ಬದಲಾವಣೆಯಾಗಬೇಕಾದುದು ಅಗತ್ಯ. ಪದೇಪದೇ ಅಭಾವ ಪರಿಸ್ಥಿತಿ ಉಂಟಾದರೆ ರೈತನ ಉದ್ಧಾರ ಮಾಡುವುದು ಸರಕಾರಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಒಂದು ವಿಷಯದ ಕಡೆ ಈ ಮಾನ್ಯ ಸಭೆಯ ಗಮನ ಎಳೆಯಲು ಇಷ್ಟಪಡುತ್ತೇನೆ. ಸರಕಾರದ ವಕ್ತಾರರೊಬ್ಬರು ಈ ರೀತಿ ಹೇಳಿದ್ದಾರೆ:—

"Unemployment is the main problem facing the rural population, consequent on the agricultural operations being retarded

(ಶ್ರೀ ಎಸ್. ಗೋಪಾಲ ಗೌಡ)

and resulted in loss of purchase power......Majority of the people are hit hard...''

ಎರಡು ಲಕ್ಷ ಪಲ್ಲಾ ಗೋದಿ, ಒಂದು ಲಕ್ಷ ಪಲ್ಲಾ ಅಕ್ಕಿ ವ್ಯಾಗನ್ ಮೂಲಕ ಬೆಂಗಳೂರಿಗೆ ಬರುತ್ತದೆ ಎಂದು ಹೇಳಿದ್ದಾರೆ. ಆದರೆ ಇಂದು ರೈತನ ಕೈಯಲ್ಲಿ ಹಣವಿಲ್ಲ. ಧಾನ್ಯ ಕೊಡುವ ವ್ಯವಸ್ಥೆ ಮಾಡಿದರೂಕೂಡ ಹಣವಿಲ್ಲದ್ದರಿಂದ ರೈತನು ಹೇಗೆ ಕೊಂಡುಕೊಳ್ಳಬೇಕು ? ರೈತ ಧಾನ್ಯ ವ್ಯಾಪಾರ ಮಾಡುವಾಗ್ಗೆ ಯೋಗ್ಯ ಬೆಲೆ ದೊರೆಯುವುದಿಲ್ಲ. ಆತನು ಕೊಂಡುಕೊಳ್ಳಬೇಕು ಎನ್ನುವಾಗ್ಗೆ ಅವನ ಹತ್ತಿರ ಹಣವಿರುವುದಿಲ್ಲ. ಇಂದು ನಮ್ಮ ದೇಶದ 27 ಕೋಟಿ ಜನ ರೈತರ ಆದಾಯ ಮೂರು ಆಣೆಗಿಂತ ಹೆಚ್ಚಿಗೆ ಇಲ್ಲಾ ಎಂದು ಲೋಕ ಸಭೆಯಲ್ಲಿ ರಾಮ ಮನೋಹರ ಲೋಹಿಯಾ ಅವರು ಹೇಳಿಕೆ ಕೊಟ್ಟಿದ್ದಕ್ಕೆ ಅನೇಕರು ಆಶ್ಚರ್ಯ ಪಟ್ಟರು. ಇವತ್ತಿನ ದಿವಸ ರೈತನು ಕೊಂಡು ತಿನ್ನುವ ಪರಿಸ್ಥಿತಿ ಇಲ್ಲ. ಈ ಪರಿಸ್ಥಿತಿಯಲ್ಲಿ ರೈತ ಕಾಲ ಹೇಗೆ ಕಳೆಯಬೇಕು ಎಂಬುದನ್ನು ಈ ಮಾನ್ಯ ಸಭೆಗೆ ಸರಕಾರ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

4.30 P.M.

ಇನ್ನು ಶ್ರೀ ಕೃಷ್ಣಪ್ಪನವರು ಹೇಳಿಬಿಟ್ಟರು. ದೊಡ್ಡದೊಡ್ಡ ಅಣೆಕಟ್ಟುಗಳಿಗೆ ಹಣವನು ಹೆಚ್ಚಾಗಿ ಹಾಕಿ, ಅದರಿಂದ ಸರಿಯಾದ ಉತ್ಪತ್ತಿಯಾಗಿಲ್ಲ, ಹಣದ ಉಬ್ಬರ ಹೆಚ್ಚಾಗುತ್ತಿದೆ, ಹಾಹಾಕಾರ ಉಂಟಾಗಿದೆ ಎಂದು. ಒಂದು ಅಂಶ ಸರಿ, ಏಕೆಂದರೆ ತುಂಗಭದ್ರ ಅಂಥ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ಕೋಟ್ಯಾನುಕೋಟಿಗಳ ರೂಪಾಯಿ ಹಾಕಿ ಇವತ್ತಿಗೂ ಪ್ರತಿಫಲ ಸಿಕ್ಕಿಲ್ಲ. 60 ಸಾವಿರ ಎಕರೆ ಪಕ್ಕದಲ್ಲಿಯೇ ನೀರು ಹೋಗಿ ಅದನ್ನು ಬೆಳೆಗಳಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಾ ಇಲ್ಲ. ಶ್ರೀ ಗಾಂಜಿ ವೀರಪ್ಪನವರು ಹೇಳಿದರು. 1956ನೇ ಇಸವಿಯಿಂದ ಕರ್ಣಾಟಕವಾದಮೇಲೆ ಮೇಜರ್ ಪ್ರಾಜೆಕ್ಟುಗಳನ್ನು ತಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನಪಟ್ಟಿದ್ದಾರೆಂದು, ಯಾವಯಾವ ಪ್ರಾಜೆಕ್ಟು ತೆಗೆದುಕೊಂಡಿದ್ದಾರೆ? ಮಲಪ್ರಭ ತೆಗೆದುಕೊಂಡು ಎಷ್ಟು ವರ್ಷವಾಯಿತು, ಎಷ್ಟು ಕೆಲಸ ಮಾಡಿದ್ದಾರೆ? ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆಯೆಂದು ಯಾರೋ ಒಬ್ಬ ಮಂತ್ರಿಗಳು ಉತ್ತರ ಕೊಟ್ಟರು. ಇಂಥ ದೊಡ್ಡದೊಡ್ಡ ಸುಳ್ಳುಗಳನ್ನು ಪುಸ್ತಕಗಳಲ್ಲಿ ಹೇಳಿ ಪ್ರಚಾರ ಮಾಡುತ್ತಿದ್ದಾರೆ. ಸುಳ್ಳಿನ ಮುಸುಕನ್ನು ಎಳೆದರೆ ಸತ್ಯವನ್ನು ಮುಚ್ಚಿಡುವುದಕ್ಕೆ ಸಾಧ್ಯವೆ ಎಂದು ತಮ್ಮನ್ನು ಪ್ರಶ್ನಿಸಬೇಕಾಗಿದೆ. ಈ ಸಂದರ್ಭದಲ್ಲಿ ಈ ಪರಿಸ್ಥಿತಿ ಇವತ್ತು ಬಂದಿದ್ದು ಅಲ್ಲ. ಆದಿಯಿಂದಲೂ ಪ್ರತ್ಯೇಕವಾಗಿ ಮನುಷ್ಯನಿಗೆ ಅನೇಕ ತೊಂದರೆಗಳು ಬಂದಿವೆ. ಇವತ್ತು ನಾಗರಿಕ ಪ್ರಪಂಚದಲ್ಲಿ ಇದ್ದೇವೆ. ಈ ಪರಿಸ್ಥಿತಿಯನ್ನು, ಪ್ರಕೃತಿಯನ್ನು, ಆದಷ್ಟು ಗೆದ್ದಿದ್ದೇವೆ. ಒಂದು ವಿಧವಾದ ಸರಕಾರ ಇದೆ. ಯೋಜನೆಗಳನ್ನು ಹಾಕಿಕೊಂಡು ಮೂರನೆ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಇದ್ದೇವೆ. ದೊಡ್ಡದೊಡ್ಡ ನೀರಾವರಿಗಳಿಗೆ ಹಣ ಹಾಕಿದಂತೆ ಸಣ್ಣ ನೀರಾವರಿಗೂ ಹಾಕುವುದು ಮುಖ್ಯವೆಂದು ಸಣ್ಣ ನೀರಾವರಿಗೆ ಒಬ್ಬ ಮಂತ್ರಿಯನ್ನೂ ನೇಮಕ ಮಾಡಿದ್ದಾರೆ. ಅವರ ಮೂಲಕ ಟಾಂಟಾಂ ಹೊಡೆಯುತ್ತಿದ್ದಾರೆ. 48 ಕೋಟಿ ರೂಪಾಯಿ ಅಂದಾಜು ನಮ್ಮ ಕೈಲಿ ಇದೆ ಅಂತ. ಮಾನ್ಯ ಸದಸ್ಯರು ಕೆಲವರು ತಿಳಿಸಿದರು. ನೀರಾವರಿ ಪಂಪುಸೆಟ್ಟುಗಳನ್ನು ಒದಗಿಸಿದ್ದರೆ, ವಿದ್ಯುಚ್ಛಕ್ತಿ ಕೊಡುವುದಿಲ್ಲ. ವಿದ್ಯುಚ್ಛಕ್ತಿ ಇದ್ದರೆ ಪಂಪುಸೆಟ್ಟು ಕೊಡುವುದಿಲ್ಲ ಎಂದು ಎರಡು ಕೋಟಿ ರೂಪಾಯಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಕೊಟ್ಟರು. ಏನು ಕೆಲಸ ನಡೆದಿದೆ ? ಎಷ್ಟು ಕೆಟ್ಟರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ನೋಡಿ. ಯಾವರೀತಿಯಲ್ಲಿ ನೀವು ಬಾವಿ ತೋಡಿಸುತ್ತೀರ, ಎಷ್ಟು ಆಹಾರ ಹೆಚ್ಚಿಗೆ ಬೆಳೆಯುತ್ತೀರಾ ನಮ್ಮ ಕೈಗೆ ಸರಕಾರ ಬಂದಿದೆ ಎಂದು ಒಬ್ಬ ಕಾಂಗ್ರೆಸ್ ಸದಸ್ಯರು ಹೇಳಿದರು. ಹೌದು, ನಿಮ್ಮ ಕೈಗೆ ಸಿಕ್ಕಿ, ದೇಶ ಹತವಾಗುತ್ತಾ ಇದೆ, ಮರಣಹೋಮ, ದೇಶದ ಆಹುತಿ ನೋಡಬೇಕಾಗಿದೆ.

ಮಾನ್ಯ ಮುಖ್ಯ ಮಂತ್ರಿಗಳು ಯಾರನ್ನು ರಾಜ್ಯದಲ್ಲಿ ಬರಗಾಲದಿಂದ ಅನ್ನವಿಲ್ಲದೆ ಸಾಯುವುದಕ್ಕೆ ಬಿಡುವುದಿಲ್ಲ. ಎಂದು ಹೇಳಿದ್ದಾರೆ. ಸಾಯುವುದು ಯಾವುದಾದರೂ ನೆಪದಿಂದಲೇ, ನೇಣು ಹಾಕಿಕೊಂಡು ಸಾಯುತ್ತಾರೆ, ಇಲ್ಲ ಬಾವಿಗೋ, ಕೆರೆಗೋ ಬಿದ್ದು ಸಾಯುತ್ತಾರೆ, ಇಲ್ಲದೆಹೋದರೆ ಜ್ವರ ಪೀಡಿತರಾಗಿ ಸಾಯುತ್ತಾರೆ. ಪೋಸ್ಟ್‌ಮಾರ್ಟಮ್ಮಿನಲ್ಲಿ ಉಪವಾಸದಿಂದ ಸತ್ತ ಅಂತ ಹೇಳುವುದಕ್ಕಾಗುವುದಿಲ್ಲ, ಏಕೆಂದರೆ 2-3 ದಿನದ ಹಿಂದೆ ತಿಂದ ಸೊಪ್ಪು ಸದೆ ಹೊಟ್ಟೆಯಲ್ಲಿರುತ್ತದೆ. ಈ ಪರಿಸ್ಥಿತಿಯನ್ನು ತಾವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಇವತ್ತು ಆಹಾರ ಧಾನ್ಯವನ್ನು ವ್ಯಾಪಾರಸ್ಥರಿಂದ ಸರಕಾರದ ಹತೋಟಿಗೆ ತೆಗೆದುಕೊಳ್ಳಬೇಕಾಗುತ್ತದೆ. ಪೂರ್ತಿ ವ್ಯಾಪಾರ

ಮಾಡದೆ ಇದ್ದರೂ, ಸರ್ಕಾರದ ಹತೋಟಿ ಈ ವ್ಯಾಪಾರದ ಮೇಲೆ ಇರಬೇಕು. ಓವರ್ ಸ್ಟಾಕ್ ಯಾವತ್ತೂ ಇಟ್ಟುಕೊಂಡಿರಬೇಕು. ಹಿಂದೆ ಪುಣ್ಯಾತ್ಮರು ದೊಡ್ಡದೊಡ್ಡ ರೈತರು ಜೋಳ, ರಾಗಿ ಸ್ಟಾಕ್ ಇಟ್ಟುಕೊಂಡು, ಇಂಥ ದುಷ್ಕಾಲದಲ್ಲಿ ಸುತ್ತಮುತ್ತಲ ಪ್ರದೇಶಕ್ಕೆ ಕಳುಹಿಸುತ್ತಿದ್ದರು. ಈಗ ಲಾಭದ ಆಸೆಗೇ ಅಥವ ತಮ್ಮ ತೊಂದರೆಗಳಿಗೇ, ವಾರಾಟ ಮಾಡಿಬಿಡುತ್ತಾರೆ. ನಿಮ್ಮ ಹತ್ತಿರ ಓವರ್‌ಸ್ಟಾಕ್ ಎಷ್ಟಿದೆ, ಎಷ್ಟು ಧಾನ್ಯ ಸಂಗ್ರಹಿಸಿ ಗೋಡೌನಿನಲ್ಲಿ ಇಟ್ಟುಕೊಂಡಿದ್ದೀರ ಅನ್ನುವುದು ನಮಗೆ ಬೇಕು. ಅದು ಇಲ್ಲದೆ ಹೋದರೆ, ನೀವು ವ್ಯಾಪಾರಸ್ಥರಬಳಿಗೆ ಹೋದರೆ, ನಿಮ್ಮನ್ನು ಖಾಲಿ ಚೆಂಡು ಆಡಿಸಿದಹಾಗೆ ಆಡಿಸಿಬಿಡುತ್ತಾರೆ. ನೀವು ಅವರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಅವರ ದಯೆಗೆ ವಿನಂತಿ ಮಾಡಿಕೊಳ್ಳುತ್ತೇವೆಂದರೆ ಬಹಳ ತಪ್ಪಾಗುತ್ತದೆ. ಅವರು ಯಾವತ್ತೂ ದಯಾದಾಕ್ಷಿಣ್ಯಕ್ಕೆ ಬಗ್ಗುವರಲ್ಲ. ಕಲ್ಕತ್ತೆಯಲ್ಲಾದ ಪ್ರಕರಣಗಳು ಇದನ್ನು ಬಹಳ ಚೆನ್ನಾಗಿ ಎತ್ತಿ ತೋರಿಸುತ್ತದೆ; ಗೋಡೌನ್‌ಗಳ ಪಕ್ಕದಲ್ಲಿಯೇ ಹೆಣಗಳ ರಾಶಿಗಳನ್ನು ನೋಡಿದ್ದಾರೆ. ಆದ್ದರಿಂದ ತಾವು ಇದನ್ನು ಸಂಪೂರ್ಣವಾಗಿ ಹತೋಟಿಗೆ ತರಬೇಕು. ರೈಸ್‌ಮಿಲ್ಲುಗಳನ್ನು ಹೇಗೆ ವಶಪಡಿಸಿ ಕೊಳ್ಳುತ್ತೀರ. ಅಥವ ಅವುಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುತ್ತೀರ ಅನ್ನುವುದರಬಗ್ಗೆ ತಮ್ಮ ನೀತಿಯನ್ನು ಈ ಸಭೆಗೆ ತಿಳಿಸಬೇಕಾಗಿದೆ.

ಇವತ್ತು ಸಹಕಾರ ಸಂಸ್ಥೆಗಳ ಮೂಲಕ ಎಲ್ಲಾ ಹಳ್ಳಿಗಳಿಗೂ ಸಾಕಷ್ಟು ಆಹಾರವನ್ನು ಒದಗಿಸಬೇಕಾಗುತ್ತದೆ. ಅಗ್ಗ ದರದ ಅಂಗಡಿಗಳನ್ನು ತೆರೆಯಬೇಕು. ಹುಲ್ಲನ್ನೂ, ಮೇವನ್ನೂ ದನಗಳಿಗೆ ಸರಕಾರವೇ ಒದಗಿಸಬೇಕು, ಅಂತ ಹೇಳುತ್ತೇನೆ. ಪರಿಸ್ಥಿತಿ ಈಗ ಮಳೆ ಬಂದ ತಕ್ಷಣ ಸುಧಾರಿಸುವುದಿಲ್ಲ. ಇದು ಕಾಲಕ್ರಮೇಣ, ಪರಂಪರೆಯಾಗಿ ಬಂದಂಥ ಒಂದು ದೊಡ್ಡ ಪೆಟ್ಟು. ನಮ್ಮಲ್ಲಿ ಶೇಕಡ 99 ಜನ ಕಡುಬಡವರು; ಅವರಿಗೆ ತಿನ್ನುವುದಕ್ಕೆ ಸಿಗುತ್ತಿಲ್ಲ. ಅಂಥ ಜನರನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೂಲಿಗಾರರಿಗೆ ನೇರವಾಗಿ ಅಕ್ಕಿ ಅಥವ ಗೋಧಿಯನ್ನು ಸರಬರಾಜು ಮಾಡಬೇಕು. ಸರಕಾರದವರು ಎಲ್ಲ ಕಡೆಗಳಲ್ಲಿಯೂ ಉದ್ಯೋಗವನ್ನು ಒದಗಿಸಬೇಕು. ಅವರು ಏನಾದರೂ ಮಾಡಿ ತಮ್ಮ ಜೀವನವನ್ನು ಕಾಪಾಡಿಕೊಂಡು ಬದುಕಿಕೊಳ್ಳುವುದಕ್ಕೆ ಸಹಾಯ ಮಾಡು ವಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಕೇವಲ ವ್ಯಾಪಾರಸ್ಥರಿಗೆ ವಿನಂತಿ ಮಾಡಿ ಕೊಳ್ಳುವುದರಿಂದ ಅಥವ ಅರೆಮನಸ್ಸಿನಿಂದ ಹೆಜ್ಜೆ ಇಡುವುದರಿಂದ ಏನೂ ಕೆಲಸವಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Message from the Legislative Council.

Mr. SPEAKER.—Before I call upon the other members to speak I want to inform the House that I have received, and communication that the Bangalore University Bill, 1964, as passed by the Legislative Assembly during the current session and transmitted to the Legislative Council, has been passed by the Legislative Council without any amendment.

SCARCITY CONDITIONS PREVAILING IN CERTAIN AREAS OF THE STATE.

(Motion to consider—Debate Contd.)

ಶ್ರೀಮತಿ ಬಸವರಾಜೇಶ್ವರಿ (ಮಾನವಿ).—ಸ್ವಾಮಿ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಮುಂದಿರತಕ್ಕಂಥ ಸ್ಕೇರ್ಸಿಟಿ ವಿಚಾರವಾಗಿ ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರ ಬೇಕೆಂದು ಹೇಳಿ ಅಪೇಕ್ಷೆ ಪಟ್ಟಿದ್ದೇನೆ.

ಕೆಲವು ಕಡೆ ಸರಿಯಾಗಿ ಮಳೆ ಬರದೇನೆ ಉಳುಮೆಯಾಗಿಲ್ಲ. ಇನ್ನು ಮಳೆ ಬಂದರೂ ಕೂಡ ಸರಿಯಾದ ಬೆಳೆ ಆಗುವ ಸಂಭವವಿಲ್ಲ. ಆದ್ದರಿಂದ ಇವತ್ತಿನ ದಿವಸ ನಮ್ಮ ದೇಶದಲ್ಲಿ ಇಂಥ ಒಂದು ಅಭಾವ ಪರಿಸ್ಥಿತಿ ಬಂದಿದೆ. ಮುಂಗಾರು ಮಳೆ ಬಹಳ ಲೇಟ್ ಆಗಿ ಬಂದಿದೆ, ಮಳೆಗಳು ಆದರೂ ಕೂಡ ಜನರಿಗೆ ಬಹಳ ತ್ರಾಸು ಆಗಿದೆ.